ಜನಶಕ್ತಿ



ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 34
ಆಗಸ್ಟ್ 19, 2012


ಪುಟ 16 ರೂ. 5/-







ಶುರುವಾಗಿದೆ ಚುನಾವಣಾ ತಾಲೀಮು



ಬಿಜೆಪಿಯ ಕಲ್ಪನಾ ವಿಹಾರ

ಹೈದ್ರಾಬಾದ್ ಕರ್ನಾಟಕ ಸ್ಥಾನಮಾನ : ನ್ಯಾಯದ ನಿರೀಕ್ಷೆಯಲ್ಲಿ ಜನ

'ಬಾಡಿಗೆ ಎತ್ತು'ಗಳು ಮತ್ತು ಶಿಕ್ಷಣದ 'ಭಾರತೀಕರಣ'

ಧಾರವಾಡ ಜಿಲ್ಲೆ : ಬರಗಾಲಕ್ಕೆ ಬೆದರಿದ ಜನತೆ



'ಗೋದಾಮು-ಉಗ್ರಾಣಗಳ ಬಾಗಿಲುಗಳು ಮುರಿದು ಬಿದ್ದಾವು.....'

ರಾಜಧಾನಿಯಲ್ಲಿ ಜನತೆಯ ಎಚ್ಚರಿಕೆ

"ಫೋರ್ತ್ ಎಸ್ಟೇಟ್‌ಗೂ ರಿಯಲ್ ಎಸ್ಟೇಟ್‌ಗೂ ವ್ಯತ್ಯಾಸವೇ ಗೊತ್ತಾಗುತ್ತಿಲ್ಲ".

"...ಫೋರ್ತ್ ಎಸ್ಟೇಟ್‌ಗೂ (ಅಂದರೆ ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭ ಎನ್ನಲಾಗುವ ಮಾಧ್ಯಮ ಕ್ಷೇತ್ರ) ರಿಯಲ್ ಎಸ್ಟೇಟ್(ಮನೆ, ನಿವೇಶನ ವ್ಯವಹಾರ)ಗೂ ವ್ಯತ್ಯಾಸವೇ ಗೊತ್ತಾಗುತ್ತಿಲ್ಲ. ಅಂತಹ ಪರಿಸ್ಥಿತಿಗೆ ಮಾಧ್ಯಮ ಲೋಕ ತಲುಪಿದೆ..."

ರೇಮನ್ ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ಪಿ. ಸಾಯಿನಾಥ್ ವಿಷಾದಿಸಿದರು.

ಅದು ಜುಲೈ 1, 2012. ಭಾನುವಾರ. ಬೆಳಿಗ್ಗೆ ಬೆಳಿಗ್ಗೆಯೇ ಗಾಂಧೀ ಭವನದ ಖುರ್ಚಿಗಳೆಲ್ಲ ಭರ್ತಿ. ಅಭಿನವ, ಅವಧಿ ಹಾಗೂ ವಡ್ಡರ್ಸೆ ರಘುರಾಮ ಶೆಟ್ಟಿ ಪ್ರತಿಷ್ಠಾನ ಎಲ್ಲ ಸೇರಿ 'ನಮ್ಮೊಂದಿಗೆ ಸಾಯಿನಾಥ್' ವ್ಯವಸ್ಥೆ ಮಾಡಿದ್ದರು.

ಕೃಷಿ ಬಿಕ್ಕಟ್ಟಿನ ಸುಡುಸುಡು ಬೆಂಕಿಯಲ್ಲಿ ಹುಳುಹುಪ್ಪಟೆಗಳಿಗಿಂತ ಕಡೆಯಾಗಿ ಆತ್ಮಹತ್ಯೆಗೆ ಶರಣಾಗಿ ಸಾಯುತ್ತಿರುವ ಸಾವಿರ ಸಾವಿರ ರೈತರ ಮನೆಯಂಗಳಕ್ಕೆ ಸಾಗಿ ಹೋಗಿ ಅವರ ಮನೆಯ ಜಗಲಿಯಲ್ಲಿ ಕೂತು ಬದುಕಿ ಉಳಿದವರ ನಿಟ್ಟುಸಿರ ಆಳವನ್ನು ದಾಖಲಿಸದ ಟಿ.ವಿ. ಕ್ಯಾಮಾರಾ ಕಣ್ಣುಗಳ ಬಗೆಗೆ, ಮ್ಯಾನ್ ಹೋಲ್ ಎಂಬ ಮಲದ ಗುಂಡಿಗಳೊಳಗೆ ಇಳಿದು ಹೇಳುವವರು ಕೇಳುವವರು ಇಲ್ಲದೇ ಹೆಣವಾಗಿ ಹೋದ ದಲಿತರ ಗುಡಿಸಲು ಬಳಿ ಸಾರದ ಪತ್ರಕರ್ತರ ಲೇಖನಿಯ ಕುರಿತು ಸಾಯಿನಾಥರ ಅಂತರಂಗದ ಸಾತ್ವಿಕ ಆಕ್ರೋಶ ಹೊರಕ್ಕೆ ಹೊಮ್ಮಿತು.

"ವರದಿಗಾರರಿಗೆ ಫ್ಯಾಷನ್ ಮತ್ತಿತರ ಕ್ಷೇತ್ರಗಳ ಕುರಿತ ಸುದ್ದಿ ತರಲು 'ಬೀಟ್' ನೀಡಲಾಗುತ್ತವೆ. ಆದರೆ, ಕಳೆದ ಇಪ್ಪತ್ತು ವರ್ಷದಲ್ಲಿ ಯಾವ ಮಾಧ್ಯಮ ಸಂಸ್ಥೆಯೂ ಕಾರ್ಮಿಕರ ಬವಣೆ ಕುರಿತು ವರದಿಗೆ ಪೂರ್ಣಾವಧಿ ವರದಿಗಾರರನ್ನು ನೇಮಿಸಿಲ್ಲ. ಗ್ರಾಮೀಣ ಭಾಗದ ಸಂಕಷ್ಟಗಳು, ರೈತರು, ಕಾರ್ಮಿಕರ ಕುರಿತ ವರದಿಗಳು ಹೆಚ್ಚು ಸಂಖ್ಯೆಯಲ್ಲಿ ಬರುತ್ತಿಲ್ಲ. ಇಂತಹ ವಿಚಾರಗಳಿಗೆ ನೀಡುವ ಪ್ರಾಮುಖ್ಯತೆ ಹಾಗೂ ಜಾಗ ಕೂಡ ಕಡಿಮೆಯಾಗುತ್ತಿದೆ"

ಬೆಂಳೂರಿನಿಂದ ಒಂದೇ ಗಂಟೆ ಪ್ರಯಾಣದ ದೂರದಲ್ಲಿರುವ ಮಂಡ್ಯ ಜಿಲ್ಲೆಯ ಗೌರಮ್ಮ ಎಂಬ ಕೃಷಿ ಕುಟುಂಬದ ವಿಧವೆ ಲಕ್ಷ್ಮಮ್ಮನ ಬಾಳಿನ ಯಾತನಾಮಯ ಬದುಕು ಅಲ್ಲಿ ಬಿಚ್ಚಿಕೊಂಡಿತು. ಕೃಷಿ ಕೈಕೊಟ್ಟ ಹಿನ್ನೆಲೆಯಲ್ಲಿ ಗಂಡನ ಆತ್ಮಹತ್ಯೆ..... ನಂತರ ರೇಷನ್ ವ್ಯವಸ್ಥೆ ಅಡಿಯಲ್ಲಿ ನೀಡುವ ಅಕ್ಕಿಯನ್ನು ನಂಬಿಕೊಂಡ ಬದುಕು ಯೂನಿಟ್ ಪದ್ಧತಿ ತಿಂಗಳಿಗೆ ಒಬ್ಬರಿಗೆ 4 ಕೆ.ಜಿ. ...ದಿನಕ್ಕೆ 133 ಗ್ರಾಂ. ಒಂದು ಹೊತ್ತಿಗೆ 44 ಗ್ರಾಂ...... ಅದೇ ಸಮಯದಲ್ಲಿ ಬೆಂಗಳೂರಿನ ಪರಪ್ಪನ ಅಗ್ರಹಾರದ ಜೈಲಿನಲ್ಲಿ ಅಪರಾಧ ಸಾಬೀತಾಗಿ ಶಿಕ್ಷೆ ಅನುಭಿಸುವ ಖೈದಿಗೆ ದಿನಕ್ಕೆ 750 ಗ್ರಾಂ. ಆಹಾರ ....

......ಮುಂಬಯಿಯಲ್ಲಿ ನಡೆದ ಲ್ಯಾಕ್ಮೆ ಫ್ಯಾಶನ್ ವೀಕ್ ಕುರಿತು ವರದಿ ಮಾಡಲು 512 ಪತ್ರಕರ್ತರನ್ನು ಕಳುಹಿಸಲಾಗಿತ್ತು. ವ್ಯಂಗ್ಯವೆಂದರೆ ಹತ್ತಿ ಬಟ್ಟೆಗಳ ಬಳಕೆಗೆ ಪ್ರೋತ್ಸಾಹದ ಹೆಸರಿನಲ್ಲಿ ಆ ಫ್ಯಾಷನ್ ಷೋ ನಡೆಯುತ್ತಿತ್ತು. ಆದರೆ, ಆ ಸಮಯದಲ್ಲಿ ಅದೇ ರಾಜ್ಯದಲ್ಲಿ ಹತ್ತಿ ಬೆಳೆದು ಸಾವಿರಾರು ರೈತರು ಆತ್ಮಹತ್ಯೆಗೆ ಶರಣಾದ ವಿದರ್ಭದಲ್ಲಿ ರೈತರ ಆತ್ಮಹತ್ಯೆಗಳ ಕುರಿತು ವರದಿ ಮಾಡಲು ಇದ್ದದ್ದು ಕೇವಲ ಆರು ಪತ್ರಕರ್ತರು ಮಾತ್ರ....

ಪಿ. ಸಾಯಿನಾಥ್ ಉದ್ವಿಗ್ನರಾಗಿದ್ದಾರಾ ? ಇಲ್ಲ... ಅವರ ಧ್ವನಿ ಧೃಡವಾಗಿದೆ. ಅದು ಅಂತರಾಳದ ನೈಜ ಅಭಿವ್ಯಕ್ತಿ. ಸಹಜ ಅಭಿವ್ಯಕ್ತಿ. ನಿಜವಾದ ಸಂಕಟದಿಂದ ಒಡಮೂಡಿದ



ಮಾತುಗಳು. ನಾಟಕೀಯತೆ...ಕೃತಕ ಡಾಂಭಿಕತೆಗೆ ಅವಕಾಶವೇ ಇಲ್ಲ.

ಪಿ. ಸಾಯಿನಾಥ್ ಅವರ ಖ್ಯಾತ 'Every Body Loves a Good Drought' ಕೃತಿಯು 'ಬರ ಅಂದ್ರೆ ಎಲ್ಲರಿಗೂ ಇಷ್ಟ' ಆಗಿ ಕನ್ನಡ ಪುಸ್ತಕ ಲೋಕಕ್ಕೆ ಸೇರಿತು.

ಕೃತಿ ಬಿಡುಗಡೆ ಮಾಡಿ 'ಕೌಂಟರ್ ಮೀಡಿಯಾ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತಾಡಿದ ಅವರು,


ಮ್ಯಾಗ್ಸೆಸೆ ಪ್ರಶಸ್ತಿ ಜತೆ ಬಂದ ಹಣದಲ್ಲಿ ಸ್ಥಾಪಿಸಿರುವ 'ಕೌಂಟರ್ ಮೀಡಿಯಾ' ಪ್ರಶಸ್ತಿಗೆ ಆಯ್ಕೆಯಾದ ಟಿ.ಕೆ. ದಯಾನಂದ ಹಾಗೂ ವಿ. ಗಾಯತ್ರಿ ಅವರನ್ನು ಅಭಿನಂದಿಸಿ, ಪ್ರತಿ ವರ್ಷ ಪ್ರಾದೇಶಿಕ ಭಾಷೆಗಳಲ್ಲಿ ನಿರ್ಲಕ್ಷಿತ ಸಂಗತಿಯನ್ನು ಮುನ್ನೆಲೆಗೆ ತರುವ ಪತ್ರಕರ್ತರನ್ನು ಪ್ರೋತ್ಸಾಹಿಸಲು ಈ ಪ್ರಶಸ್ತಿ ಮೀಸಲಾಗಿದೆ. ಗ್ರಾಮೀಣ ಹಿನ್ನೆಲೆಯ ಪತ್ರಕರ್ತೆಯರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಇಂಥವರನ್ನು ಪ್ರೋತ್ಸಾಹಿಸಬೇಕಿದೆ. ಎಂದರು. ಎಚ್ಚರಿಕೆಯ ಗಂಟೆ




ಕಳೆದ ವಾರ ಪಿ.ಸಾಯಿನಾಥರ ವಿಚಾರಗಳ ಬಗೆಗೆ ಸಂಧ್ಯಾ ರಾಣಿಯವರ ಬರಹವನ್ನು ಓದಿದ್ದೀರಿ. 'ಆ' ಸಮಾರಂಭದ ಬಗೆಗೆ ಹೇಳುವುದು ಅಗತ್ಯ ಇದೆ ಅನಿಸಿದ್ದರಿಂದ ಮತ್ತೊಂದು ವರದಿ. ಸಣ್ಣ ಪತ್ರಿಕೆಗಳು ಜೀವ ಉಳಿಸಿಕೊಂಡಿರಲು ಎಷ್ಟೊಂದು ಕಷ್ಟಗಳು.. ತೊಂದರೆಗಳು ಇವೆ. ತೊಂದರೆ ಇವೆ ಎಂದು ಅವು ಕೆಲಸ ನಿಲ್ಲಿಸಲಾಗದು. 'ಕೌಂಟರ್ ಮೀಡಿಯಾ' (ಪ್ರತಿ ಮಾಧ್ಯಮ)ಪ್ರಶಸ್ತಿ ಸ್ಥಾಪಿಸಿದ ಸಾಯಿನಾಥರ ಆಶಯವಾದರೂ ಅದೇ ಅಲ್ಲವೇ? ಕೋಟಿ ಕೋಟಿ ಬಂಡವಾಳದ ದೊಡ್ಡ ದೊಡ್ಡ ಟಿ.ವಿ. ಚಾನಲ್‌ಗಳು, ಪತ್ರಿಕೆಗಳಿಗೆ ಹೇಳುವುದಕ್ಕೆ ಸಾಧ್ಯವಾಗದ್ದನ್ನು ಹೇಳುವುದೇ ಅಲ್ಲವೇ? ತಡವಾದರೂ ಅಗತ್ಯವಾದ ಒಂದು ವರದಿ. ಓದಿ.

ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಮಾತನಾಡಿ, ಮಾಧ್ಯಮಗಳು ಜನಾಭಿಪ್ರಾಯ ಮೂಡಿಸಿದ ದೊಡ್ಡ ಶಕ್ತಿಗಳಾಗಿವೆ. ಪತ್ರಿಕೋದ್ಯಮದಲ್ಲಿ ಎಚ್ಚರಿಕೆಯ ಗಂಟೆ ಬಾರಿಸಿರುವ ಸಾಯಿನಾಥರು ಇಡೀ ಜಗತ್ತಿಗೆ 'ವಾಲ್‌ರೈಟ್' ಆಗಿ ಕಂಗೊಳಿಸುತ್ತಿದ್ದಾರೆ ಎಂದರು.

ಸಾಹಿತ್ಯವೂ ಒಂದು ಅಭಿವ್ಯಕ್ತಿ ಮಾಧ್ಯಮ. ಶೂನ್ಯದಿಂದ ಏನನ್ನೂ ಸೃಷ್ಟಿಮಾಡಲು ಸಾಧ್ಯವಿಲ್ಲ, ನೋಡದೆ, ಕೇಳದೆ ಇರುವುದನ್ನು ಸೃಷ್ಟಿಸಿದರೆ ಅದು ಕಸುವು ಕಳೆದುಕೊಳ್ಳುತ್ತದೆ. ಸಾಹಿತಿ ಜನಜೀವನದ ನಡುವಿನಿಂದ ಇದ್ದು ಬರೆಯಬೇಕು. ಅಂಥ ಬರಹ ಬೆಳಕು ತೋರಿಸುತ್ತದೆ. ಕ್ರಿಯಾಶೀಲತೆಯ ಕಸರತ್ತಲ್ಲಿ ಅನೇಕ ಬರಹಗಾರರು ಬೆಂಕಿ ಸುರಿಸಿದ್ದಾರೆ. ಜನರ ನಡುವೆ ಅಸಮಾನತೆಯ ಗೋಡೆಗಳನ್ನು ಸೃಷ್ಟಿ ಮಾಡಿದ್ದಾರೆ. ಸಮಾಜಕ್ಕೆ ಇಂದು ಬೆಳಕು ನೀಡುವ ಸಾಹಿತ್ಯ ಬೇಕಾಗಿದೆ. ಕತ್ತಲಲ್ಲಿರುವ ಜನರ ಬದುಕನ್ನು ಬೆಳಕಿಗೆ ತಂದದ್ದು ಸಾಯಿನಾಥ್" ಎಂದು ಮೆಚ್ಚುಗೆ ಸೂಚಿಸಿದರು.



ಪ್ರಶಸ್ತಿ ಪ್ರದಾನ ಮಾಡಿದ ಸಾಹಿತಿ ದೇವನೂರು ಮಹಾದೇವ, ಪತ್ರಕರ್ತರು ಪರಿಸ್ಥಿತಿಗಿಂತ ಪ್ರಕ್ರಿಯೆಯ ಭಾಗವಾಗಿ ಕೆಲಸ ಮಾಡಬೇಕು. ಪರಿಸ್ಥಿತಿಗಳು ಹೀನಾಯವಾಗಿದ್ದರೂ ಪ್ರಕ್ರಿಯೆಗಳು ಫಲ ನೀಡುತ್ತವೆ ಎಂದರಲ್ಲದೇ ಎಳೆ ಮನಸ್ಸಿನ ಮಕ್ಕಳಲ್ಲಿ ತಾರತಮ್ಯ ಮೂಡಿಸುವ ಪಂಚವರ್ಣ ಶಿಕ್ಷಣ ನೀತಿಗೆ ಸರ್ಕಾರ ಕಡಿವಾಣ ಹಾಕಬೇಕು. ಭಾರತದ ಛಿದ್ರಗೊಂಡ ಸ್ಥಿತಿಯಂತೆ ಮಕ್ಕಳ ಕಲಿಕೆಯೂ ಛಿದ್ರವಾಗಿದೆ. ಭೇದ ಭಾವ ಇಲ್ಲದೆ ಎಲ್ಲಾ ಮಕ್ಕಳು ಒಂದೇ ಸೂರಿನಡಿಯಲ್ಲಿ ಶಿಕ್ಷಣ ಕಲಿಯುವಂತಾಗಬೇಕು ಎಂದರು. ಸಮಾರಂಭದಲ್ಲಿ ಪತ್ರಕರ್ತ ವಡ್ಡರ್ಸೆ ರಘುರಾಮ ಶೆಟ್ಟಿ ಪ್ರತಿಷ್ಠಾನದ ಸಂಚಾಲಕ ಡಾ. ಕೆ. ಪುಟ್ಟಸ್ವಾಮಿ,



ಪತ್ರಕರ್ತೆ ಪಾರ್ವತಿ ಮೆನನ್ ಕೃತಿ ಅನುವಾದಕ ಜಿ.ಎನ್. ಮೋಹನ್, ಅಭಿನವ ಪ್ರಕಾಶನದ ನ. ರವಿಕುಮಾರ್ ಇದ್ದರು.

ನಮ್ಮ 'ನಾಗರೀಕ ಸಮಾಜ' ನೋಡಲು ಬಯಸದ ಅಷ್ಟಾಗಿ ಮಾತನಾಡಲು ಬಯಸದ ಮಲ ಹೊರುವ ಪದ್ಧತಿಯ ವಿಕಾರ ಮುಖವನ್ನು ಕೆ.ಜಿ.ಎಫ್. ಪಟ್ಟಣದಲ್ಲಿ ಖುದ್ದು ನೇರವಾಗಿ ಸೆರೆ ಹಿಡಿದು 'ನಾಗರೀಕ ಸಮಾಜ'ದ ಮುಂದೆ ಹಿಡಿದ ಟಿ.ಕೆ. ದಯಾನಂದ್ ತಮ್ಮ ಅನುಭವಗಳನ್ನು ಹಂಚಿಕೊಂಡರು, ತಮಗೆ ಸಂದ ಬಹುಮಾನವನ್ನು ಅವರು ತಮ್ಮ ತಂಡಕ್ಕೆ ಅರ್ಪಿಸಿದರು. ರೈತರ ಆತ್ಮಹತ್ಯೆ, ಕೃಷಿ ಬಿಕ್ಕಟ್ಟಿನ ಮೂಲವನ್ನು ಹುಡುಕುತ್ತಾ ಹೊರಟು 'ಆಧುನಿಕತೆ'ಯ ಹೆಸರಿನಲ್ಲಿ ನಮ್ಮ ರೈತರು ಕೈ ಬಿಟ್ಟಿರುವ ಸಾಂಪ್ರದಾಯಿಕ ಬಹುಬೆಳೆ ಪದ್ಧತಿ ಪ್ರಯೋಜನಗಳು, ಜನಪದರ ಸಾಂಪ್ರದಾಯಿಕ ಆಚರಣೆಗಳಲ್ಲಿ ಬೀಜ ಸಂರಕ್ಷಣ ವಿಧಾನಗಳ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸಿದ ವಿ.ಗಾಯಿತ್ರಿ ಈ ವಿಷಯದ ಕುರಿತು ತಮ್ಮದೇ ವಿಶ್ಲೇಷಣೆ ಮಂಡಿಸಿದರು.

ಇದೇ ಸಂದರ್ಭದಲ್ಲಿ ಪಿ. ಸಾಯಿನಾಥ್‌ರವರ 'ನ್ಯೂರೋಸ್ ಗೆಸ್ಟ್' (ದೊರೆ ನ್ಯೂರೋನ ಅತಿಥಿಗಳು) ಸಾಕ್ಷ್ಯ ಚಿತ್ರ ಪ್ರದರ್ಶನಗೊಂಡು ನೆರೆದವರ ಅಂತ:ಸಾಕ್ಷಿಯನ್ನು ಕಲಕಿತು. ಪ್ರಶಸ್ತಿ ಪುರಸ್ಕೃತರಾದ ಇಬ್ಬರೂ ಪತ್ರಕರ್ತರೂ ಯಾವುದೇ ಪತ್ರಿಕೆ, ಚಾನೆಲ್‌ನವರಾಗಿರದೇ 'ಸ್ವತಂತ್ರ' ಪರ್ತಕರ್ತರಾಗಿದ್ದರು ಎಂಬುದನ್ನು, ಗಾಂಧಿಭವನದಲ್ಲಿನ ಕುರ್ಚಿಗಳು ಸಾಲದೇ ಸಾಲುಗಟ್ಟಿ ಕುಳಿತಿದ್ದ, ನಡುಹಾದಿಯಲ್ಲಿ ನೆಲದ ಮೇಲೆ ಕುಳಿತಿದ್ದ ನೂರಾರು ಜನ ಗಮನಿಸಿದರು.

ಯಾಕೆ ಮುಖ್ಯವಾಹಿನಿಯ ಮಾಧ್ಯಮ ಸಂಸ್ಥೆಗಳಿಗೆ ಅಂದರೆ ಪ್ರಮುಖ ಪತ್ರಿಕೆ, ಟಿ.ವಿ. ಚಾನಲ್‌ಗಳಿಗೆ ಇದನ್ನು ಮಾಡಲು ಸಾಧ್ಯವಾಗಲಿಲ್ಲ ಎಂಬ ಪ್ರಶ್ನೆ ಸಹಜವಾಗಿಯೇ ಎದ್ದಿತು. ಅಲ್ಲಿಗೆ 'ಕೌಂಟರ್ ಮೀಡಿಯಾ' ಪ್ರಶಸ್ತಿ ಸ್ಥಾಪನೆಯ ಒಂದು ಮುಖ್ಯ ಉದ್ದೇಶ ಈಡೇರಿತ್ತು.

ಹಿರಿಯರಾದ ನಾಗೇಶ ಹೆಗಡೆ 25 ವರ್ಷಗಳ ಹಿಂದೆ ಜನರ ಅಜೆಂಡಾಗಳನ್ನು ಮಧ್ಯಮಗಳಲ್ಲಿ ಮುಂಚೂಣಿಗೆ ತರಲು ಸ್ನೇಹಿತರೊಂದಿಗೆ ತಾವು ಪಟ್ಟ ಪಾಡುಗಳ ಕುರಿತು ಮಾತನಾಡಿದರು. ಅಮ್ಮು ಜೋಸೆಫ್ ಸಹ ಇದೇ ಧೋರಣೆಯಲ್ಲಿ ದನಿಗೂಡಿಸಿದರು.

ಸಂಪಾದಕೀಯ

ರಾಜ್ಯಾಧ್ಯಕ್ಷರ ನೇಮಕದ ಕಗ್ಗಂಟು

ಬಿಜೆಪಿ ರಾಜ್ಯಾಧ್ಯಕ್ಷರ ನೇಮಕಕ್ಕೆ ಇಷ್ಟೊಂದು ವಿಳಂಬ ಏಕೆ ಎಂಬ ಪ್ರಶ್ನೆ ಪಕ್ಷದ ಒಳಗೂ ಹೊರಗೂ ಚರ್ಚೆಯಾಗುತ್ತಿದೆ. ಅತ್ಯಂತ 'ಶಿಸ್ತಿನ' ಪಕ್ಷ ಎಂದುಕೊಳುತ್ತಿದ್ದ ಬಿಜೆಪಿ ಹೈಕಮಾಂಡ್, ರಾಜ್ಯಕ್ಕೆ ಒಬ್ಬ ಅಧ್ಯಕ್ಷನನ್ನು ನೇಮಕ ಮಾಡಲು ಸಾಧ್ಯವಾಗದಂತಹ ದಯನೀಯ ಸ್ಥಿತಿಯನ್ನು ತಲುಪಿದೆ.

ಹಲವು ನಾಟಕೀಯ ಬೆಳವಣಿಗೆಗಳ ನಂತರ ಜಗದೀಶ್ ಶೆಟ್ಟರ್ ಅವರನ್ನು ಬಿಜೆಪಿ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲಾಯಿತು. ಇದರಿಂದಾಗಿ ಯಡಿಯೂರಪ್ಪನವರಿಗೆ ಸಧ್ಯಕ್ಕೆ ತಾವು ಹೇಳಿದಂತೆ ಕೇಳುವ ಮುಖ್ಯ ಮಂತ್ರಿಯೊಬ್ಬರು ಸಿಕ್ಕಂತಾಯಿತು ಮತ್ತು ಲಿಂಗಾಯತರನ್ನು ಸಮಾಧಾನ ಪಡಿಸಲಾಯಿತು. ಇನ್ನೆರಡು ಪ್ರಮುಖ ಕೋಮುಗಳನ್ನು ಸಮಾಧಾನ ಪಡಿಸುವ ಹೆಸರಿನಲ್ಲಿ ಕೆ.ಎಸ್. ಈಶ್ವರಪ್ಪ ಮತ್ತು ಆರ್. ಅಶೋಕ್ ಅವರನ್ನು ಇಬ್ಬರು ಉಪಮುಖ್ಯಮಂತ್ರಿಗಳಾಗಿ ನೇಮಿಸಲಾಯಿತು. ಇದರಿಂದ ರಾಜ್ಯದಲ್ಲಿ ಕೆಟ್ಟ ಸಂಪ್ರದಾಯವೊಂದನ್ನು ಹುಟ್ಟುಹಾಕಿದಂತಾಯಿತು.

ಮುಖ್ಯಮಂತ್ರಿ ಆಗುವ ಮೊದಲು ಏನೂ ಆಗಿರದ ಸದಾನಂದಗೌಡರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿಯುವ ಹೊತ್ತಿಗೆ ಅವರೊಂದು ಬಣದ ನಾಯಕರಾಗಿ ಹೊರ ಹೊಮ್ಮಿದರು, ತಮ್ಮ ಬಣದ ಈಶ್ವರಪ್ಪನವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಲು ಹೈಕಮಾಂಡ್ ಒಪ್ಪಿದರೆ ಮಾತ್ರ ಶಾಸಕಾಂಗ ಪಕ್ಷದ ಸಭೆಗೆ ಹಾಜರಾಗುವುದಾಗಿ ಸದಾನಂದಗೌಡರ ಬಣ ಪಟ್ಟು ಹಿಡಿಯಿತು. ಬಣಗಳ ಹಗ್ಗ ಜಗ್ಗಾಟದ ಮುಂದೆ ಹೈಕಮಾಂಡಿಗೆ ಕಾಸಿನ ಕಿಮ್ಮತ್ತೂ ಉಳಿಯಲಿಲ್ಲ. ಸದಾನಂದಗೌಡರ ಬಣ ಈಶ್ವರಪ್ಪ ಅವರಿಗೆ ಉಪಮುಖ್ಯಮಂತ್ರಿ ಸ್ಥನ ಕೊಡುವ ಸೂಚನೆ ಸಿಕ್ಕ ನಂತರವಷ್ಟೇ ತನ್ನ ಪಟ್ಟು ಸಡಿಲಿಸಿತು.

ಕೆ.ಎಸ್. ಈಶ್ವರಪ್ಪ ಉಪಮುಖ್ಯಮಂತ್ರಿಯಾಗಿ ಆಯ್ಕೆಯಾಗುತ್ತಿದ್ದಂತೆ ಅವರು ತೆರವು ಮಾಡಲಿರುವ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಮಾಜಿ ಮಂತ್ರಿಗಳಾದ ಯಡಿಯೂರಪ್ಪ ಹಾಗೂ ಸದಾನಂದ ಗೌಡರ ನಡುವೆ ತೀವ್ರ ಪೈಪೋಟಿ ಆರಂಭವಾಯಿತು. ರಾಜ್ಯಾಧ್ಯಕ್ಷರ ಹುದ್ದೆಗೆ ಇಬ್ಬರೂ ಸಮಾನ ಆಕಾಂಕ್ಷಿಗಳು. ಇಬ್ಬರೂ ಬಾರೀ ಲಾಬಿ ನಡೆಸುತ್ತಿದ್ದಾರೆ. ಇಬ್ಬರ ನಡುವೆ ಬಹಿರಂಗ ವಾಕ್ಸಮರ ತೀವ್ರಗೊಂಡಿದೆ ರಾಜ್ಯದ ಜನತೆಗೆ ಅದು ಉಚಿತ ಮನರಂಜನೆಯನ್ನು ಒದಗಿಸುತ್ತಿದೆ.


ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಅಭ್ಯರ್ಥಿಗಳಿಗೆ ಪಕ್ಷದ ಟಿಕೆಟ್ ನೀಡುವುದು ರಾಜ್ಯಾಧ್ಯಕ್ಷರೆ ಆಗಿರುವುದರಿಂದ ಬಿಜೆಪಿಯೊಳಗಿನ ಎರಡು ಪ್ರಮುಖ ಬಣಗಳ ನಡುವೆ ಈ ಪೈಪೋಟಿ ಉಂಟಾಗಿದೆ. ಯಡಿಯೂರಪ್ಪ ಹಿಂದಿರುವ ಪ್ರಬಲ ಕ್ನೋಮಿನ ಶಾಸಕರನ್ನಾಗಲಿ, ಸದಾನಂದಗೌಡರ ಹಿಂದಿರುವ ಇತರ ಹಿಂದುಳಿದ ಸಮುದಾಯಗಳ ಶಾಸಕರನ್ನಾಗಲಿ ಉಪೇಕ್ಷಿಸಿದರೆ ಪಕ್ಷದ ಮೇಲೆ ಆಗಬಹುದಾದ ಪರಿಣಾಮದ ಬಗ್ಗೆ ಹೈಕಮಾಂಡ್ ನಿದ್ದೆಗೆಡುವಂತಾಗಿದೆ. ಇಬ್ಬರನ್ನು ಬಿಟ್ಟು ಬೇರೊಬ್ಬರನ್ನು ಆ ಹುದ್ದೆಗೆ ತರುವ ಯೋಚನೆ ಹೈಕಮಾಂಡ್ ನಡೆಸುತ್ತಿದೆ ಎನ್ನಲಾಗುತ್ತಿದೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅನಂತ ಕುಮಾರ್ ಆ ಹುದ್ದೆಗೆ ಈ ಹಿಂದೆ ಒಬ್ಬ ಪ್ರಬಲ ಆಕಾಂಕ್ಷಿಯಾಗಿದ್ದವರು ಮತ್ತು ಆ ಮೂಲಕ ರಾಜ್ಯದ ಮುಖ್ಯಮಂತ್ರಿ ಯಾಗುವ ಕನಸು ಕಂಡಿದ್ದರು. ಆದರೆ ಬದಲಾದ ಪರಿಸ್ಥಿತಿಯಲ್ಲಿ ಅವರು ಹಿಂದೆ ಸರಿದಿದ್ದಾರೆ ಎನ್ನಲಾಗುತ್ತಿದೆ. ಅದಕ್ಕೆ ಕಾರಣಗಳು ಇಲ್ಲದಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಬಿಜೆಪಿ ರಾಜ್ಯದಲ್ಲಿ ತನ್ನ ವರ್ಚಸ್ಸನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ, ಗಣಿ ಹಗರಣಗಳಿಂದ ಹಿಡಿದು ಸದನದಲ್ಲಿ ಬ್ಲೂ ಫಿಲಂ ನೋಡುತ್ತಿದ ಶಾಸಕರ ದುರ್ವತನೆಯ ವರೆಗಿನ ಪ್ರಕರಣಗಳು ಬಿಜೆಪಿ ಸರ್ಕಾರದ ಮಾನ ಮರ್ಯಾದೆಯನ್ನು ಬೀದಿಯಲ್ಲಿ ಹರಾಜು ಹಾಕಿದವು. ಹಿಂದೆಂದೂ ಬಿಜೆಪಿ ಸರ್ಕಾರದಲ್ಲಿ ಆಗಿರುವಂತೆ ಮುಖ್ಯಮಂತ್ರಿ ಆದಿಯಾಗಿ ಇಷ್ಟೊಂದು ಮಂತ್ರಿಗಳು ಜೈಲು ಕಂಡಿರಲಿಲ್ಲ. ಹಗರಣಗಳ ಕಾರಣಕ್ಕೆ ಸ್ಥಾನ ಕಳೆದುಕೊಂಡಿರಲಿಲ್ಲ. ಭಿನ್ನಮತೀಯ ಚಟುವಟಿಕೆಗಳಿಂದ ಬೇರೆ ಯಾವುದೇ ರಾಜಕೀಯ ಪಕ್ಷ ಇಷ್ಟೊಂದು ಜರ್ಜರಿತವಾಗಿರಲಿಲ್ಲ. ಬಿಜೆಪಿಗೆ ಒಮ್ಮೆ ಅಧಿಕಾರ ಕೊಟ್ಟು ನೋಡಬೇಕೆಂದು ಬಯಸಿದ ಮತದಾರರು ಇಂದು ಯಾರಾದರೂ ಬಿಜೆಪಿಗೆ ಅಧಿಕಾರ ಕೊಟ್ಟೆವೋ ಎಂದು ಹಳಹಳಿಸುವಂತಾಗಿದೆ ಈ ಪರಿಸ್ಥಿತಿಯಲ್ಲಿ ಬಿಜೆಪಿಗೆ ಮುಂದಿನ ಚುನಾವಣೆಯಲ್ಲಿ ಗಣನೀಯ ಪ್ರಮಾಣದಲ್ಲಿ ಧಕ್ಕೆ ಆಗುವುದು ಖಚಿತವಾಗಿದೆ. ಇಂಥ ಸನ್ನಿವೇಶದಲ್ಲಿ ರಾಜ್ಯಾಧ್ಯಕ್ಷ ಸ್ಥಾನ ವಹಿಸಿಕೊಂಡು, ಚುನಾವಣಾ ಫಲಿತಾಂಶದ ಹೊಣೆ ಹೊರಲು ಅನಂತಕುಮಾರ್ ತಯಾರಿಲ್ಲ.

ರಾಜ್ಯಾಧ್ಯಕ್ಷರು ನೇಮಕದ ಕಗ್ಗಂಟನ್ನು ಬಿಜೆಪಿ ಹೈಕಮಾಂಡ್ ಹೇಗೆ ಬಿಡಿಸಿಕೊಳ್ಳುತ್ತದೆ ಎನ್ನುವುದು ಅದರ ಆಂತರಿಕ ವಿಷಯ. ಆದರೆ ಬಿಜೆಪಿಗೆ ಇಂತಹ ಪರಿಸ್ಥಿತಿ ಯಾಕೆ ಬಂತು ಎಂಬುದು ಸಾರ್ವಜನಿಕ ಪ್ರಶ್ನೆಯ ವಿಷಯವಾಗಿದೆ. ಬಿಜೆಪಿ ರಾಜ್ಯದಲ್ಲಿ ಬೆಳೆದು ಬಂದದ್ದೇ ಅಕ್ರಮ ಮಾರ್ಗಗಳ ಮೂಲಕ ಕೋಮು ಗಲಭೆಗಳನ್ನು ಉಂಟುಮಾಡಿ ಮುಸಲ್ಮಾನರ ವಿರುದ್ಧ ಹಿಂದುಗಳ ಓಟ್ ಬ್ಯಾಂಕ್ ನಿರ್ಮಾಣ ಮಾಡುವುದು, ಆಪರೇಷನ್ ಕಮಲದ ಹೆಸರಿನಲ್ಲಿ ರಾಜಕೀಯದಲ್ಲಿ ಭ್ರಷ್ಟಾಚಾರದ ಹೆಮ್ಮರವನ್ನು ಬೆಳೆಸುವುದು ಜಾತಿ ಆಧಾರದಲ್ಲಿ ಜನರನ್ನು ಒಡೆದು ಅದರ ರಾಜಕೀಯ ಲಾಭ ಪಡೆಯಲು ಯತ್ನಿಸುವುದು ಮೊದಲಾದವುಗಳು ಬಿಜೆಪಿ ರಾಜ್ಯದಲ್ಲಿ ಅಧಿಕಾರ ಹಿಡಿಯಲು ಬಳಸಿದ ಒಳಮಾರ್ಗಗಳು. ಎಲ್ಲಕ್ಕೂ ಮುಖ್ಯವಾಗಿ ಯಾವ ರಾಜಕೀಯ ಜವಾಬ್ದಾರಿಯನ್ನು ನಿರ್ವಹಿಸದೆ, ಫ್ಯಾಸಿಸ್ಟ್ ವಿಷವನ್ನು ಮಾತ್ರ ತುಂಬಿಕೊಂಡಿರುವ ಆರೆಸ್ಸೆಸ್ ನಿಯಂತ್ರಣದಲ್ಲಿ ಬಿಜೆಪಿ ಸಿಕ್ಕಿಹಾಕಿಕೊಂಡಿರುವುದು ಬಿಜೆಪಿಯೊಳಗಿನ ಎಲ್ಲ ಅನಾಹುತಗಳಿಗೆ ಮೂಲ ಕಾರಣವಾಗಿದೆ.

ಹೈದ್ರಾಬಾದ್-ಕರ್ನಾಟಕ ಸ್ಥಾನ ಮಾನ: ನ್ಯಾಯದ ನಿರೀಕ್ಷೆಯಲ್ಲಿ ಜನ

ಇದು ನಾಲ್ಕು ದಶಕಗಳ ಕಾಲ ಕಾದು ಕುಳಿತಿದ್ದ ಬೇಡಿಕೆ. ಒಂದೊಮ್ಮೆ ಧ್ವನಿಸಿ. ಮತ್ತೊಮ್ಮೆ ಕಾಲದ ಏರಿಳಿತದಲ್ಲಿ ನೇಪಥ್ಯಕ್ಕೆ ಸರಿದು, ಮಗದೊಮ್ಮೆ ರಾಜಕೀಯ ಆಡುಂಬೋಲದ ವಸ್ತುವಾಗಿ ಕೊನೆಗೆ ಇದೀಗ ಮೊದಲ ಹಂತದ ಅನುಮೋದನೆಯ ಮೂಲಕ ಜನರಲ್ಲಿ ಪ್ರಗತಿಯ ಆಸೆ ಚಿಗುರಿಸಿದೆ. ರಾಜ್ಯದ ಹೈದ್ರಾಬಾದ್ ಕರ್ನಾಟಕದ ಗುಲ್ಬರ್ಗಾ, ಬೀದರ್, ಯಾದಗಿರಿ, ರಾಯಚೂರು , ಕೊಪ್ಪಳ ಮತ್ತು ಬಳ್ಳಾರಿ ಈ ಆರು ಜಿಲ್ಲೆಗಳಿಗೆ ಸಂವಿಧಾನದ 371 ವಿಧಿಯಡಿ ವಿಶೇಷ ಸ್ಥಾನ ಕಲ್ಪಿಸಲು ಕೇಂದ್ರ ಸರಕಾರದ ರಾಜಕೀಯ ವ್ಯವಹಾರಗಳ ಸಮಿತಿಯು ಕಳೆದ ಶುಕ್ರವಾರ (ಅ.5)ರಂದು ಅನುಮೋದಿಸಿದೆ. ಇದು ಪ್ರಾದೇಶಿಕ ಅಸಮಾನತೆಯನ್ನು ತೊಲಗಿಸಿ ನ್ಯಾಯ ಸಿಗಬೇಕೆಂಬ ಹಂಬಲವಿರುವ ಎಲ್ಲರಿಗೂ ಕಿಂಚತ್ತು ಸಮಾಧಾನ, ಸಂತಸ ತಂದಿರುವ ವಿಷಯ.



ಅಂದ ಹಾಗೆ ಸಂಪುಟದ ಉಪ ಸಮಿತಿಯ ಕೆಲಸ ಇಷ್ಟಕ್ಕೇ ಮುಗಿಯುವುದಿಲ್ಲ. ಅದು ಸಚಿವ ಸಂಪುಟದಿಂದ ಒಪ್ಪಿಗೆ ಪಡೆದು ಸಂಸತ್ತಿನಲ್ಲಿ ಮೂರನೆಯ ಎರಡರಷ್ಟು ಬಹುಮತದಿಂದ ಅಂಗೀಕಾರವಾದಾಗಲೇ ಪ್ರಕ್ರಿಯೆ ಪೂರ್ಣ. ಇದು ಅಷ್ಟು ಸುಲಭದ ಕೆಲಸವೇನೂ ಅಲ್ಲ ಎಂಬುದು ಇಂದಿನ ರಾಜಕೀಯ ರಸಾಯನ ಬಲ್ಲವರಿಗೆಲ್ಲಾ ಗೊತ್ತಿರುವುದೇ. ಆದರೆ ಆಗಲೇಬೇಕಾದ ಕೆಲಸ.

ಯಾಕೀ 371

ಭಾರತ ದೇಶ ಹಲವಾರು ವೈವಿಧ್ಯತೆ, ಪ್ರಾದೇಶಿಕ ವಿಭಿನ್ನತೆ ಮತ್ತು ಹಲವಾರು ಜಟಿಲ ಸಮಸ್ಯೆಗಳನ್ನು ಹೊಂದಿರುವ ಹಿನ್ನೆಲೆಯಲ್ಲಿ ಏಕೀಕರಣದ ಸಂದರ್ಭದಲ್ಲಿ ಹಿಂದಿದ್ದ ಉತ್ತಮ ಅವಕಾಶಗಳಿಂದ ವಂಚಿತವಾಗಬಾರದೆಂಬ, ಅಗತ್ಯವಿರುವಲ್ಲಿ ಹಿಂದುಳಿದ ಕೆಲವು ಪ್ರದೇಶಗಳಿಗಾಗಿ ವಿಶೇಷ ಕಾಯಿದೆಗಳನ್ನು ರಚಿಸುವ ಅವಕಾಶವನ್ನು ಸಂವಿಧಾನ ತಜ್ಞರು 371 ರ ವಿಧಿಯಡಿ ರೂಪಿಸಿದರು. ಅಂದು ಇದರ ವ್ಯಾಪ್ತಿಗೆ ಬಂದದ್ದು ಮಹಾರಾಷ್ಟ್ರದ ವಿದರ್ಭ, ಮರಾಠವಾಡಾ, ಗುಜರಾತ್‌ನ ಸೌರಾಷ್ಟ್ರ, ಕಛ್ ಪ್ರದೇಶಗಳು. ನಂತರ 371 ಎ ರಲ್ಲಿ ನಾಗಾಲ್ಯಾಂಡ್, ಬಿ ಯಲ್ಲಿ ಅಸ್ಸಾಂ, ಸಿ ಮಣಿಪುರ, ಡಿ ಯಡಿ ಆಂಧ್ರ ಪ್ರದೇಶ (ನಂತರ ಇ ನಲ್ಲಿ ಆಂಧ್ರದಲ್ಲಿ ಕೇಂದ್ರ ವಿ.ವಿ.), ಎಫ್ ಸಿಕ್ಕಿಂ, ಜಿ ಮಿಜೋರಾಂ, ಹೆಚ್ ಅರುಣಾಚಲ ಪ್ರದೇಶ, ಐ ನಡಿ ಗೋವಾ, ಪ್ರದೇಶಗಳು ಸ್ಥಾನ ಪಡೆದಿವೆ. ಒಂದೊಂದು ಪ್ರದೇಶಕ್ಕೂ ಹಲವು ವಿವರಣೆ, ವ್ಯಾಪ್ತಿ ಅವಕಾಶಗಳು ಇರುವುದಾದರೂ ಆ ಪ್ರದೇಶದ ಅಭಿವೃದ್ಧಿ, ಅದಕ್ಕಾಗಿ ಅನುದಾನ, ಹಣದ ಸಮಾನ ಹಂಚಿಕೆ, ತಾಂತ್ರಿಕ ಮತ್ತು ವೃತ್ತಿ ಶಿಕ್ಷಣದ ತರಬೇತಿ ಉದ್ಯೋಗಕ್ಕೆ ಅವಕಾಶಗಳನ್ನು ಕಲ್ಪಿಸುವುದು, ಇವೆರಡರಲ್ಲೂ (ರಾಜ್ಯ ಸರಕಾರದ ವ್ಯಾಪ್ತಿಯಲ್ಲಿನ) ಮೀಸಲಾತಿ ನೀಡುವುದು, ನೇರ ನೇಮಕಾತಿಗೆ ಸರಕಾರ ನಿಯಮ ರೂಪಿಸುವುದು ಪ್ರಮುಖ ಅಂಶಗಳಾಗಿವೆ. ಅದಲ್ಲದೇ ಹೈ-ಕ ಪ್ರದೇಶಕ್ಕೆ , ಚುನಾಯಿತ ಪ್ರಾತಿನಿಧ್ಯ ಒಳಗೊಂಡ ಅಭಿವೃದ್ಧಿ ಮಂಡಳಿ ರಚನೆ ಮತ್ತು ವಿಧಾನಸಭೆಗೆ ಅದರ ಬಾಧ್ಯತೆ (ಪ್ರತಿ ವರುಷವೂ ಚರ್ಚೆಗೆ ಒಳಗಾಗುವುದು) ಇರುವುದು. ರಾಷ್ಟ್ರಪತಿಗಳ ಪರವಾಗಿ ಗವರ್ನರ್‌ರವರದ್ದೇ ಇವೆಲ್ಲಾ ವ್ಯವಹಾರಗಳ ಉಸ್ತುವಾರಿ.

ಕ್ರೂರ ಸತ್ಯದ ಮುಖ

ದೇಶ ಹಾಗೂ ರಾಜ್ಯದಲ್ಲಿನ ಪ್ರಾದೇಶಿಕ ಅಸಮಾನತೆ ಮತ್ತು ಅಭಿವೃದ್ಧಿಯ ತರತಮಗಳನ್ನು ಕುರಿತು ಚರ್ಚಿಸುವುದು ಸದ್ಯ ಕೊನೆಯಿಲ್ಲದ ಕಸರತ್ತು. ಆದರೆ ಕರ್ನಾಟಕದಲ್ಲೇ ಹೈ-ಕ ಪ್ರದೇಶ ಅತ್ಯಂತ ಹಿಂದುಳಿದ ಪ್ರದೇಶವಾಗಿದೆ, ಅದರ ನಿವಾರಣೆಯಾಗಬೇಕು ಎಂಬುದರಲ್ಲಿ ಅನುಮಾನಕ್ಕೆ ಆಸ್ಪದ ವಿಲ್ಲದಿರುವುದು ಪ್ರತಿ ವರುಷಗಳ ಅಂಕಿ ಅಂಶಗಳು, ಘಟನೆಗಳು ಸಾರುತ್ತಲೇ ಇವೆ. ವಿಶೇಷವಾಗಿ ಅಭಿವೃದ್ಧಿಯ ಪ್ರಧಾನ ಮಾನದಂಡವಾದ ಆದಾಯ, ಆರೋಗ್ಯ, ಜೀವಿತಾವಧಿ, ಜೀವನ ಮಟ್ಟ, ನಾಗರೀಕ ಸೌಲಭ್ಯಗಳನ್ನೊಳಗೊಂಡ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ (2008ರ) 29 ಜಿಲ್ಲೆಗಳಲ್ಲಿ ಗುಲ್ಬರ್ಗಾವು ಕಡೆಕಡೆಯ 26 ನೆಯ ಸ್ಥಾನವನ್ನು ಪಡೆದಿದೆ. ಹತ್ತನೆಯ ಮತ್ತು ಪಿ.ಯು.ಸಿ. ಫಲಿತಾಂಶಗಳಲ್ಲಿ ಕೊನೆಯ ಸ್ಥಾನ ಬೀದರ್, ಯಾದಗಿರಿ ಮತ್ತು ಗುಲ್ಬರ್ಗಾಗಳೇ ನಿಲ್ಲುತ್ತವೆ. ಹೀಗಾಗಿ ಉನ್ನತ ಶಿಕ್ಷಣ-ಉದ್ಯೋಗ ಪಡೆಯುವುದು ಬಹುಪಾಲು ಜನರಿಗೆ ಅಸಾಧ್ಯ, ಪ್ರಾಥಮಿಕ ಶಿಕ್ಷಣ ಪಡೆಯಲಾಗದವರೇ ಶೇ.53 ಇರುವಾಗ ಸಾಧ್ಯವಾಗುವುದಾದರೂ ಹೇಗೆ? ಬಹುಪಾಲು ಜನತೆ ಭೂಹೀನ ಕೂಲಿಕಾರರಾಗಿರುವಾಗ ದಾರಿದ್ರ್ಯತೆ, ಬಡತನ ಮಡುಗಟ್ಟದೇ ಇನ್ನೇನಿರಲು ಸಾಧ್ಯ. ಇವರಿಗೆಲ್ಲಾ ಜೀವನದಾಸರೆ ಹುಡುಕಿ ನಿತ್ಯವೂ ಗುಳೇ ಹೋಗುವುದೇ ಅನಿವಾರ್ಯವಾಗಿ

ಪುಟ 4 ಕ್ಕೆ

ಸಂಯುಕ್ತ ಧಾರವಾಡ ಜಿಲ್ಲೆ ಬರಗಾಲ : ಬೆದರಿದ ಜನತೆ.

ಕೆಲವೇ ದಿನಗಳ ಹಿಂದಷ್ಟೆ ಗದಗ ಜಿಲ್ಲೆಯ ಹೊಸಳ್ಳಿ ಗ್ರಾಮದ ರೈತನೊಬ್ಬ ಬಿತ್ತನೆಗಾಗಿ ಕಾಯ್ದಿಟ್ಟ ಶೇಂಗಾ ಬೀಜಗಳನ್ನು ಮಾರಾಟ ಮಾಡಿ ಜೀವನ ನಿರ್ವಹಣೆಗೆ ಹಣ ಸಂಪಾದಿಸಿದ ಧಾರುಣ ಪ್ರಸಂಗವನ್ನು ಪತ್ರಿಕೆಯೊಂದು ವರದಿ ಮಾಡಿದೆ. ಇದು ಒಂದು ಗ್ರಾಮದ ರೈತನ ಕಥೆ ಅಷ್ಟೆ ಅಲ್ಲಾ. ಎಲ್ಲಾ ಗ್ರಾಮಗಳ ರೈತರದೂ ವ್ಯಥೆ ಇದೇ ಆಗಿರಲು ಸಾಕು. ರೈತ, ಭೂಮಿ, ಬೀಜಗಳ ಬಿತ್ತನೆ ಇವುಗಳ ಮಧ್ಯ ಒಂದು ಭಾವನಾತ್ಮಕ ಸಂಬಂಧವಿರುತ್ತದೆ. ಭೂಮಿಗೆ ಬೀಜ ಹಾಕುವುದು ರೈತನಿಗೆ ಅತ್ಯಂತ ಸಂಭ್ರಮದಿಂದ ಮಾಡುವ ಕೆಲಸವಾಗಿದೆ. ಇದನ್ನೇ ಉಡಿ ತುಂಬುವದು ಎಂದು ಭಾವುಕತೆಯಿಂದ ಹೇಳುವದುಂಟು. ಆದರೆ ಈ ವರ್ಷ ಮುಂಗಾರು ಮಳೆ ಮುನಿಸಿಕೊಂಡಿದ್ದರಿಂದ ಬಿತ್ತನೆ ಆಗಲಿಲ್ಲ. ಬೀಜಗಳನ್ನು ಹಾಗೆ ಇಟ್ಟುಕೊಂಡರೆ ಹುಳ ತಿಂದು ನಾಶಮಾಡುತ್ತವೆ. ಆ ಬೀಜಗಳನ್ನೇ ಮಾರಾಟ ಮಾಡಿ ಕೆಲವು ದಿನ ಜೀವನ ನಿರ್ವಹಣೆ ಮಾಡಲು ಸಿದ್ಧರಾದರು ಎಂದರೆ ಪರಿಸ್ಥಿತಿ ಯಾವ ರೀತಿ ಬಿಗಡಾಯಿಸಿದೆ ಎಂಬುದನ್ನು ಮನಗಾಣಬಹುದು.

ಅವಿಭಜಿತ ಧಾರವಾಡ ಜಿಲ್ಲೆ (ಧಾರವಾಡ, ಗದಗ, ಹಾವೇರಿ ಜಿಲ್ಲೆಗಳು ಸೇರಿ) ಈ ವರ್ಷ ತೀವ್ರ ಬರಗಾಲದಿಂದ ತತ್ತರಿಸಿದೆ. ಮಲೆನಾಡಿನ ಸೆರಗಿನಲ್ಲಿರುವ ಧಾರವಾಡ ಹಾಗೂ ಕಲಘಟಗಿ ತಾಲೂಕುಗಳಲ್ಲಿ 170 ಮಿ.ಮಿ. ಮಳೆಯಾಗಿದೆ ಆದರೂ ವಾಡಿಕೆ ಮಳೆಗಿಂತ ಕಡಿಮೆ. ನವಲಗುಂದ ತಾಲೂಕ ಅತ್ಯಂತ ಕಡಿಮೇ 40 ಮಿ.ಮಿ. ಮಳೆ ಪಡೆದಿದೆ. ಹಾವೇರಿ ಜಿಲ್ಲೆಯಲ್ಲಿ ಬಿತ್ತನೆಗೆ ಅನುಕೂಲವಾಗುವಂತೆ ತಡವಾಗಿ ಮಳೆ ಬಿದ್ದಿದೆ. ಗದಗ ಜಿಲ್ಲೆಯಲ್ಲಿ ಎಲ್ಲಿ ನೋಡಿದಲ್ಲಿ ಬಿತ್ತನೆಯಾಗದ ಕಪ್ಪು ಭೂಮಿ ಕಣ್ಣಿಗೆ ರಾಚುತ್ತದೆ. ಧಾರವಾಡ ಜಿಲ್ಲೆಯಲ್ಲಿ ಕಳೆದ ವರ್ಷ ಜುಲೈ ತಿಂಗಳ ಕೊನೆಗೆ 1.55 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತು. ಅದಕ್ಕೆ ಹೋಲಿಸಿದರೆ ಈ ವರ್ಷ ಕೇವಲ 90 ಸಾವಿರ ಹೆಕ್ಟೇರ್ ಬಿತ್ತನೆ ಕಂಡಿದೆ. ಹಾವೇರಿ ಜಿಲ್ಲೆಯಲ್ಲಿ ಕೇವಲ 2.30 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಬಿತ್ತನೆಯಾದ ನೆಲಕ್ಕೆ ಮಳೆಯ ತೀವ್ರ ಅಗತ್ಯತೆ ಇದೆ. ಮಳೆಯಾಗದೇ ಹೋದರೆ ಬಿತ್ತಿ ಬೆಳೆದ ಬೆಳೆ ನಷ್ಟವಾಗಲಿದೆ.

ಜನರ ಆತಂಕಕ್ಕೆ ಇನ್ನೊಂದು ಕಾರಣವಿದೆ. ಕಳೆದ ಮೂರು ನಾಲ್ಕು ವರ್ಷಗಳಿಂದ ಈ ಪ್ರದೇಶವು ಅತಿವೃಷ್ಟಿ ಅನಾವೃಷ್ಟಿಗಳ ಚಕ್ರಕ್ಕೆ ಸಿಲುಕಿ ಬೆಳೆನಷ್ಟ ಅನುಭವಿಸುತ್ತ ಬಂದಿದೆ. 2007 ರ ಮಾರ್ಚ್ ತಿಂಗಳಲ್ಲಿ ಸುರಿದ ಅಕಾಲಿಕ ಭಾರಿ ಮಳೆಗೆ ಧಾರವಾಡ ಜಿಲ್ಲೆಯ ನವಲಗುಂದ, ಕುಂದಗೋಳ ಗದಗ ಜಿಲ್ಲೆಯ ರೋಣ, ನರಗುಂದ ಗದಗ ಮತ್ತು ಶಿರಹಟ್ಟಿ ತಾಲೂಕುಗಳಲ್ಲಿ ಬೆಳೆದ ಹಿಂಗಾರಿ ಬೆಳೆಗಳಾದ ಜೋಳ, ಗೋದಿ, ಕಡಲೆ ಮುಂತಾದ ಬೆಳೆಗಳು ನಾಶವಾದವು. "ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ." ರೈತರು ಕಂಗಾಲಾದರು. ಅದರಂತೆ 2009 ಉತ್ತರ ಕರ್ನಾಟಕವೇ ಜಲಾವೃತ ವಾದುದನ್ನು ಯಾರೂ ಮರೆಯುವಂತಿಲ್ಲ. ಉಕ್ಕಿ ಹರಿದ ಬೆಣ್ಣೆ ಹಳ್ಳವು ತನ್ನ ಇಕ್ಕೆಲೆಗಳಲ್ಲಿರುವ ಗ್ರಾಮಗಳ ಜನರ ಬದುಕನ್ನೇ ಕೊಚ್ಚಿಕೊಂಡು ಹೋಯಿತು. ಆ ಜನ ಇಂದಿಗೂ ಆ ಆಘಾತದಿಂದ ಹೊರಬಂದಂತಿಲ್ಲ. ಕಳೆದ ವರ್ಷ ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ರೈತರು "ಹಸಿ ಬರ"ದಿಂದ ಬೆಳೆ ಹಾನಿ ಅನುಭವಿಸಿದ್ದಾರೆ. ಹೀಗೆ ಮಳೆ ಅಭಾವ, ಹಸಿ ಬರ, ನೆರೆ ಹಾವಳಿ, ಅಕಾಲಿಕ ಮಳೆಗಳಿಂದ ಪ್ರತಿವರ್ಷ ಬೆಳೆ ನಷ್ಟದಲ್ಲಿರುವ ಈ ಪ್ರದೇಶದ ಜನರು ನೆಮ್ಮದಿ ಬದುಕಿನ ಭರವಸೆಯನ್ನು ಕಳೆದುಕೊಂಡಿದ್ದಾರೆ.

ಬರಗಾಲವನ್ನು ಗಂಭೀರವಾಗಿ ಪರಿಗಣಿಸದ ಸರಕಾರ: ತೀವ್ರ ಬರಗಾಲ ಇದ್ದರೂ ರಾಜ್ಯ ಸರಕಾರವು ದಿವ್ಯ ನಿರ್ಲಕ್ಷ್ಯ ತಾಳಿದೆ. ಸಮರೋಪಾಧಿಯಲ್ಲಿ ಬರಗಾಲವನ್ನು ಎದುರಿಸುವ ಕಾರ್ಯ ಯೋಜನೆಯೊಂದನ್ನು ರೂಪಿಸದೇ ರಾಜ್ಯ ಸರಕಾರವು ರಾಜಕೀಯ ಕಿತ್ತಾಟದಲ್ಲಿ ನಿರತವಾಗಿದೆ. ಇಲ್ಲಿಯ ಯಾವ ಜನಪ್ರತಿನಿಧಿಗಳು ಬರಗಾಲದ ಬಗ್ಗೆ ಚಿಂತನೆ ಮಾಡದೇ ಜನರ ನೆರವಿಗೆ ಧಾವಿಸುತ್ತಿಲ್ಲ. ಮುಖ್ಯಮಂತ್ರಿಗಳು ಜನರು ಗುಳೆ ಹೋಗಬಾರದೆಂದು ಜನತೆಗೆ ಒಂದು ಕಡೆ ಕರೆ ಕೊಟ್ಟರೇ ಇನ್ನೊಂದೆಡೆ ಗುಳೆ ಹೋಗುವದು 'ಜನರ ಚಟ' ಎಂಬ ಉಢಾಫೆ ಮಾತುಗಳನ್ನು ಮಂತ್ರಿಯೊಬ್ಬರು ಹೇಳುತ್ತಿದ್ದಾರೆ. ಅಂದರೆ ಸರಕಾರ ಬರಗಾಲವನ್ನು ಎಷ್ಟು ಹಗುರವಾಗಿ ಕಂಡಿದೆ ಎಂಬುದು ವೇದ್ಯವಾಗುತ್ತದೆ. ಜನರು ಗುಳೆ ಹೋಗದಂತೆ ತಡೆಯಲು ಜನರಿಗೆ ಉದ್ಯೋಗವನ್ನು ಕೊಡುವುದು ಸರಕಾರದ ಕರ್ತವ್ಯವಾಗಿದೆ. ಗ್ರಾಮಾಂತರ ಪ್ರದೇಶದ ಜನರಿಗೆ ಉದ್ಯೋಗ ಕಲ್ಪಿಸುವ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಸರಕಾರ ವಿಫಲವಾಗಿದೆ. ಅಲ್ಲಲ್ಲಿ ಒಂದಿಷ್ಟು ಉದ್ಯೋಗ ಒದಗಿಸಿದ್ದರೂ ಅವರಿಗೆ ಕೂಲಿಯನ್ನು ನೀಡಿರುವುದಿಲ್ಲಾ. ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ, ದನಕರುಗಳ ಮೇವಿನ ಕೊರತೆಯಾಗಿದೆ. ಬರಗಾಲಕ್ಕೆ ಪರಿಹಾರವೆನ್ನುವಂತೆ ರಾಜ್ಯ ಸರಕಾರವು ಗ್ರಾಮೀಣ ಸಹಕಾರಿ ಬ್ಯಾಂಕ್‌ಗಳಲ್ಲಿ ರೈತರು ತೆಗೆದುಕೊಂಡ 25 ಸಾವಿರವರೆಗಿನ ಸಾಲವನ್ನು ಮನ್ನಾ ಮಾಡಿದೆ. ಆದರೆ ಈ ನಿರ್ಣಯ ಬಹಳ ತಡವಾಗಿ ಬಂದಿದೆ. ಯಾಕೆಂದರೆ ಬಹುತೇಕ ರೈತರು ಈ ಸಮಯಕ್ಕೆ ಸಾಲ ಮರುಪಾವತಿ ಮಾಡಿರುತ್ತಾರೆ. ಆದ್ದರಿಂದ ಬಹಳ ಸೀಮಿತ ರೈತರಿಗೆ ಸಹಾಯವಾಗಲಿದೆ. ಸಣ್ಣ ಹಿಡುವಳಿದಾರರು ಸೇರಿದಂತೆ ದೊಡ್ಡ ಸಂಖ್ಯೆಯಲ್ಲಿ ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕ್‌ಗಳಲ್ಲಿ ಬೆಳೆ ಸಾಲ ಪಡೆದವರಿದ್ದಾರೆ. ಅವರಿಗೆ ಈ ಸಾಲ ಮನ್ನಾ ನೆರವಿಗೆಬಾರದು.

■ ಬಿ. ಎಸ್. ಸೊಪ್ಪಿನ, ಹುಬ್ಬಳ್ಳಿ

ಹೈದ್ರಾಬಾದ್-ಕರ್ನಾಟಕ ಸ್ಥಾನ ಮಾನ....

ಪುಟ 3 ರಿಂದ

ಬಿಟ್ಟಿದೆ. ಒಟ್ಟಾರೆ ಈ ಪ್ರದೇಶದ ಅಭಿವೃದ್ಧಿಗೆ ವಿಶೇಷ ಗಮನ ಅತ್ಯಗತ್ಯ. ಇಲ್ಲಿ ಭೂಮಿ, ನೀರು ಮುಂ.ಪ್ರಾಕೃತಿಕ ಮತ್ತು ಮಾನವ ಸಂಪನ್ಮೂಲಗಳಿಗೆ ಕೊರತೆಯಿಲ್ಲ.

ಇಂತಹ ಕ್ರೂರ ಸತ್ಯಕ್ಕೆ ನೂರಾರು ಮುಖಗಳಿವೆ, ಹತ್ತಾರು ಆಯಾಮಗಳಿವೆ. ಡಾ. ನಂಜುಂಡಪ್ಪ ಆಯೋಗದ ವರದಿಯೂ ಒಳಗೊಂಡು ಅಧ್ಯಯನಗಳಿಗೂ, ಪರಿಹಾರದ ಪ್ರಸ್ತಾಪಗಳಿಗೂ ಬರವಿಲ್ಲ. ಇಂತಹ ಮಾತು ಪ್ರಯತ್ನಗಳೂ ನಿಂತಿಲ್ಲ. ಪ್ರಶ್ನೆಯೆಂದರೆ ಇವು ನಿರೀಕ್ಷಿತ ಫಲಿತಾಂಶ ತಂದವೇ? ಈಗಲೂ 371 ರಡಿಯ ಸ್ಥಾನಮಾನ ಎಲ್ಲಾ ಸಮಸ್ಯೆ ಇಲ್ಲವಾಗಿಸ ಬಹುದೇ? ಹೀಗಾಗ ಬೇಕಾದಲ್ಲಿ ಕಾರ್ಷಿಕ ಸಂಬಂಧಗಳು ಮತ್ತು ಕೈಗಾರಿಕಾ ರಂಗದಲ್ಲಿ ಮೂಲಭೂತ ಬದಲಾವಣೆ ಆಗಲೇಬೇಕು. ಇದನ್ನು ಹೊರತು ಪಡಿಸಿದ ಯಾವುದೇ ಕ್ರಮಗಳು ನಿರೀಕ್ಷಿತ ಫಲಿತಾಂಶ ನೀಡದ, ಆದರೆ ಹೊರ ಆವರಣದ ಅಲಂಕಾರವಷ್ಟೇ.

ಇದರರ್ಥ ವಿಶೇಷ ಸ್ಥಾನಮಾನ ನೀಡಿಕೆ ಅಪ್ರಯೋಜಕವೆಂದಲ್ಲ. ಅದನ್ನು ಸರಿಯಾಗಿ ಬಳಸಿ ಜಾರಿಗೊಳಿಸಿದಲ್ಲಿ ಕನಿಷ್ಟ ಪ್ರಗತಿ ಸಾಧಿಸಲು ಸಾಧ್ಯವಿದೆ. ಆದರೆ ಇದುವರೆಗಿನ ಅನುಭವದಂತೆ ವಿಶೇಷ ಪ್ಯಾಕೇಜ್‌ಗಳು, ವಿಶೇಷ ಅನುದಾನಗಳು ಅಂತಿಮವಾಗಿ ತಲುಪಿದ್ದು ಆಳುವವರ ಜೇಬುಗಳನ್ನು. ಇಂತಹ ಅಧಿಕಾರಸ್ಥರು ಬಹುತೇಕವಾಗಿ ಭೂಮಾಲೀಕ, ಬಂಡವಾಳದಾರರ ವರ್ಗ ಪ್ರತಿನಿಧಿಗಳೇ! ಇನ್ನು ಶ್ರಮಜೀವಿಗಳ, ಸಾಮಾನ್ಯರ ಹಿತಗಳೆಲ್ಲಿ?. ಹೀಗಾಗಿ 371 ರಡಿಯಲ್ಲೂ ಸ್ಥಾನಮಾನ ಗಿಟ್ಟಿಸಿಕೊಳ್ಳುವವರು ಅವರೇ ಆಗಿಬಿಟ್ಟರೆ?

ಅನುಭವದ ಪಾಠ

ಇಲ್ಲಿ ವಿಶೇಷ ಸ್ಥಾನಮಾನ ಪಡೆದ ತೆಲಂಗಾಣದ ಅನುಭವವೇನು? ಹಿಂದುಳಿದಿರುವಿಕೆಯನ್ನೇ ಆಧಾರವಾಗಿರಿಸಿ ಅಲ್ಲಿ ಪ್ರತ್ಯೇಕ ರಾಜ್ಯದ ಕೂಗು ಮತ್ತೀಗ ಹಿಂಸಾತ್ಮಕ ಸ್ವರೂಪ ತಾಳಿದ್ದಾದರೂ ಯಾಕೆ? ವಿದರ್ಭದ ಸ್ಥಿತಿಯಾದರೂ ಏನು? ಅಲ್ಲಿ ಕೃಷಿ ಬಿಕ್ಕಟ್ಟು ಜೀವ ಹಿಂಡುತ್ತಿಲ್ಲವೇ, ಸುಡುತ್ತಿಲ್ಲವೇ? ಹತ್ತಾರು ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡರೂ ಅಲ್ಲಿ ಸಾಧಿಸುವುದು ಇನ್ನೇನು ಉಳಿದಿಲ್ಲವಂತೆ! ಪ್ರಾದೇಶಿಕ ಅಸಮಾನತೆ ತೊಲಗಿದೆಯಂತೆ. ಕೇವಲ ನೀರಾವರಿ, ರಸ್ತೆ, ಶಿಕ್ಷಣ, ಆರೋಗ್ಯ ಇಲಾಖೆಯಲ್ಲಿ ಬ್ಯಾಕ್ ಲಾಗ್ ಹುದ್ದೆಗಳಿಗೆ ನೇಮಕಾತಿ ಮಾತ್ರ ಬಾಕಿ ಇದೆಯಂತೆ! ವಿದರ್ಭ, ಮರಾಠವಾಡಾಕ್ಕೆಂದೇ ಮೀಸಲಿಟ್ಟ ಹಣದಲ್ಲಿ ಖರ್ಚು ಮಾಡದೇ ಉಳಿಸಿಟ್ಟು 16 ವರುಷಗಳಲ್ಲಿ ವ್ಯವಸ್ಥಿತವಾಗಿ 96,000 ಕೋಟಿ ರೂಪಾಯಿಗಳನ್ನು ಮಹಾರಾಷ್ಟ್ರದ ಪುಣೆ, ನಾಸಿಕ್, ಕೊಂಕಣ ಪ್ರದೇಶಗಳಿಗೆ ಹರಿಸಲಿಲ್ಲವೇ? ಇವು ನಮಗೆಲ್ಲಾ ಎಚ್ಚರಿಕೆಯ ಪಾಠವಾಗಬೇಕು.

ರಾಜಕೀಯ ಲಾಭವೇ

ಇಲ್ಲಿ ಇಂತಹ ಗಂಭೀರ ಚಿಂತನೆಗಿಂತ ಅಥವಾ ನಿರ್ಧಾರದ ಅಂಗೀಕಾರ, ಜಾರಿಯ ಕುರಿತು ಮಂಥನಕ್ಕಿಂತ ಮುಖ್ಯವಾಗಿ ಮುಂಬರುವ ಚುನಾವಣೆಯಲ್ಲಿ ರಾಜಕೀಯ ಲಾಭ ಬಾಚಿಕೊಳ್ಳುವ ಬಯಕೆಯೇ ಎದ್ದು ಕಾಣುತ್ತದೆ. 371ರ ಪ್ರಸ್ತಾಪವನ್ನೇ ನಿರಾಕರಿಸುತ್ತಾ ಬಂದ, ಎಂದೋ ಮಾಡಬಹುದಾಗಿದ್ದ ಕೆಲಸವನ್ನು ಕಾಂಗ್ರೆಸ್ ದಿಢೀರನೇ ಅಂಗೀಕರಿಸುವ 'ಕಾಳಜಿ' ಈಗ ತೋರಿದೆ. ಹಾಗೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗಲೇ ನಿರ್ಲಕ್ಷಿಸಿದ ಬಿಜೆಪಿಯ ನಿಯೋಗದ 'ಮುತುವರ್ಜಿ' ಯಾದರೂ ಏನು?. ಉ.ಕ ಮತ್ತು ಹೈ-ಕ ದ ಮತ ಬೇಟೆಯೇ ಆಗಿದೆಯಲ್ಲವೇ?. ಜನತೆಗಾಗಿ ಏನೂ ಮಾಡದ, ಈ ಭ್ರಷ್ಟ, ಜನದ್ರೋಹಿಗಳು ಹುಸಿ ಆಶೆ ಹುಟ್ಟಿಸಿ ಗಾಳ ಹಾಕಲು ನಡೆಸಿರುವ ಪ್ರಯತ್ನಗಳು ಹೇಸಿಗೆ ತರುವಂತಹವು. ಇವರಿಗೆ ನಿಜಕ್ಕೂ ಜನತೆಯ ಪ್ರಗತಿಯನ್ನು ಸಾಕಾರಗೊಳಿಸುವ ಯಾವುದೇ ಪ್ರಾಮಾಣಿಕತೆ ಇಲ್ಲವೇ ಇಲ್ಲ.

ಆದರೀಗ ಈಗಿನ ಪ್ರಸ್ತಾವಕ್ಕೆ ಎನ್.ಡಿ.ಎ ಭಾಗಿದಾರ ಬಿಜೆಪಿ ಜೊತೆಗಾರ ಬಿಹಾರದ ಮುಖ್ಯಮಂತ್ರಿ ನಿತೀಶ್ ವಿರೋಧಿಸಿದ್ದಾರೆ. ಬಿಜೆಪಿ ಇದನ್ನು ಹೇಗೆ ಅರ್ಥೈಸುತ್ತದೆ? ಆದ್ದರಿಂದ 371 ವಿಧಿಯನ್ನು ಕೇವಲ ಪ್ರಚಾರದ ಸರಕನ್ನಾಗಿಸುವ ಬದಲು ಸಾಕಾರಗೊಳಿಸಲು ಇವರೆಲ್ಲಾ ಮುಂದಾಗುವರೇ. ಇವರ ಸಿದ್ಧತೆ ನೋಡಿದರೆ ಸುದ್ದಿ ಶೂರತನಕ್ಕೆ ಮಾತ್ರ ಹಾತೊರೆಯುವುದು ಕಾಣುತ್ತದೆ.

ಆದ್ದರಿಂದ ಉಪ ಸಮಿತಿಯ ನಿರ್ಧಾರ ಸ್ವಾಗತಿಸುತ್ತಲೇ ಅಂಗೀಕಾರಕ್ಕೆ ಆಗ್ರಹಿಸಿ ಬೀದಿಗಳ ನಡುವಿನಿಂದ, ಸಂಸತ್ತಿನೊಳಗೂ ದನಿ ಎತ್ತಬೇಕು.

"ನಿಮ್ಮ ಗೋದಾಮು–ಉಗ್ರಾಣಗಳ ಬಾಗಿಲು–ಬೀಗಗಳು ಮುರಿದುಬಿದ್ದಾವು ಎಚ್ಚರ!!"

ಆಹಾರದ ಹಕ್ಕಿಗಾಗಿ ಬೆಂಗಳೂರಿನಲ್ಲಿ ಎಡಪಕ್ಷಗಳ 'ಮಹಾಧರಣಿ'

ಅದು ಆಗಸ್ಟ್ 3, 2012. ಶುಕ್ರವಾರ. ಬೆಂಗಳೂರು ನಗರದ ರೈಲು ನಿಲ್ದಾಣದ ಬಳಿ ಕಿಕ್ಕಿರಿದ ಜನ. ಅವರು ಜನರಿಗೆ ಆಹಾರದ ಹಕ್ಕನ್ನು ವಂಚಿಸಲು ಹವಣಿಸುತ್ತಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಛೀಮಾರಿ ಹಾಕಿ ತಮ್ಮ ಆಹಾರದ ಹಕ್ಕಿಗಾಗಿ ಆಗ್ರಹಿಸಿ ಎಡಪಕ್ಷಗಳಾದ ಸಿಪಿಐ(ಎಂ) ಹಾಗೂ ಸಿಪಿಐ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆಗೆ ನೆರೆದಿದ್ದರು. ಮಹಿಳೆಯರು, ಮಕ್ಕಳು, ಮುದುಕರು, ಯುವಕರು...ಕೈಯಲ್ಲಿ ಕೆಂಬಾವುಟ ಹಿಡಿದವರು ಹೋರಾಟಗಾರರ ಒಕ್ಕಲು.

ಬಿ.ಪಿ.ಎಲ್, ಎ.ಪಿ.ಎಲ್. ಎಂಬ ತಾರತಮ್ಯ ಇರಕೂಡದು.....ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆ ಜಾರಿಗೆ ತರಬೇಕು...ಪ್ರತಿಯೊಂದು ಕುಟುಂಬಕ್ಕೆ ಪ್ರತಿಯೊಂದು ತಿಂಗಳಿಗೆ 35 ಕೆ.ಜಿ. ಆಹಾರ

ದೆಹಲಿಯಲ್ಲಿ ಎಡಪಕ್ಷಗಳ ಮಹಾಧರಣ, ಜಮ್ಮು ಕಾಶ್ಮೀರದಿಂದ ತಮಿಳುನಾಡಿನವರೆಗೆ ಆಹಾರದ ಹಕ್ಕಿಗಾಗಿ ಎಡಪಕ್ಷಗಳ ಬೃಹತ್ ಆಂದೋಲನ ಇಂಗ್ಲೀಷ್ ಟಿವಿ ಚಾನೆಲ್‌ಗಳ ಬ್ರೇಕಿಂಗ್ ನ್ಯೂಸ್ ಆಗದಿದ್ದರೂ ಆಹಾರದ ಹಕ್ಕು ಅಗತ್ಯವಾಗಿರುವ ಜನರಗಮನ ಸೆಳೆದಿರುವುದಂತೂ ನಿಜ. ರಾಜ್ಯದಲ್ಲಿಯೂ ಸಹ....



ಧಾನ್ಯಗಳನ್ನು ಕೆ.ಜಿ.ಗೆ 2 ರೂ. ಮೀರದ ದರದಲ್ಲಿ ಒದಗಿಸಬೇಕು.... ಕಲ್ಯಾಣ ಕ್ರಮಗಳ ಅರ್ಹತೆಯ ಆಧಾರವಾಗಿ ಯೋಜನಾ ಆಯೋಗವು ನೀಡಿರುವ ಬಡತನದ ಬೋಗಸ್ ಅಂದಾಜುಗಳನ್ನು ತಿರಸ್ಕರಿಸಬೇಕು...... ಗ್ರಾಹಕರಿಗೆ ನ್ಯಾಯವಾದ ಬೆಲೆ ಮತ್ತು ರೈತರಿಗೆ ಲಾಭದ ಮಾರ್ಜಿನ್ ಖಚಿತಪಡಿಸುವ ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಮಾಡಬೇಕು.. ಹೀಗೆ ನಾನಾ ಘೋಷಣೆಗಳು ಮೊಳಗುತ್ತಿದ್ದವು.



ಒಡ್ಡು ಒಡೆದು ನೀರು ನುಗ್ಗಿದಂತೆ ಜನ ನಗರದ ಸ್ವಾತಂತ್ರ್ಯ ಉದ್ಯಾನವನದ ಕಡೆಗೆ ಹೆಜ್ಜೆ ಹಾಕಿದರು. ಕಾಳಿದಾಸ ರಸ್ತೆಯಲ್ಲಿ ಮಹಾ



ಧರಣಿ. ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಹಾಗೂ ಭಾರತ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಘಟಕಗಳು ಜಂಟಿಯಾಗಿ ಏರ್ಪಡಿಸಿದ್ದ ಈ ಧರಣಿಯಲ್ಲಿ ದೇಶದ ಪ್ರತಿಯೊಬ್ಬರಿಗೂ ಆಹಾರ ಭದ್ರತೆಯನ್ನು ಒದಗಿಸಲು ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಸಾರ್ವತ್ರೀಕರಣಗೊಳಿಸಬೇಕೆಂದು ಖಡಾಖಂಡಿತವಾಗಿ ಆಗ್ರಹಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿಧ ಮಾಜಿ ಶಾಸಕ ಜಿ. ವಿ. ಶ್ರೀರಾಮ ರೆಡ್ಡಿ, ಬೆಲೆ ಏರಿಕೆಯನ್ನು ನಿಯಂತ್ರಿಸದ ಕೇಂದ್ರ ಸರಕಾರ ನಾಗರಿಕರಿಗೆ ಆಹಾರ ಭದ್ರತೆಯನ್ನು ಒದಗಿಸುವಲ್ಲಿ ವಿಫಲವಾಗಿದೆ. ಆ ಮೂಲಕ ಬಡವರ ಬದುಕಿನ ಮೇಲೆ ಕ್ರೂರ ದಾಳಿ ನಡೆಸುತ್ತಿದೆ ಎಂದು ಕಟುವಾಗಿ ಟೀಕಿಸಿದರು. ದೇಶಾದ್ಯಂತ ಭೀಕರ ಬರಗಾಲ ತಾಂಡವವಾಡುತ್ತಿದೆ. ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆಯಾಗಿದೆ. ಕೂಲಿ ಇಲ್ಲದೆ ಜನರು ಪರಿತಪಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕೇಂದ್ರ ಸರಕಾರ ಜನವಿರೋಧಿ ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೊಳಿಸಲು ಹೊರಟಿದೆ.

ಈ ಕಾಯ್ದೆಯಲ್ಲಿ ಅಂತ್ಯೋದಯ ಯೋಜನೆ ಮೂಲಕ 2 ರೂ. ದರದಲ್ಲಿ ನೀಡುತ್ತಿದ್ದ 35 ಕೆ.ಜಿ. ಅಕ್ಕಿ ಬದಲಿಗೆ, ಕೇವಲ 25 ಕೆ.ಜಿ. ಅಕ್ಕಿಯನ್ನು 3 ರೂ. ದರದಲ್ಲಿ ನೀಡಲು ತಿರ್ಮಾನಿಸಲಾಗಿದೆ. ಅದರಲ್ಲೂ ಮುಖ್ಯವಾಗಿ ನಿರ್ದಿಷ್ಟ ಕುಟುಂಬಗಳಿಗೆ ನೀಡಬೇಕು ಎಂದು ಸಹ ಪ್ರಸ್ತಾಪಿಸಲಾಗಿದೆ. ಆ ಮೂಲಕ ದೇಶದ ಬಡವರನ್ನು ಕತ್ತಲಲ್ಲಿಟ್ಟು ಆಹಾರ ಭದ್ರತೆಯನ್ನು ಒದಗಿಸದಂತಹ ಕುತಂತ್ರ ಈ ಕಾಯ್ದೆಯಲ್ಲಿ ಅಡಗಿದೆ. ಆದುದರಿಂದ ಈ ಕಾಯ್ದೆಯನ್ನು ಕೇಂದ್ರ ಸರಕಾರ ಕೂಡಲೇ ವಾಪಸ್ ಪಡೆಯಬೇಕು ಎಂದು ಶ್ರೀರಾಮ ರೆಡ್ಡಿ ಆಗ್ರಹಿಸಿದರು. ದೇಶದಲ್ಲಿ ಬಡವರಿದ್ದರೆ ಪಡಿತರ ವ್ಯವಸ್ಥೆಯನ್ನು ವಿಸ್ತರಿಸಬೇಕಾಗುತ್ತದೆ ಎಂಬ ದೃಷ್ಟಿಯಿಂದ ಬಡತನವನ್ನೆ ಅಣಕಿಸುವಂತಹ ಮಾನದಂಡವನ್ನು ಕೇಂದ್ರ ಸರಕಾರ ನಿಗದಿ ಪಡಿಸಿದೆ. ಪಟ್ಟಣ ಪ್ರದೇಶದ ಜನರ ದಿನ ನಿತ್ಯದ ಆದಾಯ ರೂ. 26.60 ಕ್ಕೆ ನಿಗದಿ ಪಡಿಸಿದೆ. ಇಂತಹ ಅವೈಜ್ಞಾನಿಕ ಲೆಕ್ಕಾಚಾರದಿಂದ ದೇಶದಲ್ಲಿ ಬಡವರಿಲ್ಲ ಎಂದು ತೀರ್ಮಾನಿಸಿ ವಿಶ್ವ ಬ್ಯಾಂಕನ್ನು ತೃಪ್ತಿ ಪಡಿಸಲು ಸರಕಾರ ಪಿತೂರಿ ನಡೆಸಿದೆ ಎಂದರು. ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ ರಾಜ್ಯ ಮಂಡಳಿ ಕಾರ್ಯದರ್ಶಿ ಕಾಂ. ಪಿ.ವಿ.ಲೋಕೇಶ್ ಅಮೆರಿಕ ಪ್ರಣೀತ ಹೊಸ ಆರ್ಥಿಕ ನೀತಿ ಪ್ರಪಂಚದಾದ್ಯಂತ ವಿಫಲವಾಗಿದೆ. ಕೇಂದ್ರದ ವಿರೋಧ ಪಕ್ಷ ಬಿಜೆಪಿಗೆ ಕಪ್ಪು ಹಣದ ತೋರಿಕೆಯ ಹುಸಿ ಹೋರಾಟ ಮುಖ್ಯವಾಗಿದೆಯೇ ಹೊರತು, ಬೆಲೆ ಏರಿಕೆ ಮತ್ತು ಆಹಾರದ ಹಕ್ಕು ಮುಖ್ಯವಾಗಿಲ್ಲ. ಆದುದರಿಂದ ಕೇಂದ್ರ ಮತ್ತು ರಾಜ್ಯ ಸರಕಾರದ ವಿರುದ್ಧ ಈ ಚಳುವಳಿ ಸಮರ ಸಾರುವಂತಾಗಬೇಕು ಎಂದು ತಿಳಿಸಿದರು.

ಇದೇ ವೇಳೆ ಮಾತನಾಡಿದ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ, ರಾಜ್ಯದಲ್ಲಿ ತಾಯಂದಿರು ಮತ್ತು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಆದರೆ ದೇಶದ ಉಗ್ರಾಣಗಳಲ್ಲಿ 8 ಲಕ್ಷ ಕೋಟಿ ಟನ್‌ಗೂ ಅಧಿಕ ಆಹಾರ ಧಾನ್ಯಗಳು ಕೊಳೆಯುತ್ತಿದ್ದು, ಇಲಿ, ಹೆಗ್ಗಣಗಳ ಪಾಲಾಗುತ್ತಿವೆ. ಕೇಂದ್ರ ಸರಕಾರ ಕೂಡಲೇ ಉಗ್ರಾಣದಲ್ಲಿರುವ ಆಹಾರ ಪದಾರ್ಥಗಳನ್ನು ಪಡಿತರ ವ್ಯವಸ್ಥೆ ಮೂಲಕ ವಿತರಿಸಬೇಕು. ತಪ್ಪಿದರೆ ಜನರೇ ಉಗ್ರಾಣಗಳ ಮೇಲೆ ದಾಳಿ ಮಾಡಿ ಆಹಾರ ಪದಾರ್ಥಗಳನ್ನು ಹಂಚಿಕೊಳ್ಳಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ಧರಣಿಯಲ್ಲಿ ಸಿಪಿಐ ರಾಜ್ಯ ಮುಖಂಡರಾದ ಎಂ.ಸಿ. ವೆಂಕಟರಾಮ್, ಹರಿಗೋವಿಂದ್ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಜೆ.ಕೆ. ನಾಯರ್, ಜಿ.ಎನ್. ನಾಗರಾಜ್, ನಿತ್ಯಾನಂದಸ್ವಾಮಿ, ಜಿ.ಸಿ. ಬಯ್ಯಾರೆಡ್ಡಿ, ಕೆ. ಶಂಕರ್, ಯು. ಬಸವರಾಜು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ನೀರಿನ ಖಾಸಗೀಕರಣದ ವಿರುದ್ಧ ಜಾಗೃತರಾಗಲು ಕರೆ

ಕುಡಿಯುವ ನೀರಿನ ದರ ಏರಿಸುವುದಿಲ್ಲ ಹಾಗೂ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಜಾರಿಗೊಳಿಸುವುದಿಲ್ಲ ಎಂಬ ಚುನಾವಣಾ ಆಶ್ವಾಸನೆಯೊಂದಿಗೆ ಮಂಗಳೂರು ಮಹಾ ನಗರ ಪಾಲಿಕೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದರೂ, ಏಶ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ)ಯ ದೊಡ್ಡ ಮೊತ್ತದ ಅಭಿವೃದ್ಧಿ ಸಾಲವನ್ನು ಪಡೆಯುವುದಕ್ಕೋಸ್ಕರ ಅದರ ನಿರ್ದೇಶನದಂತೆ, ಅಧಿಕಾರಕ್ಕೆ ಬಂದ ಕೂಡಲೇ ನೀರಿನ ದರವನ್ನು ಏರಿಸಿತು ಮತ್ತು ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಜಾರಿ ಮಾಡಿತು ಎಂಬುದಾಗಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಕೃಷ್ಣಪ್ಪ ಕೊಂಚಾಡಿ ತಿಳಿಸಿದರು.

ಕುಡಿಯುವ ನೀರಿನ ದರ ಇಳಿಕೆಗಾಗಿ ಎರಡು ತಿಂಗಳಿಗೂ ಮೀರಿ ಆಗಾಗ್ಗೆ ಪ್ರತಿಭಟನೆ ನಡೆಸಿ, 2008 ಆಗಸ್ಟ್ 4 ರಂದು ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಮತ್ತು ಡಿವೈಎಫ್‌ಐ ಜಂಟಿಯಾಗಿ ನಡೆಸಿದ ಹೋರಾಟವನ್ನು ಮುರಿಯಲು ಪೋಲೀಸರಿಂದ ಮನಪಾ ಬಿಜೆಪಿ ಆಡಳಿತವು ಲಾಠೀ ಪ್ರಹಾರ ಮಾಡಿಸಿದ ದಿನಕ್ಕೆ 4 ವರ್ಷ ಸಂದ ಸಂದರ್ಭದಲ್ಲಿ ಸಿಪಿಐ(ಎಂ) ನಗರ ಸಮಿತಿಯು ಪಕ್ಷದ ಕಚೇರಿಯಲ್ಲಿ 'ನೀರಿನ ಖಾಸಗೀಕರಣ: ಜನತೆಯ ಮುಂದಿರುವ ಸವಾಲುಗಳು' ಎಂಬ ವಿಷಯದ ಕುರಿತು ಏರ್ಪಡಿಸಿದ ವಿಚಾರಗೋಷ್ಠಿಯಲ್ಲಿ ವಿಚಾರ ಮಂಡನೆ ಮಾಡಿ ಮಾತನಾಡುತ್ತಿದ್ದರು.

ವಿಶ್ವಬ್ಯಾಂಕ್, ಐಎಂಎಫ್, ಎಡಿಬಿಗಳಿಂದ ನಗರಾಭಿವೃದ್ಧಿಗಾಗಿ ಸಾಲ ಪಡೆಯುವ ಸಂದರ್ಭದಲ್ಲಿ ಅವುಗಳು ನೀಡುವ ಮಾರ್ಗ ಸೂಚಿಯ ಭಾಗವಾಗಿ ನೀರಿನ ಖಾಸಗೀಕರಣ ನಡೆಯುತ್ತಿದೆ. ಸಿಪಿಐ(ಎಂ) ಮತ್ತು ಡಿವೈಎಫ್‌ಐ ನಡೆಸಿದ ಹೋರಾಟದ ಬಳಿಕ ಮಂಗಳೂರು ಮನಪಾ ನೀರಿನ ದರ ಇಳಿಕೆ ಮಾಡಿತು. ಆದರೆ ಈಗ ಮತ್ತೆ ಜನತೆಗೆ 24 ಗಂಟೆ ನಿರಂತರ ನೀರು ಪೂರೈಕೆಯ ಹೆಸರಿನಲ್ಲಿ ವಿಶ್ವಬ್ಯಾಂಕಿನಿಂದ ಸಾಲ ಪಡೆದು ನೀರಿನ ದರ ಏರಿಸಿ ಜನರಿಗೆ ಇನ್ನಷ್ಟು ಹೊರೆ ಹೊರಿಸಲು ಪಾಲಿಕೆ ಮುಂದಾಗಿದೆ. ಖಾಸಗಿ ಸಾರ್ವಜನಿಕ ಸಹಭಾಗಿತ್ವದ ಹೆಸರಿನಲ್ಲಿ ನೀರಿನ ರೀಡಿಂಗ್, ನಳ್ಳಿಗಳ ಜೋಡಣೆ, ಸೇವಾಶುಲ್ಕ ಎಲ್ಲವನ್ನು ಖಾಸಗೀಕರಣ ಮಾಡಲು ಪ್ರಯತ್ನ ನಡೆಯುತ್ತಿದೆ. ಪ್ರಸಕ್ತ ನೇತ್ರಾವತಿ ನದಿಯ ನೀರು ಜಿಲ್ಲೆಯ ಜನರಿಗೆ ಸಾಕಾಗುವಷ್ಟು ಇದೆ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಆದರೆ ಜನರಿಗೆ ಪುಕ್ಕಟೆಯಾಗಿ ನೀರು ನೀಡಬಾರದು ಎಂಬ ವಿಶ್ವಬ್ಯಾಂಕಿನ ಸೂಚನೆಯನ್ನು ಮನಪಾ ತಪ್ಪದೆ ಪಾಲಿಸಲು ಮುಂದಾಗಿರುವ ಕಾರಣ ಖಾಸಗೀಕರಣದತ್ತ ಹೆಚ್ಚಿನ ಒಲವು ತೋರಿಸಲಾಗುತ್ತಿದೆ. ಅಲ್ಲಿ ಜನತೆಯ ಪಾತ್ರ ಏನೂ ಇರುವುದಿಲ್ಲ. ಈ ಬಗ್ಗೆ ನಾವು ಈಗಲೇ ಎಚ್ಚರವಾಗಿದ್ದಲ್ಲಿ ಮಾತ್ರ ಮುಂದಿನ ಅನಾಹುತವನ್ನು ತಪ್ಪಿಸಬಹುದು ಎಂದು ಕೃಷ್ಣಪ್ಪ ಕೊಂಚಾಡಿ ವಿವರಿಸಿದರು.



ವರದಿ : ವಾ.ಉ.

ದ.ಕ.ಜಿಲ್ಲೆಯಲ್ಲಿ ಬೀಳುವ ಮಳೆಯ ಪ್ರಮಾಣ, ನೇತ್ರಾವತಿ ನದಿಯಲ್ಲಿ ಲಭ್ಯವುಳ್ಳ ನೀರಿನ ಪ್ರಮಾಣ, ನೀರಿನ ಮೇಲೆ ಮನಪಾ ವಿಧಿಸುವ ತೆರಿಗೆ ಇವೆಲ್ಲವುಗಳ ಅಂಕೆ–ಸಂಖ್ಯಾ ವಿವರಗಳೊಂದಿಗೆ ಕೃಷ್ಣಪ್ಪ ಕೊಂಚಾಡಿ ವಿಚಾರ ಮಂಡಿಸಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ವಸಂತ ಆಚಾರಿ ಪೂರಕ ವಿಚಾರ ಮಂಡಿಸಿದರು. ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿ, ಮನಪಾ ವಿರುದ್ಧ ಆಗಸ್ಟ್ 27 ರಂದು ಪಕ್ಷವು ನಡೆಸಲಿರುವ ಮಹಾಧರಣಿಯ ಭಾಗವಾಗಿ ಈ ವಿಚಾರಗೋಷ್ಠಿ ನಡೆದಿದೆ ಎಂದು ಪ್ರಸ್ತಾವನೆಯಲ್ಲಿ ತಿಳಿಸಿದರು.

ಮಂಗಳೂರು ಮನಪಾ ಬಿಜೆಪಿ ದುರಾಡಳಿತದ ವಿರುದ್ಧ ವಾಹನ ಪ್ರಚಾರ ಜಾಥಾ:

ಮಂಗಳೂರು ಮನಪಾ ದುರಾಡಳಿತ ಮತ್ತು ಭ್ರಷ್ಟಾಚಾರದ ವಿರುದ್ಧ ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಜನ ಸಂಪರ್ಕ ಜನಾಂದೋಳನವನ್ನು ಈಗ ಎರಡು ತಿಂಗಳ ಹಿಂದೆಯೇಆಯೋಜಿಸಿದ್ದು , ಮನೆ ಮನೆ ಅಭಿಯಾನ ಜುಲಾಯಿ 22 ರಿಂದ ಆರಂಭಗೊಂಡಿದೆ. ಆಗಸ್ಟ್ 6 ರಿಂದ 8ರ ವರೆಗೆ 3 ದಿನಗಳ ವಾಹನ ಪ್ರಚಾರ ಜಾಥಾ ಈಗ ಹೊರಟಿದ್ದು, ಮಂಗಳೂರಿನ ಸುಮಾರು 55 ಕಡೆಗಳಲ್ಲಿ ಜಾಥಾ ತಂಡದ ಸದಸ್ಯರು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುತ್ತಿದ್ದಾರೆ.

ನಾಲ್ಕೂವರೆ ವರ್ಷದ ಬಿಜೆಪಿ ಆಡಳಿತದ ಅವಧಿಯಲ್ಲಿ ರಸ್ತೆ ಕಾಂಕ್ರೀಟೀಕರಣದ ಹೆಸರಲ್ಲಿ ವ್ಯಾಪಕ ಭ್ರಷ್ಟಾಚಾರ, ಫುಟ್‌ಪಾತ್ ಒಳಚರಂಡಿ ರಚಿಸದಿರುವುದು, ರಸ್ತೆಯಲ್ಲೇ ಹರಿಯುವ ಕೊಳಚೆ ನೀರು ಮತ್ತು ತ್ಯಾಜ್ಯಗಳು, ತ್ಯಾಜ್ಯ ನಿರ್ವಹಣೆಗೆ ಸದ್ಯದಲ್ಲೇ ಜಾರಿಯಾಗಲಿರುವ ಹೆಚ್ಚುವರಿ ಮಾಸಿಕ ಶುಲ್ಕ, ಕುಡಿಯುವ ನೀರಿನ ಖಾಸಗೀಕರಣ, ನೀರಿನ ದರ ಏರಿಕೆ, ಅಸಮರ್ಪಕ ಬಿಲ್ ರೀಡಿಂಗ್, ಜನರನ್ನು ಸುಲಿಗೆ ಮಾಡುವ ಸ್ವಯಂಘೋಷಿತ ಆಸ್ತಿ ತೆರಿಗೆ, ಮಿತಿ ಮೀರುತ್ತಿರುವ ಬಿಲ್ಡರ್ ಮತ್ತು ಭೂ ಮಾಫಿಯಾಗಳು, ವ್ಯಾಪಕವಾಗುತ್ತಿರುವ ಮಲೇರಿಯಾ ಇತ್ಯಾದಿ ಸಾಂಕ್ರಮಿಕ ರೋಗಗಳು, ನಗರದ ಆಸ್ಪತ್ರೆಗಳ ಉಚಿತ ಸೇವೆಯ ಕಡಿತ, ದಲಿತರ ಮೀಸಲು ನಿಧಿಯ ದುರ್ವ್ಯಯ, ಶಾಶ್ವತ ವಿಲೇವಾರಿ ಕಾಣದ ಕಸಾಯಿಖಾನೆ ಇತ್ಯಾದಿ ನಗರದ ಜನತೆಯನ್ನು ಬಾಧಿಸುವಂಥ ಸಮಸ್ಯೆಗಳನ್ನು ಜಾಥಾ ಭಾಷಣಕಾರರು ವಿವರಿಸಿರುತ್ತಾರೆ. ಅಲ್ಲದೆ ಆಗಸ್ಟ್ 27 ರಂದು ಮನಪಾ ಕಚೇರಿ ಎದುರು ನಡೆಯಲಿರುವ ಮಹಾಧರಣಿಗೆ ಸಾರ್ವಜನಿಕರು ಬೆಂಬಲಿಸಬೇಕೆಂದು ಕೋರಲಾಯಿತು.

ಆಗಸ್ಟ್ 6 ರಂದು ಬೆಳಿಗ್ಗೆ ಮಂಗಳೂರು ಸೆಂಟ್ರಲ್ ಮಾರ್ಕೆಟ್ ಬಳಿ ವಾಹನ ಪ್ರಚಾರ ಜಾಥಾವನ್ನು ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಉದ್ಘಾಟಿಸಿ ಮಾತನಾಡಿ, ಕೆಂಬಾವುಟವನ್ನು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಅವರಿಗೆ ನೀಡುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು. ಜಾಥಾ ಸಂಚಾಲಕ ಬಿ.ಕೆ.ಇಮ್ತಿಯಾಜ್ ಅವರಿಗೆ ಕೆಂಪು ಶಾಲು ಹೊದಿಸಲಾಯಿತು. ಹಮಾಲಿ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ಬಂದರು ಕಾರ್ಮಿಕರು, ಕಟ್ಟಡ ನಿರ್ಮಾಣ ಕಾರ್ಮಿಕರು, ಡಿವೈಎಫ್‌ಐ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಜಾಥಾ ಉದ್ಘಾಟನೆ ವೇಳೆ ಹಾಜರಿದ್ದರು.

ಜಾಥಾವು 3 ದಿನ ಸಂಚಾರ ನಡೆಸಿ, ಆಗಸ್ಟ್ 8 ರಂದು ಸಾಯಂಕಾಲ 6 ಗಂಟೆಗೆ ಕಾವೂರಿನಲ್ಲಿ ಸಮಾರೋಪಗೊಂಡಿದೆ. ಮಂಗಳೂರು ಮಹಾನಗರದ ಎಲ್ಲಾ ವಾರ್ಡುಗಳ ಮೂಲಕವೂ ಜಾಥಾವು ಹಾದು ಹೋಗಿರುತ್ತದೆ.

ಕಂಪ್ಯೂಟರ್ ಶಿಕ್ಷಕರ ಜಿಲ್ಲಾ ಸಂಘದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ:

ಕಂಪ್ಯೂಟರ್ ಶಿಕ್ಷಕರನ್ನು ಹೊರಗುತ್ತಿಗೆ ಮೂಲಕ ನೇಮಿಸಿರುವ ಸರಕಾರವು ಕೇವಲ ರೂ. 3,332 ಮಾಸಿಕ ವೇತನ ನೀಡುತ್ತಿದೆ. ತಿಂಗಳ ಸಂಬಳವನ್ನು ವಿಳಂಬವಾಗಿ ನೀಡಲಾಗುತ್ತಿದೆ. ಈಗಂತೂ 4 ತಿಂಗಳ ಸಂಬಳ ಬಾಕಿ ಇರುತ್ತದೆ. ಸರಕಾರ ಈ ಸಂಬಂಧ ಕೂಡಲೇ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿ ಸಿಐಟಿಯು ಸಂಯೋಜಿತ ದ.ಕ.ಜಿಲ್ಲಾ ಕಂಪ್ಯೂಟರ್ ಶಿಕ್ಷಕ ಸಂಘದ ಸದಸ್ಯರು ಆಗಸ್ಟ್ 6 ರಂದು ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರಲ್ಲಿ ಪ್ರತಿಭಟನೆ ನಡೆಸಿದರು.

ಇವತ್ತು ಅಸಂಘಟಿತ ಕಾರ್ಮಿಕರು ರೂ.10,000 ವೇತನಕ್ಕಾಗಿ ರಾಷ್ಟ್ರಾದ್ಯಂತ ಹೋರಾಟ ನಡೆಸುತ್ತಿರುವಾಗ ಪರಿಣತ ಕಂಪ್ಯೂಟರ್ ಶಿಕ್ಷಕರಿಗೆ ಜುಜುಬಿ ವೇತನ ನೀಡುತ್ತಿರುವುದು ಖೇದಕರ ಎಂಬುದಾಗಿ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಹೇಳಿದರು.

ದ.ಕ.ಜಿಲ್ಲೆಯ ಸರಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ 127 ಕಂಪ್ಯೂಟರ್ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ಅವರ ಗುತ್ತಿಗೆಯ 4 ವರ್ಷಗಳ ಅವಧಿ ಇನ್ನು ಕೆಲವು ತಿಂಗಳಲ್ಲೇ ಅಂತ್ಯಗೊಳ್ಳಲಿದೆ. ತಮ್ಮ ಸೇವೆಯನ್ನು ಖಾಯಂಗೊಳಿಸಬೇಕೆಂದೂ ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಕಂಪ್ಯೂಟರ್ ಶಿಕ್ಷಕರ ಜಿಲ್ಲಾ ಸಂಘದ ಗೌರವಾಧ್ಯಕ್ಷ ಸುನಿಲ್ ಕುಮಾರ್ ಬಜಾಲ್ ಅವರು ಕೂಡಾ ಮಾತನಾಡಿದರು. ಸಂಘದ ಅಧ್ಯಕ್ಷೆ ಆಶಾ ಸ್ವಾಗತಿಸಿ, ಕಾರ್ಯದರ್ಶಿ ಪೂರ್ಣಿಮಾ ವಂದಿಸಿದರು. ಬಳಿಕ ಸಂಘದ ಪ್ರತಿನಿಧಿಗಳು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಸರಕಾರಕ್ಕೆ ಮನವಿ ಸಲ್ಲಿಸಿದರು.

ನೌಕರನ ಮೇಲೆ ಗುತ್ತಿಗೆದಾರನ ಹಲ್ಲೆ ಖಂಡಿಸಿ ಬಂಟ್ವಾಳದಲ್ಲಿ ಮೆಸ್ಕಾಂ ನೌಕರರ ಪ್ರತಿಭಟನೆ:

ಗುತ್ತಿಗೆ ಮೇಲೆ ಮೀಟರ್ ರೀಡರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಉಮೇಶ್ ಗಟ್ಟಿ ಎಂಬವರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ಆಗಸ್ಟ್ 2 ರಂದು ಸಿಐಟಿಯು ಸಂಯೋಜಿತ ಮೆಸ್ಕಾಂ ನೌಕರರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು. ಪೋಲೀಸರು ಪ್ರಕರಣ ದಾಖಲಿಸಿದ್ದರೂ, ಆರೋಪಿ ಲಕ್ಷ್ಮೀನಾರಾಯಣನನ್ನು ಬಂಧಿಸದೆ ಇರುವುದನ್ನು ಖಂಡಿಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಮೆಸ್ಕಾಂ ನೌಕರರ ಜಿಲ್ಲಾ ಸಂಘದ ಗೌರವಾಧ್ಯಕ್ಷ ಬಿ.ಎಂ.ಭಟ್, ಸಿಐಟಿಯು ಬಂಟ್ವಾಳ ಸಮಿತಿ ಕಾರ್ಯದರ್ಶಿ ರಾಮಣ್ಣ ವಿಟ್ಲ ಮಾತನಾಡಿದರು. ಕಾರ್ಮಿಕ ಮುಖಂಡರಾದ ಬಿ.ವಾಸು ಗಟ್ಟಿ, ಸಂಜೀವ ಬಂಗೇರ, ಬಿ.ನಾರಾಯಣ, ಶೀನ ಬಂಗೇರ, ಶೇಖರ ಲಾಯಿಲ, ಮೆಸ್ಕಾಂ ನೌಕರರ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಹೇಶ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಆರೋಪಿ ಲಕ್ಷ್ಮೀನಾರಾಯಣನನ್ನು ಮರುದಿನ ಬೆಂಗಳೂರಿನಲ್ಲಿ ಬಂಧಿಸಿ ಕೋರ್ಟಿಗೆ ಹಾಜರುಪಡಿಸಿರುತ್ತಾರೆ.

ಆಹಾರ ಭದ್ರತೆಗಾಗಿ ಆಗ್ರಹಿಸಿ ಉಡುಪಿಯಲ್ಲಿ ಸಿಪಿಐ(ಎಂ) ಕಾರ್ಯಕರ್ತರಿಂದ ರಸ್ತೆತಡೆ, ಬಂಧನ:

ಆಗಸ್ಟ್ 2 ರಂದು ಸಿಪಿಐ(ಎಂ) ಉಡುಪಿ ತಾಲೂಕು ಸಮಿತಿ ನೇತೃತ್ವದಲ್ಲಿ ಉಡುಪಿ ನಗರದ ಜೋಡುಕಟ್ಟೆ ಮತ್ತು ಅಂಬಾಗಿಲು ಎಂಬಲ್ಲಿ ರಸ್ತೆ ತಡೆ ನಡೆಸಲಾಯಿತು. ಜೋಡುಕಟ್ಟೆಯಲ್ಲಿ ಪಕ್ಷದ ತಾಲೂಕು ಕಾರ್ಯದರ್ಶಿ ಪಿ.ವಿಶ್ವನಾಥ ರೈ ನೇತೃತ್ವದಲ್ಲಿ ನಡೆದರೆ, ಅಂಬಾಗಿಲಿನಲ್ಲಿ

ಪುಟ 12 ಕ್ಕೆ


ಜನಶಕ್ತಿ
ಕನ್ನಡ ವಾರಪತ್ರಿಕೆ

ಬಿಜೆಪಿಯ ಕಲ್ಪನಾ ವಿಹಾರ

'ಪೀಪಲ್ಸ್ ಡೆಮಾಕ್ರೆಸಿ' ವಾರ ಪತ್ರಿಕೆಯ ಆಗಸ್ಟ್ 12, 2012 ರ ಸಂಚಿಕೆಯ ಸಂಪಾದಕೀಯ

2014ರ ಸಾರ್ವತ್ರಿಕ ಚುನಾವಣೆಗಳಲ್ಲಿ ಬರುವ ಸರಕಾರದ ಮುಖ್ಯಸ್ಥರಾಗುವವರು ಬಿಜೆಪಿಗೂ ಸೇರಿರುವುದಿಲ್ಲ, ಕಾಂಗ್ರೆಸಿಗೂ ಸೇರಿರುವುದಿಲ್ಲ ಎಂದು ಶ್ರೀಯುತ ಅಡ್ವಾಣಿಯವರು ಸೈಬರ್ ಲೋಕದಲ್ಲಿ ಬಾಂಬು ಸಿಡಿಸಿದ್ದಾರೆ. ಸರಕಾರ ರಚಿಸುವ ಓಟದಲ್ಲಿ ಬಿಜೆಪಿ ಇರುವುದಿಲ್ಲ ಎಂದು ಈ ರೀತಿ ಒಪ್ಪಿಕೊಂಡಿರುವುದು ಸಹಜವಾಗಿ ಆರೆಸ್ಸೆಸ್ ವಿಷವೃಕ್ಷದ ಹಲವಾರು ಟೊಂಗೆಗಳು ಮತ್ತು ಎನ್‌ಡಿಎ ಮಿತ್ರರಿಗೆ ಆಘಾತ ಉಂಟು ಮಾಡಿದೆ. ಆದರೂ ತಮಾಷೆಯೆಂದರೆ, ಇದು ಅವರ ಬೇರೆ ಯಾವುದೇ ಅಂದಾಜಿಗಿಂತ ವಾಸ್ತವಕ್ಕೆ ಅತ್ಯಂತ ಹತ್ತಿರವಾಗಿದೆ. ತನಗೆ ತಿಳಿಯದೆಯೇ, ಅಡ್ವಾಣಿಯವರು ದೇಶಕ್ಕೊಂದು ಪರ್ಯಾಯ ಧೋರಣೆಯ ದಿಕ್ಕು ಬೇಕಾಗಿದೆ ಎಂದೂ, ಧೋರಣೆಯ ದಿಕ್ಪಥದಲ್ಲಿ ಇಂತಹ ಜನಹಿತಕಾರಿ ಪಲ್ಲಟವನ್ನು ತರುವಲ್ಲಿ ನೇತೃತ್ವ ನೀಡುವುದು ಬಿಜೆಪಿಗಾಗಲೀ, ಕಾಂಗ್ರೆಸಿಗಾಗಲೀ ಸಾಧ್ಯವಿಲ್ಲ ಎಂದೂ ಒಪ್ಪಿಕೊಳ್ಳುತ್ತಿರುವಂತೆ ಕಾಣುತ್ತಿದೆ.

ವಿನ್‌ಸ್ಟನ್ ಚರ್ಚಿಲ್, ಅಂಧಾಭಿಮಾನಿ ಅಂದರೆ, "ತನ್ನ ಮನಸ್ಸು ಬದಲಿಸಿಕೊಳ್ಳಲಾರದ ಮತ್ತು ತನ್ನ ವಿಷಯ ಬದಲಿಸದ ಒಬ್ಬ ವ್ಯಕ್ತಿ" ಎಂದೊಮ್ಮೆ ವರ್ಣಿಸಿದ್ದರಂತೆ. ಬಿಜೆಪಿಯ ಪಳಗಿದ ಯುದ್ಧಕುದುರೆ, ಶ್ರೀಯುತ ಎಲ್.ಕೆ.ಅಡ್ವಾಣಿ, ಸೈಬರ್‌ಲೋಕದಲ್ಲಿ ತನ್ನ ಇತ್ತೀಚಿನ ಬಾಂಬು ಸಿಡಿಸಿ ಇದರ ಮರುನಿರೂಪಣೆ ಮಾಡಿರುವಂತೆ ಕಾಣುತ್ತದೆ. ತಾನಿನ್ನು ಪ್ರಧಾನ ಮಂತ್ರಿಯ ಸ್ಪರ್ಧೆಯಲ್ಲಿ ಇಲ್ಲ ಎಂಬ ಸಂಗತಿಯನ್ನು ಒಪ್ಪಿಕೊಂಡು ಅವರು ವಿಷಯವನ್ನು ಬದಲಿಸುತ್ತಿದ್ದಾರೆ. ಆತ ತನ್ನ ಮನಸ್ಸು ಬದಲಿಸಿಕೊಳ್ಳಲಾರ ಎಂಬುದು ಸಂಸತ್ತಿನ ಮಳೆಗಾಲದ ಅಧಿವೇಶನದ ಆರಂಭದ ದಿನ ವೇದ್ಯವಾಗಿದೆ–ಅಸ್ಸಾಂನ ಖಂಡನೀಯ ಹಿಂಸಾಚಾರ ಮತ್ತು ಗಲಭೆಗಳನ್ನು ಬಳಸಿಕೊಂಡು ತನ್ನ ಕೋಮುವಾದಿ ವಿಷವನ್ನು ಕಾರಿಕೊಂಡಾಗ. 2014ರ ಸಾರ್ವತ್ರಿಕ ಚುನಾವಣೆಗಳಲ್ಲಿ ಬರುವ ಸರಕಾರದ ಮುಖ್ಯಸ್ಥರಾಗುವವರು ಬಿಜೆಪಿಗೂ ಸೇರಿರುವುದಿಲ್ಲ, ಕಾಂಗ್ರೆಸಿಗೂ ಸೇರಿರುವುದಿಲ್ಲ ಎಂದು ತನ್ನ ಬ್ಲಾಗಿನಲ್ಲಿ ಅವರು ಹೇಳಿಕೊಂಡಿದ್ದಾರೆ. ಸರಕಾರ ರಚಿಸುವ ಓಟದಲ್ಲಿ ಬಿಜೆಪಿ ಇರುವುದಿಲ್ಲ ಎಂದು ಈ ರೀತಿ ಒಪ್ಪಿಕೊಂಡಿರುವುದು ಸಹಜವಾಗಿ ಆರೆಸ್ಸೆಸ್ ವಿಷವೃಕ್ಷದ ಹಲವಾರು ಟೊಂಗೆಗಳು ಮತ್ತು ಎನ್‌ಡಿಎ ಮಿತ್ರರಿಗೆ ಆಘಾತ ಉಂಟು ಮಾಡಿದೆ.



ಈ ಬ್ಲಾಗಿನ ಇನ್ನೊಂದು, ಅಷ್ಟೇನೂ ಮರೆಮಾಚದ ಸಂದೇಶವೆಂದರೆ, ತಾನಲ್ಲದಿದ್ದರೆ, ಬಿಜೆಪಿಯಿಂದ ಬೇರಾರನ್ನೂ ಪ್ರಧಾನ ಮಂತ್ರಿ ಅಭ್ಯರ್ಥಿಯೆಂದು ಪ್ರದರ್ಶಿಸುವಂತಿಲ್ಲ. ಈ ಹುದ್ದೆಗೆ ಬಿಜೆಪಿಯೊಳಗೆ ಒಂದು ಗಂಭೀರ ಸ್ಪರ್ಧೆಯಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಗುಜರಾತದ ಬಿಜೆಪಿ ಮುಖ್ಯಮಂತ್ರಿ, ಬಿಜೆಪಿ ಅಧ್ಯಕ್ಷ, ಸಂಸತ್ತಿನ ಎರಡೂ ಸದನಗಳ ಪ್ರತಿಪಕ್ಷ ಮುಖಂಡರು ಮತ್ತು ಸ್ವತಃ ಅಡ್ವಾಣಿ ಈ ವಿಷಯದಲ್ಲಿ ತಮ್ಮ ಆಶಯಗಳನ್ನು ಘೋಷಿಸಿರುವವರು.

ಬಿಜೆಪಿ ಎಂಬುದು ಆರೆಸ್ಸೆಸ್‌ನ ರಾಜಕೀಯ ಅಂಗವಾಗಿರುವುದರಿಂದಾಗಿ ಮತ್ತು ಆರೆಸ್ಸೆಸ್ ಬಿಜೆಪಿ ಅಧ್ಯಕ್ಷರಿಗೆ ಎರಡನೇ ಕಾರ್ಯಾವಧಿ ಕೊಟ್ಟಿರುವುದರಿಂದ ಆತ ಪ್ರಧಾನಿ ಅಭ್ಯರ್ಥಿಯಾಗುವ ಸಾಧ್ಯತೆ ಬಹುಪಟ್ಟಾಗಿದೆ ಎಂಬ ಆತಂಕ ಶ್ರೀಯುತ ಅಡ್ವಾಣಿಯವರಿಗೆ. ಹಿಂದೊಂದು ಸಂದರ್ಭದಲ್ಲಿ ಹಗರಣ ಪೀಡಿತ ಯುಪಿಎ ಸರಕಾರವನ್ನು ತರಾಟೆಗೆ ತಗೊಳ್ಳುವಲ್ಲಿ ವಿಫಲರಾಗಿದ್ದಾರೆಂದು ಬಿಜೆಪಿ ಅಧ್ಯಕ್ಷರ ಮೇಲೆ ಪ್ರಹಾರ ಮಾಡಿದ್ದರು. ಅದೊಂದು ಆಶ್ಚರ್ಯವೇ, ಏಕೆಂದರೆ ಲೋಕಸಭೆಯಲ್ಲಿ ಮುಂದಿನ ಆಸನದಲ್ಲಿ ಕೂರುವವರು ಶ್ರೀಯುತ ಅಡ್ವಾಣಿಯವರೇ. ಎನ್‌ಡಿಎಯಲ್ಲಿರುವ ಬಿಜೆಪಿ ಮಿತ್ರರು ಗುಜರಾತ ಮುಖ್ಯಮಂತ್ರಿಯನ್ನು ಪ್ರಧಾನಮಂತ್ರಿ ಅಭ್ಯರ್ಥಿಯಾಗಿ ಪ್ರದರ್ಶಿಸುವುದಕ್ಕೆ ತಮ್ಮ ಅಸಮಾಧಾನವನ್ನು ಬಹಿರಂಗವಾಗಿಯೇ ವ್ಯಕ್ತಪಡಿಸಿದ್ದಾರೆ. ಬಿಹಾರದ ಮುಖ್ಯಮಂತ್ರಿಗಳು ಇದನ್ನು ನೇರವಾಗಿ ನಿಸ್ಸಂದಿಗ್ಧವಾಗಿಯೇ ಹೇಳಿದ್ದಾರೆ.

ಈ ಬಾರಿ ವಾಸ್ತವಕ್ಕೆ ಹತ್ತಿರ

ಶಿವಸೇನೆಯ ಬಾಳ ಠಾಕ್ರೆ ಅವರ ಪಕ್ಷದ ಮುಖವಾಣಿಯ ಸಂಪಾದಕೀಯದಲ್ಲಿ ಅಡ್ವಾಣಿಯವರ ಬ್ಲಾಗನ್ನು "ಯುದ್ಧ ಆರಂಭವಾಗುವ ಮೊದಲೇ ಅದರ ಫಲಿತಾಂಶದ ಬಗ್ಗೆ ಖಚಿತವಿಲ್ಲೆಂದು ಹೇಳಿ ಇಡೀ ಸೇನೆಯನ್ನು ನಿರುತ್ಸಾಹಗೊಳಿಸುವ" ಒಬ್ಬ ಸೇನಾಪತಿಯೊಂದಿಗೆ ಹೋಲಿಸಿದ್ದಾರೆ. "ಸ್ಥೈರ್ಯ ಮತ್ತು ಶಕ್ತಿಯ ಒಂದು ಗುಟುಕು ಬೇಕಾದರೆ" ಬಂದು ತನ್ನನ್ನು ಭೇಟಿಯಾಗಿ ಎಂದು ಅವರು ಅಡ್ವಾಣಿಯವರನ್ನು ಆಹ್ವಾನಿಸಿದ್ದಾರೆ. ಜೆಡಿ(ಯು) ಮತ್ತು ಅಕಾಲಿದಳದಂತಹ ಇತರ ಕೆಲವು ಎನ್‌ಡಿಎ ಮಿತ್ರರು ಅಡ್ವಾಣಿಯವರ ಈ ನಿರ್ಧಾರಣೆಗೂ ತಮಗೂ ಸಂಬಂಧವಿಲ್ಲ ಎಂದಿದ್ದಾರೆ. ಆದರೂ ತಮಾಷೆಯೆಂದರೆ, ಈ ನಿರ್ಧಾರಣೆ ಬೇರೆ ಯಾವುದೇ ಅಂದಾಜಿಗಿಂತ ವಾಸ್ತವಕ್ಕೆ ಅತ್ಯಂತ ಹತ್ತಿರವಾಗಿದೆ.

ವಿಚಿತ್ರವೆಂದರೆ, ಅಡ್ವಾಣಿ 2014ರ ಸಾರ್ವತ್ರಿಕ ಚುನಾವಣೆಗಳ ನಂತರ ಯಾವುದೇ ಮೂರನೇ ರಂಗದ ಸರಕಾರದ ಸಾಧ್ಯತೆಯನ್ನು ಇಲ್ಲಗಳೆದಿದ್ದಾರೆ. ಬಹುಶಃ ಅವರು ಮುಂದಿನ ಸರಕಾರದ ನೇತೃತ್ವವನ್ನು ಒಬ್ಬ ಯುಪಿಎ ಮಿತ್ರ ಪಕ್ಷದವರು ವಹಿಸುವ ಸಾಧ್ಯತೆಯನ್ನು ಕಾಣುತ್ತಿರಬೇಕು. ಏನೇ ಆಗಲಿ, ಇಂತಹ ಎಲ್ಲ ಊಹಾಪೋಹಗಳನ್ನು ಹಗಲುಗನಸಿನ ಕ್ಷೇತ್ರಕ್ಕೆ ತಳ್ಳಬೇಕಾಗಿದೆ. ಗಾಳಿಪಟ ಹಾರ ಬಿಡುವ ಮಾನವ ಮೆದುಳಿನ ಸಾಮರ್ಥ್ಯ ಅನಂತ. ಶ್ರೀಯುತ ಅಡ್ವಾಣಿಯವರು ಇದನ್ನು ಮಾಡಬಾರದು ಎಂದು ನಿರಾಕರಿಸಲಾಗದು. ಸಾರ್ವತ್ರಿಕ ಚುನಾವಣೆಗಳ ನಂತರದ ಸಾಧ್ಯತೆಗಳ ಬಗ್ಗೆ ಆರೆಸ್ಸೆಸ್/ಬಿಜೆಪಿಯ ಕಲ್ಪನಾ ವಿಲಾಸಗಳ ಬಗ್ಗೆ ಈ ಅಂಕಣದಲ್ಲಿ ಹಿಂದೊಮ್ಮೆ ಟಿಪ್ಪಣಿ ಮಾಡಿದ್ದೆವು. ಸಾರ್ವತ್ರಿಕ ಚುನಾವಣೆಗಳು ನಡೆಯುವುದು ಇನ್ನೆರಡು ವರ್ಷಗಳ ನಂತರವಾದರೂ, ನಿಮಿಷ–ನಿಮಿಷಕ್ಕೂ ಬಿಜೆಪಿಯ ದೆಸೆ ಇಳಿಮುಖವಾಗುತ್ತಿದ್ದರೂ, ಅಣ್ಣಾ ತಂಡದಂತಹ ಆಂದೋಲನಗಳಿಂದ ಲಾಭ ಗಿಟ್ಟಿಸುವ ಅದರ ನಿರೀಕ್ಷೆಗಳು ಕರಗಿ ಹೋಗುತ್ತಿದ್ದರೂ, ತನ್ನ ಪ್ರಧಾನ ಮಂತ್ರಿ ಅಭ್ಯರ್ಥಿ ಯಾರಾಗಬೇಕು ಎಂದು ಭಯಂಕರ ಆಂತರಿಕ ಕಿತ್ತಾಟಗಳಲ್ಲಿ ಅದು ತೊಡಗಿದೆ!

ಬುದ್ಧಿಪೂರ್ವಕವಲ್ಲದ ತಪ್ಪೊಪ್ಪಿಗೆ!

ತನಗೆ ತಿಳಿಯದೆಯೇ, ಅಡ್ವಾಣಿಯವರು ದೇಶಕ್ಕೊಂದು ಪರ್ಯಾಯ ಧೋರಣೆಯ ದಿಕ್ಕು ಬೇಕಾಗಿದೆ ಎಂದು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಳ್ಳುತ್ತಿರುವಂತೆ ಕಾಣುತ್ತಿದೆ. ಅಲ್ಲದೆ ದೇಶಕ್ಕೂ, ಜನತೆಗೂ ಪ್ರಯೋಜನಕಾರಿಯಾಗುವಂತೆ ಧೋರಣೆಯ ದಿಕ್ಪಥದಲ್ಲಿ ಇಂತಹ ಪಲ್ಲಟವನ್ನು ತರುವಲ್ಲಿ ನೇತೃತ್ವ ನೀಡುವುದು ಬಿಜೆಪಿಗಾಗಲೀ, ಕಾಂಗ್ರೆಸಿಗಾಗಲೀ ಸಾಧ್ಯವಿಲ್ಲ ಎಂದೂ ಅವರು ಒಪ್ಪಿಕೊಳ್ಳುತ್ತಿರುವಂತೆ ಕಾಣುತ್ತಿದೆ.

ದೇಶಕ್ಕಿಂದು ಅದರ ಆರ್ಥಿಕ ಮತ್ತು ಸಾಮಾಜಿಕ ಧೋರಣೆಗಳ ದಿಕ್ಕಿನಲ್ಲಿ ಒಂದು ತೀವ್ರ ಬದಲಾವಣೆಯ ಅಗತ್ಯವಿದೆ. ಭಾರತದ ಗಣತಂತ್ರೀಯ ಸಂವಿಧಾನದ ಅಡಿಯಲ್ಲಿ, ಕೋಮುವಾದವನ್ನು ದೃಢವಾಗಿ ತಿರಸ್ಕರಿಸುತ್ತಾ, ದೇಶದ ಶ್ರೀಮಂತ ವೈವಿಧ್ಯತೆಯನ್ನು ಯಾವುದೇ ರಾಜಿಯಿಲ್ಲದಂತೆ ಕಾಯ್ದುಕೊಂಡು ರಕ್ಷಿಸಿಕೊಳ್ಳುತ್ತಲೇ, ಆರ್ಥಿಕ ಧೋರಣೆಯನ್ನು ಬದಲಿಸುವ ಅಗತ್ಯವಿದೆ, ಏಕೆಂದರೆ ಈ ಧೋರಣೆ ಬಹುಪಾಲು ಜನಗಳ ಹಿತವನ್ನು ಬಲಿಗೊಟ್ಟು ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ದೊಡ್ಡ ಭಾರತೀಯ ಬಂಡವಾಳಿಗರಿಗಷ್ಟೇ ಅನುಕೂಲ ಮಾಡಿಕೊಡುವಂತದ್ದು. ಆರ್ಥಿಕ ಧೋರಣೆಗಳ ವಿಷಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ನವ–ಉದಾರವಾದಿ ಧೋರಣೆಗಳಿಗೆ ಬದ್ಧವಾಗಿವೆ. ಆದ್ದರಿಂದ ಸಾರ್ವತ್ರಿಕ ಚುನಾವಣೆಗಳನ್ನು ಅನುಸರಿಸಿ ಇಂತಹ ಧೋರಣೆಯ ಪಲ್ಲಟವನ್ನು ತರುವಲ್ಲಿ ನೇತೃತ್ವ ನೀಡಬಲ್ಲ ಒಂದು ಬದಲಾವಣೆಯನ್ನು ತರುವುದು ಭಾರತಕ್ಕೆ ಹಿತಕರ.

ನಮ್ಮ ಬಳಿ ಒಂದು ಚೈತನ್ಯಶೀಲ ಮತ್ತು ಸಮೃದ್ಧ ಭಾರತವನ್ನು ಕಟ್ಟಲು ಅಗತ್ಯವಾದ ಸಂಪನ್ಮೂಲಗಳೂ ಇವೆ, ಮಾನವ ಶಕ್ತಿಯೂ ಇದೆ. ಇದಕ್ಕಾಗಿ ನವ–ಉದಾರವಾದಿ ಆರ್ಥಿಕ ಧೋರಣೆಯ ದಿಕ್ಪಥವನ್ನು ಬದಲಿಸಬೇಕಾಗಿದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಜನಗಳನ್ನು ದೊಡ್ಡಪ್ರಮಾಣದಲ್ಲಿ ಅಣಿನೆರೆಸುತ್ತಾ ಸಾಧಿಸಬೇಕೆಂದಿರುವ ಗುರಿ ಇದೇ, ಒಂದು ಉತ್ತಮ ಭಾರತವನ್ನು ನಿರ್ಮಿಸಲು ಇದನ್ನು ಇನ್ನಷ್ಟು ಬಲಪಡಿಸಬೇಕಾಗಿದೆ.

2009ರ ನೆರೆಹಾವಳಿ, 2011 ಮತ್ತು 2012ರ ಬರ, ಹಿಂದೆಂದೂ ಕಂಡರಿಯದ ಬೆಲೆ ಏರಿಕೆ, ಸಾಲದ ಬಾಧೆಯಿಂದ ಕಂಗೆಟ್ಟ ರೈತರ ಆತ್ಮಹತ್ಯೆಗಳು, ಉದ್ಯೋಗ ಖಾತ್ರಿ ಯೋಜನೆ ಜಾರಿಯ ವಿಫಲತೆಯಿಂದ ಕೂಲಿಕಾರರ ವಲಸೆಯ ಸಂದರ್ಭದಲ್ಲಿ ಈ ಪ್ರಮುಖ ರಾಜಕೀಯ ಪಕ್ಷಗಳು ಜನರ ನೆರವಿಗೆ ಧಾವಿಸಲಿಲ್ಲ. ರಾಜ್ಯದಲ್ಲಿ ಬಯಲಾದ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಈ ಮೂರು ಪಕ್ಷಗಳ ಹಿರಿ-ಕಿರಿಯ ನಾಯಕರ ಪಾತ್ರ ಬಯಲಿಗೆ ಬಂದಿರುವುದರಿಂದ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತುವ ಶಕ್ತಿ ಉಡುಗಿ ಹೋಗಿದೆ. ಚುನಾವಣೆ ಹತ್ತಿರ ಬರುತ್ತಿರುವುದರಿಂದ ಈ ಪಕ್ಷಗಳು ಹೆಚ್ಚು ದುಡ್ಡು ಖರ್ಚು ಮಾಡಬಲ್ಲ(ಹೆಚ್ಚು ದುಡ್ಡು ಹಂಚಬಲ್ಲ) ಅಭ್ಯರ್ಥಿಗಳನ್ನು ಹುಡುಕುವುದು, ಜಾತಿ ಆಧಾರಿತ ಬೆಂಬಲಕ್ಕಾಗಿ ಪ್ರಯತ್ನ ಪಡುವುದು ಇತ್ಯಾದಿ ಒಳದಾರಿಗಳನ್ನು ಹುಡುಕುವುದರಲ್ಲಿ ತಲ್ಲೀನವಾಗಿವೆ.

ಗುಂಪುಗಾರಿಕೆಯಿಂದ ಜರ್ಜರಿತಗೊಂಡ ಬಿಜೆಪಿ :

ಜಗದೀಶ್ ಶೆಟ್ಟರ್ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡುವ ಮೂಲಕ ರಾಜ್ಯ ಬಿಜೆಪಿಯಲ್ಲಿ ಬುಗಿಲೆದ್ದಿದ್ದ ಆಂತರಿಕ ಕಿತ್ತಾಟ ತಾತ್ಕಾಲಿಕವಾಗಿ ಶಮನಗೊಂಡಿದೆ. ಆದರೆ ಬಿಜೆಪಿ ಒಳಗಿನ ಗುಂಪುಗಳ ನಡುವಿನ ಹಗ್ಗ ಜಗ್ಗಾಟ ಹಲವು ನಾಟಕೀಯ ಬೆಳವಣಿಗೆಗಳಿಗೆ ಕಾರಣವಾಯಿತು ಮಾತ್ರವಲ್ಲ ಬಾರೀ ಶಿಸ್ತಿನ ಪಕ್ಷ ಎಂದು ಕೊಳ್ಳುತ್ತಿದ್ದ ಬಿಜೆಪಿ ಜನತೆಯ ಎದುರು ತೀರಾ ಅಪಹಾಸ್ಯಕ್ಕೀಡಾಗುವಂತಾಯಿತು. ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತ ಗೊಳಿಸಲ್ಪಟ್ಟ ಸದಾನಂದಗೌಡರ ಬಣ, ಸದಾನಂದಗೌಡರಿಗೆ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನ, ಈಶ್ವರಪ್ಪನವರಿಗೆ ಉಪಮುಖ್ಯಮಂತ್ರಿ ಸ್ಥಾನ ಹಾಗೂ ಸಚಿವ ಸಂಪುಟ ದಲ್ಲಿ ಸದಾನಂದಗೌಡ ಬಣ ಮತ್ತು ಯಡಿಯೂರಪ್ಪ ಬಣಗಳಿಗೆ ಸಮಾನ ಸ್ಥಾನಮಾನ ನೀಡಲು ಹೈಕಮಾಂಡ್ ಒಪ್ಪಿದರೆ ಮಾತ್ರ ಶಾಸಕಾಂಗ ಪಕ್ಷದ ಸಭೆಗೆ ಹಾಜರಾಗುವುದಾಗಿ ಸದಾನಂದಗೌಡ ಬಣ ಪಟ್ಟು ಹಿಡಿಯಿತು. ಇದರಿಂದಾಗಿ ಅಂದು ಬೆಳಿಗ್ಗೆ 11 ಗಂಟೆಗೆ ನಡೆಯಬೇಕಿದ್ದ ಶಾಸಕಾಂಗ ಪಕ್ಷದ ಸಭೆ ಸಂಜೆ 4ಕ್ಕೆ ಆರಂಭವಾಯಿತು. ಯಾವುದೇ ತೀರ್ಮಾನಕ್ಕೆ ಬರಲಾಗದೆ ಬಿಕ್ಕಟ್ಟು ಮುಂದುವರೆಯಿತು. ಮರುದಿನ ಮಧ್ಯಾಹ್ನ ಈಶ್ವರಪ್ಪ ಅವರನ್ನು ಉಪಮುಖ್ಯಮಂತ್ರಿಯನ್ನಾಗಿಸುವ ಭರವಸೆ ಸಿಕ್ಕ ನಂತರವಷ್ಟೇ ಡಿವಿಎಸ್ ಬಣ ತಮ್ಮ ಪಟ್ಟು ಸಡಿಲಿಸಿತು. ಡಿ.ವಿ. ಸದಾನಂದಗೌಡರು ಸಿ.ಎಂ ಸ್ಥಾನಕ್ಕೆ ರಾಜೀನಾಮೆ ನೀಡಬಾರದು ಎಂದು ಆಗ್ರಹಿಸಿ ಒಕ್ಕಲಿಗ ಸಮುದಾಯಕ್ಕೆ ಸೇರಿದ್ದ ಜನ ಬೆಂಗಳೂರಿನಲ್ಲಿ ಮತ್ತು ಇತರ ಕಡೆ ಪ್ರತಿಭಟನೆಗಳನ್ನು ನಡೆಸಿದರು. 'ನಾನು ಪಕ್ಷದ ಶಿಸ್ತಿನ ಸಿಪಾಯಿ. ವರಿಷ್ಠರ ಸೂಚನೆಯಂತೆ ನಡೆದುಕೊಳ್ಳುವೆ' ಎಂದು ಹೇಳಿಕೆ ನೀಡಿದ್ದ ಸದಾನಂದಗೌಡರು ತಮ್ಮ ಜಾತಿ ಬಾಂಧವರನ್ನು ಉದ್ದೇಶಿಸಿ ವಿರಾವೇಶದ ಭಾಷಣ ಮಾಡುವ ಮೂಲಕ ಸಾಕಷ್ಟು ಅಚ್ಚರಿಯನ್ನು ಮೂಡಿಸಿದರು. ಮತ್ತೊಂದೆಡೆ ಪರಿಸ್ಥಿತಿಯ ಲಾಭ ಪಡೆಯಲು ಅನಂತಕುಮಾರ್ ಬಣ ತಂತ್ರ ರೂಪಿಸತೊಡಗಿತ್ತು. ಸಚಿವ ಅಶೋಕ್ 'ಜಾತಿ' ಹಣೆಪಟ್ಟಿಯೊಂದಿಗೆ ಉಪ ಮುಖ್ಯಮಂತ್ರಿ ಹುದ್ದೆಗೆ ಬೇಡಿಕೆ ಇಟ್ಟಿದ್ದರು. ಅತ್ತ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಬಣವೂ

> ಕರ್ನಾಟಕದಲ್ಲಿ ಭಾಜಪ ಪಕ್ಷದ ಸರ್ಕಾರ ಅಧಿಕಾರಕ್ಕಾಗಿನ ಆಂತರಿಕ ಕಿತ್ತಾಟದಿಂದ ಕುಸಿದು ಬಿದ್ದರೂ, ಅಥವ ತೇಪೆ ಹಚ್ಚುತ್ತಾ 5 ವರ್ಷದ ಅವಧಿಯನ್ನು ಪೂರ್ಣಗೊಳಿಸಿದರೂ ಹೆಚ್ಚೇನೂ ವ್ಯತ್ಯಾಸ ಆಗದು, ಚುನಾವಣೆಯಂತೂ ಬಂದೇ ಬರುತ್ತದೆ. ಇದೆ 2013ರಲ್ಲಿ ಬರುವ ಚುನಾವಣೆ ಮೂಂದೂಡಲು ಯಾರಿಂದಲೂ ಸಾಧ್ಯವಿಲ್ಲ. ಭಾಜಪವೇ ಆಗಲಿ, ಕಾಂಗ್ರೆಸ್ ಆಗಲಿ, ಜೆಡಿ(ಎಸ್) ಆಗಲಿ, ಈ ಪಕ್ಷಗಳಿಗೆ ಮತದಾರರನ್ನು ಎದುರಿಸುವ ಧೈರ್ಯವಿಲ್ಲ, ಈ ಪಕ್ಷಗಳು ಹೆಚ್ಚು ದುಡ್ಡು ಖರ್ಚು ಮಾಡಬಲ್ಲ(ಹೆಚ್ಚು ದುಡ್ಡು ಹಂಚಬಲ್ಲ) ಅಭ್ಯರ್ಥಿಗಳನ್ನು ಹುಡುಕುವುದು, ಜಾತಿ ಆಧಾರಿತ ಬೆಂಬಲಕ್ಕಾಗಿ ಪ್ರಯತ್ನ ಪಡುವುದು ಇತ್ಯಾದಿ ಒಳದಾರಿಗಳನ್ನು ಹುಡುಕುವುದರಲ್ಲಿ ತಲ್ಲೀನವಾಗಿವೆ.

ನಿತ್ಯಾನಂದಸ್ವಾಮಿ

ಭಾಜಪ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ಚುನಾವಣಾ ತಾಲೀಮು ಆರಂಭ



ಹೊಸ ಹೊಸ ಷರತ್ತುಗಳನ್ನು ಮುಂದಿಡಲಾರಂಭಿಸಿತ್ತು. ಪರಿಸ್ಥಿತಿ ಮತ್ತಷ್ಟು ಕಗ್ಗಂಟಾಗಿ ಹೈಕಮಾಂಡ್ ಮಾತು ಕೇಳುವ ಸ್ಥಿತಿಯಲ್ಲಿ ಯಾರೊಬ್ಬರು ಇಲ್ಲ ಎಂಬ ಸನ್ನಿವೇಶ ನಿರ್ಮಾಣವಾಯಿತು. ವರಿಷ್ಠರು, ಬೇರೆ ದಾರಿ ಇಲ್ಲದೆ ವಿವಿಧ ಬಣಗಳ ಎಲ್ಲ ಬೇಡಿಕೆಗಳಿಗೆ ಒಪ್ಪಿಗೆ ನೀಡಿ, ರಾಜ್ಯಾಧ್ಯಕ್ಷರ ಹೆಸರನ್ನು ಡಿಲ್ಲಿಯಲ್ಲಿ ಪ್ರಕಟಿಸುವುದಾಗಿ ಹೇಳಿ ಹೊರಟು ಹೋದರು. ಇದರೊಂದಿಗೆ ಒಂದು ಅಧ್ಯಾಯ ಮುಕ್ತಾಯಗೊಂಡರೂ ಇನ್ನೊಂದು ಅಸಹ್ಯಕರ ಆಧ್ಯಾಯ ಆರಂಭಗೊಂಡಂತಾಯಿತು.

ಜಗದೀಶ್ ಶೆಟ್ಟರ್ ಬಿಜೆಪಿಯ 3ನೇ ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿಕೊಳ್ಳುವ ಜತೆಯಲ್ಲಿ ಕೆ.ಎಸ್. ಈಶ್ವರಪ್ಪ ಮತ್ತು ಆರ್. ಆಶೋಕ್ ಇಬ್ಬರು ಉಪಮುಖ್ಯಮಂತ್ರಿಗಳಾಗಿ ಹುದ್ದೆಗಳನ್ನು ಅಲಂಕರಿಸುವ ಮೂಲಕ ಹೊಸ ಸಂಪ್ರದಾಯವನ್ನು ಹುಟ್ಟುಹಾಕಲಾಯಿತು. ಈ ಮೂರು ಪ್ರಮುಖ ಹುದ್ದೆಗಳನ್ನು ರಾಜ್ಯದ 3 ಪ್ರಮುಖ ಜಾತಿಗಳಿಗೆ ವಹಿಸಿಕೊಡುವ ಮೂಲಕ ಜಾತಿ ರಾಜಕಾರಣವನ್ನು ಬಲಪಡಿಸುವ ಇನ್ನೊಂದು ಕೆಟ್ಟ ಪದ್ಧತಿಗೆ ಜನ್ಮ ನೀಡಿದಂತಾಯಿತು. ಅಶೋಕ್ ಬದಲು ಪರಿಶಿಷ್ಟ ಜಾತಿಗೆ ಸೇರಿದ್ದ ಗೋವಿಂದ ಕಾರಜೋಳ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂಬ ಸದಾನಂದಗೌಡರ ಒತ್ತಾಯಕ್ಕೆ ಮನ್ನಣೆ ದೊರೆಯಲಿಲ್ಲ. ಪ್ರಬಲ ಜಾತಿಗಳ ರಾಜಕೀಯ ಮೇಲಾಟದಿಂದಾಗಿ ಪ್ರಜಾಪ್ರಭುತ್ವ, ಪ್ರಜಾ ಪ್ರಭುತ್ವ ಸಂಸ್ಥೆಗಳು ಅರ್ಥಕಳೆದು ಕೊಳ್ಳುವ ಅಪಾಯ ಉಂಟಾಗಿದೆ.

ನಿರೀಕ್ಷಿಸಲಾದಂತೆ ಸಚಿವ ಸಂಪುಟ ರಚನೆಯಲ್ಲಿ ಬಿಜೆಪಿಯೊಳಗಿನ ಭಿನ್ನಮತ ಮತ್ತೊಮ್ಮೆ ಭುಗಿಲೇಳುವಂತಾಯಿತು. ಸಚಿವ ಸ್ಥಾನಕ್ಕಾಗಿ ಶಾಸಕರಿಂದ ಬರಬಹುದಾದ ಒತ್ತಡವನ್ನು ತಡೆಯಲು, ಜಗದೀಶ್ ಶೆಟ್ಟರ್ 33 ಸಚಿವ ಸ್ಥಾನಗಳನ್ನು ಒಂದೇ ಕಂತಿನಲ್ಲಿ ಭರ್ತಿ ಮಾಡಿದರು. ಮಂತ್ರಿ ಸ್ಥಾನದ ಕನಸು ಕಂಡಿದ್ದ ಶಾಸಕರ ಒಂದು ಗುಂಪು ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ಬಹಿಷ್ಕರಿಸಿ ಪ್ರತಿಭಟಿಸಿದರು. ಸಚಿವ ಸ್ಥಾನದ ಖಾತರಿ ಇಟ್ಟುಕೊಂಡಿದ್ದ ಕುಂದಾಪುರದ ಹಾಲಾಡಿ ಶ್ರೀನವಾಸ ಶೆಟ್ಟಿ ಅವರನ್ನು ಕೊನೆಯ ಗಳಿಗೆಯಲ್ಲಿ ಕೈಬಿಡಲಾಯಿತೆಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಮುಂದೆ ಕೆಲವು ದಿನಗಳ ನಂತರ ಅವರು ಶಾಸಕ ಸ್ಥಾನಕ್ಕೆ ರಾಜಿನಾಮೆ ನೀಡಿದರು. ದ.ಕ/ಉಡುಪಿ ಜಿಲ್ಲೆಗಳ ಇತರ ಬಿಜೆಪಿ ಶಾಸಕರು ಸಹ ಅಸಮಾಧಾನ ವ್ಯಕ್ತಪಡಿಸಿದರು.

ಖಾತೆ ಹಂಚಿಕೆಯ ವಿಷಯದಲ್ಲಿ ಮತ್ತೊಮ್ಮೆ ಬಿಜೆಪಿಯಲ್ಲಿ ಭಿನ್ನಮತ ಭುಗಿಲೇಳುವಂತಾಯಿತು. ಎರಡೂ ಬಣಗಳು ಪ್ರಮುಖ ಖಾತೆಗಳು ತಮ್ಮವರಿಗೆ ದೊರೆಯಬೇಕು ಎಂದು ಪಟ್ಟು ಹಿಡಿದದ್ದರಿಂದ ಖಾತೆ ಹಂಚಿಕೆ ಕಗ್ಗಂಟಾಯಿತು. ಮಂತ್ರಿ ಸ್ಥಾನದಿಂದ ವಂಚಿತರಾದ ಶಾಸಕರು ಪ್ರತ್ಯೇಕ ಸಭೆ ನಡೆಸಿ ತಮ್ಮ "ಭಿನ್ನಮತ" ಚಟುವಟಿಕೆಗಳನ್ನು ಮುಂದುವರೆಸಿದರು. ಕಳಂಕಿತರನ್ನು ಕೈಬಿಡಬೇಕೆಂಬ ಬೇಡಿಕೆಯನ್ನು ಅವರು ಮುಂದಿಟ್ಟಿದ್ದರು. ಮುಖ್ಯಮಂತ್ರಿ ದೆಹಲಿಗೆ ತೆರಳಿ ವರಿಷ್ಠರೊಂದಿಗೆ ಚರ್ಚಿಸಿ ಖಾತೆಗಳ ಹಂಚಿಕೆ ಮಾಡಿದರು. ಪ್ರಮುಖ ಖಾತೆಗಳೆಲ್ಲ ಯಡಿಯೂರಪ್ಪ ಬಣದಲ್ಲಿಯೇ ಮುಂದುವರೆದಿರುವುದು ಸದಾನಂದಗೌಡ ಬಣದಲ್ಲಿ ಆಕ್ರೋಶಕ್ಕೆ ಕಾರಣವಾಯಿತು. ವಿಧಾನ ಮಂಡಲದ ಅಧಿವೇಶನ ಮುಗಿದ ನಂತರ ಖಾತೆ ಹಂಚಿಕೆಯಲ್ಲಿ ಬದಲಾವಣೆ ಮಾಡಲು ಹೈಕಮಾಂಡ್ ಸೂಚಿಸಿದ ಹಿನ್ನೆಲೆಯಲ್ಲಿ ಅಲ್ಲಿಯವರೆಗೆ ಕಾಯಲು ಸದಾನಂದಗೌಡ ಬಣ ನಿರ್ಧರಿಸಿತು. ಈ ನಡುವೆ ಬಿಜೆಪಿ ಹಿರಿಯರ ವೇದಿಕೆ, ಕಳಂಕಿತ ಸಚಿವರನ್ನು ಸಂಪುಟದಿಂದ ಕೈಬಿಡದಿದ್ದರೆ ಸತ್ಯಾಗ್ರಹ ಆರಂಭಿಸುವುದಾಗಿ ಎಚ್ಚರಿಸಿದೆ.

ರಾಷ್ಟ್ರಪತಿ ಚುನಾವಣೆಯ ಮತದಾನದಲ್ಲಿಯೂ ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡುವ ಮೂಲಕ ಪಕ್ಷದ ಸೂಚನೆಯನ್ನು ಧಿಕ್ಕರಿಸಿದ್ದಾರೆ. ಬಿಜೆಪಿ ಬೆಂಬಲಿತ ಅಭ್ಯರ್ಥಿ ಸಂಗ್ಮಾಗಿಂತ ಕಾಂಗ್ರೆಸ್ ಅಭ್ಯರ್ಥಿ ಮುಖರ್ಜಿ 13 ಮತಗಳನ್ನು ಹೆಚ್ಚಿಗೆ ಪಡೆದಿದ್ದಾರೆ. 3 ಅಸಿಂಧು ಮತಗಳನ್ನು ಸೇರಿಸಿದರೆ ಬಿಜೆಪಿ ಅಧಿಕೃತ ಅಭ್ಯರ್ಥಿಗೆ 16 ಮತಗಳು ಕೈತಪ್ಪಿವೆ. ವಿಧಾನ ಪರಿಷತ್ ಚುನಾವಣೆಯ ನಂತರ ಮತ್ತೊಮ್ಮೆ ಅಡ್ಡ

ಜನಶಕ್ತಿ
ಕನ್ನಡ ವಾರಪತ್ರಿಕೆ

ಮತದಾನ ನಡೆದಿರುವುದು ಬಿಜೆಪಿಯೊಳಗೆ ತೀವ್ರ ಆತಂಕಕ್ಕೆ ಕಾರಣವಾಗಿದೆ. ಆದರೆ ಪಕ್ಷದ ತೀರ್ಮಾನವನ್ನು ಉಲ್ಲಂಘಿಸಿದವರ ವಿರುದ್ಧ ಕ್ರಮ ಜರುಗಿಸಲು ಬಿಜೆಪಿ ಕೈ ಕಮಾಂಡ್‌ಗೆ ಧೈರ್ಯವಿಲ್ಲ.

ಹನ್ನೊಂದು ದಿನಗಳ ಕಾಲ ನಡೆದ ವಿಧಾನ ಮಂಡಲ ಕಲಾಪ ಅಗಸ್ಟ್ 2ರಂದು ಮುಗಿದಿದ್ದು ಅಧಿವೇಶನವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿದೆ. ಧನ ವಿನಿಯೋಗ ವಿಧೇಯಕಕ್ಕೆ ಭಿನ್ನಮತಿಯರು ತಡೆಯುಂಟು ಮಾಡಬಹುದೆಂಬ ಅನುಮಾನ ದಟ್ಟವಾಗಿತ್ತು. ಅಧಿವೇಶನದ ನಂತರ ಭಿನ್ನಮತೀಯರ ಬೇಡಿಕೆಗಳ ಬಗ್ಗೆ ಪರಿಶೀಲಿಸುವ ಭರವಸೆಯನ್ನು ಮುಂದಿಟ್ಟು ಜಗದೀಶ್ ಶೆಟ್ಟರ್ ಸರ್ಕಾರ, ಬೀಸುವ ದೊಣ್ಣೆಯಿಂದ ಪಾರಾಗಿದೆ. ಅಧಿವೇಶನ ಮುಗಿಯುತ್ತಿದ್ದಂತೆ ಸೂಕ್ತ ಸ್ಥಾನಮಾನಕ್ಕಾಗಿ ಸಚಿವ ಸ್ಥಾನ ವಂಚಿತ ಶಾಸಕರ ಒತ್ತಡ ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಕೋರ್ ಕಮಿಟಿ ಸಭೆಯೊಂದನ್ನು ನಡೆಸಲಾಗಿದೆ. ಪ್ರಭಾವಿ ಖಾತೆಗಳಿಗಾಗಿ ಎರಡೂ ಬಣಗಳು ಪಟ್ಟು ಹಿಡಿದಿವೆ ಎಂದೂ ಸಭೆಯಲ್ಲಿ ತೀವ್ರ ಮಾತಿನ ಚಕಮಕಿ ನಡೆದಿತ್ತು ಎಂದು ತಿಳಿದು ಬಂದಿದೆ. ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಬಣಗಳ ನಡುವಿನ ವೈಮನಸ್ಸು ಕೊನೆಗಾಣಿಸಲು ಖಾತೆಗಳ ಪುನರ್ ಹಂಚಿಕೆಗೆ ಹೈಕಮಾಂಡ್ ಒಲವು ತೋರಿದೆ ಎನ್ನಲಾಗುತ್ತಿದ್ದು, ಇದು ಎಷ್ಟರ ಮಟ್ಟಿಗೆ ಸಫಲವಾಗಲಿದೆ ಎಂಬುದು ವ್ಯಕ್ತವಾಗಲು ಹೆಚ್ಚುದಿನ ಕಾಯುವ ಪ್ರಸಂಗ ಬರಲಿಕ್ಕಿಲ್ಲ. ಆದರೆ ಈ ರಾಜಕೀಯ ಅಸ್ಥಿರತೆ ಮುಂದುವರೆದಷ್ಟು ರಾಜ್ಯದ ಜನತೆ ಎದುರಿಸುತ್ತಿರುವ ಸಮಸ್ಯೆಗಳು ಮಾತ್ರ ನೆನೆಗುದಿಗೆ ಬೀಳಲಿವೆ.

ಈ ನಡುವೆ ಯಡಿಯೂರಪ್ಪ ಅವರು ಅಕ್ಟೋಬರ್ ವೇಳೆಗೆ ಬಿಜೆಪಿ ತೊರೆದು ಹೊಸ ಪಕ್ಷ ಕಟ್ಟಲು ಸಜ್ಜಾಗಿದ್ದಾರೆ ಎಂಬ ಸುದ್ದಿ ದಟ್ಟವಾಗಿ ಹಬ್ಬಿತ್ತು. ಇತ್ತಿಚೆಗೆ ಸಚಿವರ ಮೊಗಸಾಲೆಯಲ್ಲಿ ಇಂಧನ ಸಚಿವೆ ಶೋಭ ಕರಂದ್ಲಾಜೆ ಜತೆಗೂಡಿ ಹಿರಿಯ ಕಾಂಗ್ರೆಸ್ ನಾಯಕ ಸಂಸದ ಹೆಚ್. ವಿಶ್ವನಾಥ್ ಅವರ ಜತೆ ಸುದೀರ್ಘ ಚರ್ಚೆ ನಡೆಸಿದ ಯಡಿಯೂರಪ್ಪ ಬಿಜೆಪಿಯಲ್ಲಿ ತಮಗಾಗುತ್ತಿರುವ ಮುಜುಗರ ಕುರಿತು ಮುಕ್ತವಾಗಿ ಮಾತನಾಡಿದ್ದಾರೆ ಎನ್ನಲಾಗುತ್ತಿದೆ. ಇದೇ ಸಮಯದಲ್ಲಿ ಮಾತನಾಡಿದ ಇಂಧನ ಸಚಿವೆ ಶೋಭಾ ಕರಂದ್ಲಾಜೆ ಮುಂಬರುವ ವಿಧಾನಸಭಾ ಚುನಾವಣೆಗೂ ಮುನ್ನ ನಾವು 40ಕ್ಕೂ ಹೆಚ್ಚು ಶಾಸಕರು ಯಡಿಯೂರಪ್ಪ ಜೊತೆಗೂಡಿ ಪಕ್ಷ ತೊರೆಯುತ್ತೇವೆ ಎಂದು ಹೇಳಿದ್ದಾರೆ. ನನ್ನನ್ನು ಮುಗಿಸಲು ಯತ್ನಿಸುತ್ತಿರುವ ಜೆಡಿ(ಎಸ್) ಜೊತೆ ಸೇರಿಕೊಂಡು ಸರ್ಕಾರ ರಚಿಸಲು ಆರೆಸ್ಸೆಸ್ ಸಿದ್ಧವಾಗಿದೆ ಎಂದು ಸಹ ಯಡಿಯೂರಪ್ಪ ಹೇಳಿಕೊಂಡಿದ್ದಾರೆ. ಇದರಿಂದ ಯಡಿಯೂರಪ್ಪ ಹೊಸ ಪಕ್ಷ ಕಟ್ಟಿ ಕಾಂಗ್ರೆಸ್ ಜೊತೆ ಹೊಂದಾಣಿಕೆಗೆ ಮುಂದಾಗಲಿದ್ದಾರೆ



ಎಂಬುದಾಗಿ ರಾಜಕೀಯ ವಲಯದಲ್ಲಿ ಚರ್ಚೆ ನಡೆದಿದೆ. ರಾಷ್ಟ್ರಪತಿ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮುಖರ್ಜಿ ಅವರನ್ನು ಯಡಿಯೂರಪ್ಪ ಹೊಗಳಿದ್ದು ಹಿಂದೊಮ್ಮೆ ಸೋನಿಯಾಗಾಂಧಿಯವರ ಗುಣಗಾನ ಮಾಡಿದ್ದು ಅವರು ಕಾಂಗ್ರೆಸ್‌ಗೆ ಹತ್ತಿರವಾಗುತ್ತಿರುವ ಸೂಚನೆ ಎಂದು ವಿಶ್ಲೇಷಿಸಲಾಗುತ್ತದೆ. ಗಣಿ ಕಪ್ಪ ಹಗರಣದ ಹಿನ್ನೆಲೆಯಲ್ಲಿ ಸಿಬಿಐ ಇಕ್ಕಳಕ್ಕೆ ಸಿಲುಕಿರುವ ಯಡಿಯೂರಪ್ಪಗೆ ಇದು ಅನಿವಾರ್ಯವಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಇತ್ತೀಚೆಗೆ ಯಡಿಯೂರಪ್ಪ ಅವರ ಧ್ವನಿ ಬದಲಾಗಿದ್ದು ರಾಜ್ಯಾದ್ಯಂತ ಓಡಾಡಿ ಪಕ್ಷವನ್ನು ಬಲಪಡಿಸುತ್ತೇನೆ ಎಂದು ಅವರು ಹೇಳುತ್ತಿದ್ದಾರೆ. ಪಕ್ಷ ತೊರೆಯುವ ಅವರ ಬೆದರಿಕೆ ಹೈಕಮಾಂಡ್ ಮೇಲೆ ಅವರು ಪ್ರಯೋಗಿಸುತ್ತಿರುವ ಬ್ಲಾಕ್ ಮೇಲ್ ತಂತ್ರವಾಗಿದೆ ಎಂದು ಸಹ ವಿಶ್ಲೇಷಿಸಲಾಗುತ್ತಿದೆ. ಪಕ್ಷದ ಅಧ್ಯಕ್ಷ ಸ್ಥಾನವನ್ನು ಗಿಟ್ಟಿಸಿಕೊಳ್ಳುವುದು, ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ತನ್ನನ್ನು ಬಿಂಬಿಸಬೇಕು ಎಂಬುದೇ ಅವರು ಬಿಜೆಪಿ ವರಿಷ್ಠರ ಮೇಲೆ ಹೇರುತ್ತಿರುವ ಒತ್ತಡದ ಉದ್ದೇಶವಾಗಿದೆ ಒಟ್ಟಾರೆಯಾಗಿ ಬಿಜೆಪಿ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕಾಗಿನ ಕಿತ್ತಾಟದಿಂದ ಜರ್ಜರಿತವಾಗಿದೆ.

ಜಗದೀಶ್ ಶೆಟ್ಟರ್ ಸರ್ಕಾರ ರೈತರ ಹತ್ತು ತಿಂಗಳ ಬೆಳೆ ಸಾಲ ಮತ್ತು ಅದರ ಬಡ್ಡಿ ಸೇರಿದಂತೆ 25 ಸಾವಿರ ರೂ. ವರೆಗಿನ ಸಾಲವನ್ನು ಮನ್ನಾ ಮಾಡುವ ಘೋಷಣೆ ಮಾಡಿ ಕೈತೊಳೆದುಕೊಳ್ಳಲು ಮುಂದಾಗಿದೆ. 'ಇದೊಂದು ಚುನಾವಣಾ ಗಿಮಿಕ್' ಎಂದು ಪ್ರತಿಪಕ್ಷಗಳು ಟೀಕಿಸಿದ್ದು ಸರಿಯಾಗಿದೆ. ಅದೊಂದು ದಿನ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕನಂತೆ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಮಾತುಗಳನ್ನು ಗಮನಿಸಿದರೆ, ರಾಜ್ಯದಲ್ಲಿ ಚುನಾವಣೆ ಪರ್ವ ಆರಂಭವಾದಂತೆ ಭಾಸವಾಗುತ್ತದೆ. "ಮುಂದಿನ ಬಜೆಟ್‌ಗೂ ಮೊದಲೇ ಚುನಾವಣೆ ಬರಬಹುದು. ಜನತೆಗೆ ಹೊಸ ಆಶ್ವಾಸನೆ, ಹಣಕಾಸಿನ ನೆರವು ನೀಡಲಾಗದ ಸಂದಿಗ್ಧ ಪರಿಸ್ಥಿತಿ ಎದುರಾಗಬಹುದು. ಆದ್ದರಿಂದ ಈಗಾಗಲೇ ಮಂಡನೆಯಾಗಿರುವ ಒಂದು ಲಕ್ಷ ಕೋಟಿ ರೂ. ಬಜೆಟ್‌ನಲ್ಲಿ 10 ಸಾವಿರ ಕೋಟಿಗಳನ್ನು ರೈತರಿಗಾಗಿ ಮೀಸಲಿಡಬೇಕು." ಎಂದು ಹೇಳಿದ ಯಡಿಯೂರಪ್ಪ ಅಷ್ಟಕ್ಕೆ ಸುಮ್ಮನಾಗದೆ ಆ ರಾತ್ರಿ ಮುಖ್ಯ ಮಂತ್ರಿ ಜಗದೀಶ್ ಶೆಟ್ಟರ್ ಅವರನ್ನು ತಮ್ಮ ಮನೆಗೆ ಕರೆಸಿಕೊಂಡು ಇದೇ ವಿಷಯದಲ್ಲಿ ಒತ್ತಡ ಹೇರಿದ್ದು ವರದಿಯಾಗಿದೆ. ಇದರ ತಾತ್ಪರ್ಯ ಇಷ್ಟೇ, ಯಾವ ಕ್ಷಣದಲ್ಲಾದರೂ ಚುನಾವಣೆ ಬರಬಹುದು. ಮತದಾರರಿಗೆ ಆಮಿಷ ಒಡ್ಡಲು ವಿಳಂಬ ಮಾಡಬಾರದು. ಸಾಲ ಮನ್ನಾ ಮಾಡಲಾಗಿದೆ



ಎಂದು ಮತದಾರರ ಮುಂದೆ ಹೋದರೆ, ಮುಗ್ಧ ಮತದಾರರು ಹಿಂದಿನ ವಿಶ್ವಾಸ ದ್ರೋಹ, ಭ್ರಷ್ಟಾಚಾರದ ಹಗರಣಗಳನ್ನೆಲ್ಲಾ ಮರೆತು ಆಶೀರ್ವಾದ ಮಾಡುತ್ತಾರೆ ಎಂಬುದೇ ಯಡಿಯೂರಪ್ಪ ಅವರು ಶೆಟ್ಟರ್ ಅವರಿಗೆ ಹೇಳಿದ "ಅನುಭವ"ದ ಪಾಠ!

ಅಕ್ರಮ ಮನೆ ಸಕ್ರಮ ಮಸೂದೆ ಅಂಗೀಕಾರ :

ಚುನಾವಣೆಯಲ್ಲಿ ಪ್ರತಿಕೂಲ ಪರಿಣಾಮ ಆಗುವುದೆಂಬ ಭೀತಿಯಿಂದ ಭೂ ಸುಧಾರಣೆಗಳ ಕಾಯ್ದೆ ತಿದ್ದುಪಡಿ ಮಸೂದೆಯನ್ನು ರಾಜ್ಯ ಸರ್ಕಾರ ವಿಧಾನ ಸಭೆಯಲ್ಲಿ ಚರ್ಚೆಗೆ ತರುವ ಸಾಹಸ ಮಾಡಲಿಲ್ಲ. ಕರಡು ತಿದ್ದುಪಡಿ ಪ್ರತಿಗಳನ್ನು ಸುಟ್ಟು ಹಾಕಿ ಪ್ರತಿಭಟಿಸಲು ನೀಡಲಾಗಿದ್ದ ಕರೆ ಹಲವಾರು ಕಡೆ ಜಾರಿ ಮಾಡಲಾಗಿತ್ತು. ಕಾಂಗ್ರೆಸ್ ಸಹ ಕಾಯ್ದೆಗೆ ಪ್ರತಿಗಾಮಿ ತಿದ್ದುಪಡಿ ತರುವ ಸರ್ಕಾರದ ಉದ್ದೇಶವನ್ನು ಖಂಡಿಸಿತ್ತು.

ಆದರೆ, ಸರ್ಕಾರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಮಸೂದೆಗೆ ವಿಧಾನ ಮಂಡಲದ ಎರಡೂ ಸದನಗಳಿಂದ ಅಂಗೀಕಾರ ಪಡೆಯುವ ಮೂಲಕ 1998 ಎಪ್ರಿಲ್ 14ರಿಂದ 2012 ಜನವರಿ ವರೆಗಿನ ಗ್ರಾಮೀಣ ಭಾಗದ ಸರ್ಕಾರಿ ಜಾಗಗಳಲ್ಲಿ ಅಕ್ರಮವಾಗಿ ನಿರ್ಮಿಸಿಕೊಂಡಿರುವ ಮನೆಗಳನ್ನು ಕೆಲವು ಷರತ್ತುಗಳ ಆಧಾರದಲ್ಲಿ ಸಕ್ರಮಗೊಳಿಸಲು ತೀರ್ಮಾನಿಸಿದೆ. ಕಾಯ್ದೆಯಲ್ಲಿ ಇನ್ನೂ ಅನೇಕ ಲೋಪದೋಷಗಳು ಇವೆ. ಬಿಬಿಎಂಪಿ ವ್ಯಾಪ್ತಿಯ 18 ಕಿ.ಮೀ, ಮಹಾನಗರ ಪಾಲಿಕೆಗಳ 10 ಕಿ.ಮೀ, ನಗರ ಸಭೆಗಳ 5 ಕಿ.ಮೀ ಮತ್ತು ಪಟ್ಟಣ ಪಂಚಾಯ್ತಿಗಳ 3 ಕಿ.ಮೀ ವ್ಯಾಪ್ತಿಯ ಅಕ್ರಮ ಮನೆಗಳಿಗೆ ಇದು ಅನ್ವಯಿಸುವುದಿಲ್ಲ. ಕಾಯ್ದೆಯಲ್ಲಿರುವ ಜನವಿರೋಧಿ ಅಂಶಗಳನ್ನು ತೆಗೆದು ಹಾಕುವಂತೆ ಒತ್ತಾಯಿಸುವ ಹೋರಾಟವನ್ನು ಮುಂದುವರೆಸುತ್ತಲೇ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಜಾಗಗಳಲ್ಲಿ ಮನೆ ಕಟ್ಟಿಸಿಕೊಂಡಿರುವ ಬಡವರಿಗೆ ಇದರ ಪ್ರಯೋಜನ ದೊರಕುವಂತೆ ಮಾಡಬೇಕಾಗಿದೆ. ಚುನಾವಣೆಯ ಮೇಲೆ ಕಣ್ಣಿಟ್ಟು ಈ ತಿದ್ದುಪಡಿಯನ್ನು ಅಂಗೀಕರಿಸಲಾಗಿದ್ದರೂ, ಮನೆಗಳಿಗಾಗಿ ನಡೆಸಿದ ಹೋರಾಟಕ್ಕೆ ದೊರೆತ ಭಾಗಶಃ ಜಯ ಇದಾಗಿದೆ.

ಬಡ ಅರಣ್ಯ ಭೂಮಿ ಸಾಗುವಳಿದಾರರ ಪ್ರಶ್ನೆಯೂ ಸಹ ಈ ಸಲ ರಾಜ್ಯ ವಿಧಾನ ಪರಿಷತ್‌ನಲ್ಲಿ ಚರ್ಚೆಗೆ ಬಂತು. ಅರಣ್ಯ ಭೂಮಿ ಹಕ್ಕು ಪಡೆದುಕೊಳ್ಳಲು ಅನಧಿಕೃತ ಸಾಗುವಳಿದಾರರು 3 ತಲೆಮಾರಿನಿಂದ (75 ವರ್ಷ) ಅರಣ್ಯ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬಂದಿರುವ ದಾಖಲೆಯನ್ನು ಒದಗಿಸಲು ಸಾಧ್ಯವಾಗದೆ ಅರಣ್ಯ ಭೂಮಿ ಹಕ್ಕನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಕುರಿತು ಕಾಯ್ದೆಯನ್ನು ತಿದ್ದುಪಡಿ ಮಾಡಲು

ಪುಟ 10 ಕ್ಕೆ

ಚುನಾವಣಾ ತಾಲೀಮು ಆರಂಭ....

ಪುಟ 9 ರಿಂದ

ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಕೋರಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು. ಇದರ ಪ್ರಯೋಜನ ಪಡೆದು ಅರಣ್ಯ ಭೂಮಿ ಸಾಗುವಳಿದಾರರನ್ನು ಸಂಘಟಿಸಲು ಮತ್ತು ನಿರಂತರ ಹೋರಾಟಗಳ ಮೂಲಕ ಸರ್ಕಾರದ ಮೇಲೆ ಒತ್ತಡ ಹೇರಲು ಸಾಧ್ಯವಾಗಬೇಕಾಗಿದೆ.

ಅಧಿಕಾರಿಗಳನ್ನು ವರ್ಗಮಾಡಿಸಿಕೊಳ್ಳಲು ಶಾಸಕರ ತರಾತುರಿ :

ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ತಮಗೆ ಬೇಕಾದ ಅಧಿಕಾರಿಗಳನ್ನು ತಮ್ಮ ಕ್ಷೇತ್ರಕ್ಕೆ ವರ್ಗ ಮಾಡಿಸಿಕೊಳ್ಳಲು ಶಾಸಕರು ಮುಖ್ಯ ಮಂತ್ರಿ ಮೇಲೆ ಒತ್ತಡ ಹೇರುತ್ತಿದ್ದಾರೆಂದು ತಿಳಿದು ಬಂದಿದೆ. ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ಜಾರಿಯಾಗಬೇಕಾದರೆ ನಾವು ಹೇಳಿದ, ತಮ್ಮ ಮಾತು ಕೇಳುವ ಅಧಿಕಾರಿಗಳೇ ಇರಬೇಕೆಂದು ಮುಖ್ಯಮಂತ್ರಿಗಳಿಗೆ ದುಂಬಾಲು ಬಿದ್ದಿದ್ದಾರೆ. ಈಮಧ್ಯೆ ಹೊಸದಾಗಿ ಮಂತ್ರಿಗಳಾದವರು ಕೂಡ ತಮ್ಮ ಇಲಾಖೆಯ ಹಿರಿಯ ಅಧಿಕಾರಿಗಳ ಬದಲಾವಣೆಗಾಗಿ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹಾಕುತ್ತಿದ್ದಾರೆ. ಯಡಿಯೂರಪ್ಪ ಅವರೂ ಸಹ ತಮ್ಮ ಬೆಂಬಲಿಗರ ಪರವಾಗಿ ಮುಖ್ಯ ಮಂತ್ರಿಗಳ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂದು ತಿಳಿದು ಬಂದಿದೆ. ಕಳೆದ ನಾಲ್ಕು ವರ್ಷಗಳಿಂದ ಭ್ರಷ್ಟಾಚಾರದ ಹಗರಣಗಳಲ್ಲಿಯೇ ಮುಳುಗಿದ್ದ ಈ ಬಿಜೆಪಿ ಶಾಸಕರು ಮತ್ತು ಸಚಿವರುಗಳಿಗೆ ಮತದಾರರ ಮುಂದೆ ಹೋಗಲು ಮುಖವಿಲ್ಲ. ಮುಂಬರುವ ಚುನಾವಣೆಯಲ್ಲಿ ಅದೇ ರೀತಿಯ ಅಕ್ರಮಗಳ ಮೂಲಕ ಗೆಲ್ಲಬೇಕೆಂಬ ಗುರಿ ಇಟ್ಟುಕೊಂಡಿರುವ ಇವರಿಗೆ ತಮ್ಮ ಮಾತು ಕೇಳುವ ಅಧಿಕಾರಿಗಳು ಬೇಕಾಗಿದ್ದಾರೆ.

ಸದಾಶಿವ ಆಯೋಗದ ವರದಿ :

ಪರಿಶಿಷ್ಟ ಜಾತಿ ಸಮುದಾಯಗಳಿಗೆ ಒಳಮೀಸಲಾತಿ ಕಲ್ಪಿಸುವ ಕುರಿತು ಸರ್ಕಾರಕ್ಕೆ ಸಲಹೆ ನೀಡಲು 2005ರಲ್ಲಿ ನ್ಯಾಯಮೂರ್ತಿ ಎ.ಜೆ. ಸದಾಶಿವ ಏಕಸದಸ್ಯ ಆಯೋಗ ರಚನೆಯಾಗಿತ್ತು. ಇತ್ತೀಚೆಗೆ ಆಯೋಗವು ಸರ್ಕಾರಕ್ಕೆ ಸಲ್ಲಿಸಿದ ವರದಿಯ ಕೆಲವು ವಿವರಗಳು ಬಯಲಾಗಿದ್ದು ಪರಿಶಿಷ್ಟ ಜಾತಿ ಸಮುದಾಯಗಳಲ್ಲಿ ಅದರ ಪರ ಹಾಗೂ ವಿರುದ್ಧವಾಗಿ ಭಾವನೆಗಳನ್ನು ಕೆರಳಿಸಲು ಕಾರಣವಾಗಿದೆ. ವರದಿಯನ್ನು ಸರ್ಕಾರ ಇನ್ನೂ ಸದನದಲ್ಲಿ ಮಂಡಿಸಿಲ್ಲ. ಅದನ್ನೂ ಚರ್ಚಿಸದೆ ಸರ್ಕಾರ ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಅದನ್ನು ಅಂಗೀಕರಿಸಿ ಜಾರಿಗೊಳಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ. ಅದನ್ನು ಕೇಂದ್ರ ಸರ್ಕಾರ ಮಾಡಬೇಕಾಗುತ್ತದೆ. ವರದಿಯಲ್ಲಿ ಏನು ಹೇಳಲಾಗಿದೆ ಎಂಬುದನ್ನು ನೋಡದೆ ಕೇವಲ ಕೆಲವು ಮಾಹಿತಿಗಳ ಆಧಾರದಲ್ಲಿ ವರದಿಯ ಪರ ಹಾಗೂ ವಿರುದ್ಧ ಚಳುವಳಿಗಳನ್ನು ನಡೆಸುವುದು ದಲಿತ ಸಮುದಾಯಗಳ ಐಕ್ಯತೆಗೆ ಧಕ್ಕೆಯಾಗಲಿದೆ.

ಚುನಾವಣೆಗೆ ಸಜ್ಜಾಗುತ್ತಿರುವ ಕಾಂಗ್ರೆಸ್ :

ರಾಜ್ಯ ಬಿಜೆಪಿ ಅವಾಂತರಗಳ ಲಾಭ ಪಡೆದು ರಾಜ್ಯದಲ್ಲಿ ಅಧಿಕಾರದ ಗದ್ದುಗೆ ಹಿಡಿಯಲು ಕಾಂಗ್ರೆಸ್ ಹೈಕಮಾಂಡ್ ಸ್ವತಃ ಕಾರ್ಯಾಚರಣೆಗೆ ಇಳಿದಿದೆ. ಒಂದು ವಿರೋಧ ಪಕ್ಷವಾಗಿ ಸಮರ್ಪಕವಾಗಿ ಕೆಲಸ ಮಾಡಲು ವಿಫಲವಾದ ರಾಜ್ಯ ಕಾಂಗ್ರೆಸ್ ನಾಯಕತ್ವವನ್ನು ನಂಬಿ ಕುಳಿತರೆ ಅಧಿಕಾರಕ್ಕೆ ಬರುವ ಕನಸು ಕೈಗೂಡುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿರುವ ಕಾಂಗ್ರೆಸ್ ಹೈಕಮಾಂಡ್ ಕೆಪಿಸಿಸಿ ಮೇಲಿನ ಅವಲಂಬನೆಯನ್ನು ಕೈಬಿಟ್ಟು ಚುನಾವಣೆಗೆ ತನ್ನದೆ ಆದ ಕಾರ್ಯತಂತ್ರವನ್ನು ರೂಪಿಸಲು ಮುಂದಾಗಿದೆ. ರಾಜ್ಯದವರೇ ಆದ ಕೇಂದ್ರದ ಮಂತ್ರಿಗಳಿಗೆ ವಿಶೇಷ ಜವಾಬ್ದಾರಿವಹಿಸಲಾಗಿದೆ. ಎಸ್.ಎಂ. ಕೃಷ್ಣ, ವೀರಪ್ಪ ಮೊಯ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಗಳಲ್ಲಿ ಭಾಗವಹಿಸಿ ಚುನಾವಣೆಗಾಗಿ ಅವರನ್ನು ಸಜ್ಜು ಗೊಳಿಸುತ್ತಿದ್ದಾರೆ. ವಿಧಾನಸಭಾ ಕ್ಷೇತ್ರವಾರು ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯನ್ನು ತನ್ನದೇ ತಂಡದ ಮೂಲಕ ಪಡೆಯಲಾಗುತ್ತಿದೆ. ಜಾತಿ ಹಾಗೂ ಪ್ರದೇಶವಾರು ಮುಖಂಡರನ್ನು ದೆಹಲಿಗೆ ಕರೆಸಿಕೊಂಡು ಅವರ ಅಭಿಪ್ರಾಯ ಪಡೆದು, ಅವರಿಗೆ ಸಲಹೆ ಸೂಚನೆಗಳನ್ನು ನೀಡುವ ಕೆಲಸವನ್ನು ಸ್ವತಃ ರಾಹುಲ್‌ಗಾಂಧಿ ಮಾಡುತ್ತಿದ್ದಾರೆ. ರಾಜ್ಯದ ಬರ ಪರಿಸ್ಥಿತಿಯನ್ನು ಪಕ್ಷದ ಪರವಾಗಿ ಬಳಸಿಕೊಳ್ಳುವ ಉದೇಶದಿಂದ ಕೇಂದ್ರದ ಇಬ್ಬರು ಪ್ರಭಾವಿ ಸಚಿವರನ್ನು ರಾಜ್ಯಕ್ಕೆ ಕಳುಹಿಸಲಾಗಿದೆ. ಕರ್ನಾಟಕಕ್ಕೆ ಆಗಮಿಸಿದ ಕೇಂದ್ರ ಕೃಷಿ ಸಚಿವ ಶರದ್ ಪವಾರ್ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಜೈರಾಮ್ ರಮೇಶ್ ರಾಜ್ಯಕ್ಕೆ ತಕ್ಷಣದ ನೆರವು ಪ್ರಕಟಿಸುವುದರ ಜತೆಗೆ ಇನಷ್ಟು ನೀಡುವ ಭರವಸೆ ನೀಡಿದ್ದಾರೆ. ಇದೇ ಸಮಯದಲ್ಲಿ ರಾಜ್ಯ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಜನರೆದುರು ತೆರೆದಿಡಲು ಅವರು ಮರೆಯಲಿಲ್ಲ.

ರಾಜ್ಯ ಕಾಂಗ್ರೆಸಿನ ಒತ್ತಾಯದ ನಡುವೆಯೂ ಬಿಜೆಪಿ ಸರ್ಕಾರವನ್ನು ವಜಾಗೊಳಿಸುವ ಅವಕಾಶಗಳನ್ನು ಕಾಂಗ್ರೆಸ್ ಹೈಕಮಾಂಡ್ ಬಳಸಿಕೊಂಡಿರಲಿಲ್ಲ. ಈಗ ಅದು ಕಾಂಗ್ರೆಸಿಗೆ ಪೂರಕವಾಗಲಿದೆ ಎಂದು ಭಾವಿಸಲಾಗುತ್ತಿದೆ. ಪ್ರಬಲ ಲಿಂಗಾಯತ ಸಮುದಾಯವನ್ನು ಸೆಳೆಯುವ ಪ್ರಯತ್ನದ ಭಾಗವಾಗಿ ಸಿದ್ಧಗಂಗಾ ಶ್ರೀಗಳ ಗುರುವಂದನೆಯಲ್ಲಿ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಪಾಲೊಂಡಿದ್ದರು. ಲಿಂಗಾಯತ ಮುಖಂಡರಾದ ಶ್ಯಾಮನೂರು ಶಿವಶಂಕರಪ್ಪ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಬೇಕೆಂಬ ಒತ್ತಾಯ ತೀವ್ರಗೊಂಡಿದ್ದು ಹೈಕಮಾಂಡ್ ಅದಕ್ಕೆ ಒಪ್ಪಿಗೆ ನೀಡುವ ಲಕ್ಷಣಗಳು ಗೋಚರಿಸುತ್ತಿವೆ.

ಈ ನಡುವೆ ಕಾಂಗ್ರೆಸ್, ಜೆಡಿ(ಎಸ್) ವಿರುದ್ಧ ತೀವ್ರ ವಾಗ್ದಾಳಿ ನಡೆಸುತ್ತಿದ್ದು ಮುಸಲ್ಮಾನರನ್ನು ಸೆಳೆಯುವ ಅದರ ಪ್ರಯತ್ನವನ್ನು ಟೀಕಿಸುತ್ತಿದೆ. ಜೆಡಿ(ಎಸ್)ನ ಕೆಲವು ಶಾಸಕರನ್ನು ತನ್ನತ್ತ ಸೆಳೆಯುವ ಪ್ರಯತ್ನ ಮಾಡುತ್ತಿದೆ ಎನ್ನಲಾಗಿದೆ.

ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ :

ಕೇಂದ್ರ ಯುಪಿಎ ಸರ್ಕಾರದ ರಾಜಕೀಯ ವ್ಯವಹಾರಗಳ ಸಂಪುಟ ಉಪಸಮಿತಿ ಸಭೆಯು ಸಂವಿಧಾನದ 371ಡಿ ವಿಧಿಗೆ ತಿದ್ದುಪಡಿತಂದು ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ದೊರಕಿಸಲು ಒಪ್ಪಿಗೆ ನೀಡಿದೆ. ಇದಕ್ಕೆ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆದು ಮುಂದಿನ ಮುಂಗಾರು ಅಧಿವೇಶನದಲ್ಲಿ ಮಂಡಿಸಿ ಅಂಗೀಕರಿಸಬೇಕಾಗಿದೆ. ಇದರಿಂದಾಗಿ ಬೀದರ್, ಗುಲ್ಬರ್ಗಾ, ಯಾದಗೀರ್, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ವಿಶೇಷ ಪ್ಯಾಕೇಜ್ ಲಭ್ಯವಾಗಲಿದ್ದು ಜತೆಯಲ್ಲಿ ಶೈಕ್ಷಣಿಕ ಹಾಗೂ ಉದ್ಯೋಗ ಮೀಸಲಾತಿ ದೊರೆಯಲಿದೆ.

ಕೇಂದ್ರ ಸಕಾರದ ಈ ಕ್ರಮವನ್ನು ನಾವು ಸ್ವಾಗತಿಸುವಾಗಲೇ ಕೇವಲ ವಿಶೇಷ ಸ್ಥಾನಮಾನ ಘೋಷಣೆಯಿಂದ ಹಿಂದುಳಿದ ಈ ಜಿಲ್ಲೆಗಳ ಅಭಿವೃದ್ಧಿ ಸಾಧ್ಯವಾಗಲಾರದು; ಕಾನೂನು ಬದ್ಧ ಹಕ್ಕುಗಳನ್ನು, ಸೌಲಭ್ಯಗಳನ್ನು ಪಡೆಯಬೇಕಾದರೆ ಜನ ಚಳುವಳಿ ಅತ್ಯಗತ್ಯವಾಗಿದೆ ಎಂಬುದನ್ನು ಜನತೆಗೆ ಮನವರಿಕೆ ಮಾಡಬೇಕು. ಕಾಂಗ್ರೆಸ್ ಇದನ್ನು ಚುನಾವಣಾ ಲಾಭಕ್ಕಾಗಿ ಬಳಸಿಕೊಳ್ಳಲಿದೆ ಎನ್ನುಬುದರಲ್ಲಿ ಸಂದೇಹವಿಲ್ಲ. ಕೇಂದ್ರದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಎಸ್.ಎಂ. ಕೃಷ್ಣ ಮಲ್ಲಿಕಾರ್ಜುನ ಖರ್ಗೆ, ವೀರಪ್ಪ ಮೊಯ್ಲಿ ಮತ್ತು ಮುನಿಯಪ್ಪ ಅವರ ಪಾತ್ರವನ್ನು ವಿಶೇಷವಾಗಿ ಬಿಂಬಿಸಲಾಗುತ್ತಿದೆ. ಎಂದೋ ಮಾಡಬೇಕಾದುದನ್ನು ಈಗ ಮಾಡಿದ್ದಾರೆ ಎಂಬುದನ್ನು ಜನರಿಗೆ ಮನವರಿಕೆ ಮಾಡುತ್ತಾ ಭ್ರಷ್ಟ ಕಾಂಗ್ರೆಸ್ ಸರ್ಕಾರದ ಜನವಿರೋಧಿ ಧೋರಣೆಗಳ ಬಗ್ಗೆ ಜನರನ್ನು ಎಚ್ಚರಿಸ ಬೇಕಾಗಿದೆ.

ಚುನಾವಣಾ ತಂತ್ರಗಾರಿಕೆಯಲ್ಲಿ ಜೆಡಿ(ಎಸ್) :


ಜೆಡಿ(ಎಸ್) ಕೂಡಾ ಮುಂಬರುವ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದೆ. ಬಿಜೆಪಿಯಲ್ಲಿರುವ ಅತೃಪ್ತ ಶಾಸಕರನ್ನು ಸೆಳೆಯುವ ಪ್ರಯತ್ನ ನಡೆಸಲಾಗುತ್ತಿದೆ. ರಾಜ್ಯಾಧ್ಯಕ್ಷ ಕುಮಾರಸ್ವಾಮಿ ದ.ಕ ಜಿಲ್ಲೆಯ ಶಕುಂತಲಾ ಶೆಟ್ಟಿ ಮತ್ತು ಕುಂದಾಪುರ ಹಾಲಾಡಿ ಶ್ರೀನಿವಾಸ ಶೆಟ್ಟಿ ಅವರನ್ನು ಕಂಡು 'ಮಾತುಕತೆ ನಡೆಸಿದ್ದಾರೆ. ಬಿಜೆಪಿಯ ಅತೃಪ್ತ ಶಾಸಕರು ಕುಮಾರಸ್ವಾಮಿ ಜತೆ ಸಂಪರ್ಕದಲ್ಲಿದ್ದಾರೆ ಎಂದು ಎಚ್.ಡಿ. ದೇವೇಗೌಡರೇ ಬಹಿರಂಗ ಹೇಳಿಕೆ ನೀಡಿದ್ದಾರೆ. ಆದರೆ ಬಿಜೆಪಿ ಸರ್ಕಾರವನ್ನು ಬೀಳಿಸುವ ಯಾವ ಪಯತ್ನವನ್ನೂ ಮಾಡಬಾರದೆಂದು ಕುಮಾರಸ್ವಾಮಿ ಆದೇಶ ನೀಡಿದ್ದಾರೆ. ಹಿಂದೆ ಅಂತಹ ಒಂದು ಪ್ರಯತ್ನದಲ್ಲಿ ಕೈಸು... ಕೊಂಡಿರುವ ಅನುಭವದಿಂದ ಈ ನಿರ್ಧಾರ... ಬರುವಂತಾಗಿದೆ.

ಚುನಾವಣೆಯ ಮೇಲೆ ಕಣ್ಣಿಟ್ಟುಕೊಂ... ಜೆಡಿ(ಎಸ್) ಅಲ್ಲಲ್ಲಿ ಯುವಕರ, ರೈತ... ಮಹಿಳೆಯರ ಸಮಾವೇಶಗಳನ್ನು ನಡೆಸುತ್ತಿ... ವಿವಿಧ ಜಾತಿ ಸಮುದಾಯಗಳನ್ನು ಆಕರ್ಷಿಸ... ಪ್ರಯತ್ನ ಪಡುತ್ತಿದೆ. ವಿಧಾನ ಪರಿಷ... ಚುನಾವಣೆಯಲ್ಲಿ ಕಾಂಗ್ರೆಸ್‌ನ ಅಭ್ಯರ್ಥಿ ಇಕ್ಬಾ... ಅಹಮದ್ ಸರಡಗಿ ಅವರನ್ನು ಸೋಲಿ... ಜೆಡಿ(ಎಸ್) ಅಭ್ಯರ್ಥಿ ಅಫ್ಸರ್ ಆಘಾರ... ಗೆಲ್ಲಿಸಿದ್ದನ್ನೂ ಬಂಡವಾಳ ಮಾಡಿಕೊಂಡ... ಮುಸ್ಲಿಂ ಸಮುದಾಯವನ್ನು ಸೆಳೆಯುವ ಪ್ರಯ... ಮಾಡಲಾಗಿದೆ. ಬೆಂಗಳೂರಿನಲ್ಲಿ ಏರ್ಪಡಿ... ಲಾಗಿದ್ದ ಮುಸ್ಲಿಂ ಸಮುದಾಯದ ಬೃಹ... ಸಮಾವೇಶಕ್ಕೆ ಬಾರೀ ಸಂಖ್ಯೆಯಲ್ಲಿ ಮುಸ್ಲಿ... ಜನ ಸಮೂಹವನ್ನು ಆಕರ್ಷಿಸಲು... ಸಾಧ್ಯವಾಗಿದೆ.

ಮೈಸೂರು ಪ್ರಾಂತ್ಯದಲ್ಲಿ ಪಕ್ಷಕ್ಕೆ ಗಟ್ಟಿ ನೆ... ಇದೆ. ಉತ್ತರ ಕರ್ನಾಟಕದಲ್ಲಿ ಪಕ್ಷಕ್ಕೆ ನೆಲೆಗಳನ... ನಿರ್ಮಿಸಲು ವಿಶೇಷ ಕಾಳಜಿ ವಹಿಸಲಾಗುತ್ತಿ... ದೇವೇಗೌಡರು ರಾಜ್ಯ ಪ್ರವಾಸ ಆರಂಭಿಸಲು... ನಿರ್ಧರಿಸಿದ್ದಾರೆ. ಉತ್ತರ ಕರ್ನಾಟಕದ ಜಿಲ್ಲೆಗಳ... ಸಮಾವೇಶಗಳನ್ನು ನಡೆಸಲು ಮುಂದಾಗಿದ... ಮಾಜಿ ಕೇಂದ್ರ ಸಚಿವ ಬಸವನಗೌಡ ಪಾಟೀ... ಯತ್ನಾಳ್ ಲಿಂಗಾಯತರ ನಡುವೆ ಪಕ್ಷ... ವರ್ಚಸ್ಸನ್ನು ಹೆಚ್ಚಿಸಲು ಕೆಲಸ ಮಾಡುತ್ತಿದ್ದಾ...

ಸಿಬಿಐ ನ್ಯಾಯಾಧೀಶರಿಗೆ ಲಂಚ ನೀಡಿದ ಪ್ರಕರ...

ಓಬಳಾಪುರಂ ಗಣಿ ಹಗರಣದ ಆರೋಪಿ... ಕರ್ನಾಟಕದ ಮಾಜಿ ಮಂತ್ರಿ ಜನಾರ್ಧನರೆಡ್ಡಿ... ಜಾಮೀನು ಕೊಡಿಸಲು ಸಿಬಿ... ನ್ಯಾಯಾಧೀಶರಿಗೆ ಲಂಚ ನೀಡಿದ ಪ್ರಕರಣ... ಸಂಬಂಧಿಸಿದಂತೆ ಕಂಪ್ಲಿ ಶಾಸಕ ಸುರೇಶ್ ಬಾ... ಅವರನ್ನು ಅಂಧ್ರಪ್ರದೇಶದ ಭ್ರಷ್ಟಾಚಾರ ನಿಗ್ರ... ದಳದ ಅಧಿಕಾರಿಗಳು ಬಂಧಿಸಿ ತೀ... ವಿಚಾರಣೆಗೊಳಪಡಿಸಿದ್ದರು. ಈ ಸಂದರ್ಭದ... ಸುರೇಶ್ ಬಾಬು ತಪ್ಪೊಪ್ಪಿಗೆ ಹೇಳಿ... ನೀಡಿದ್ದಾರೆಂದು ಹೇಳಲಾಗಿದೆ. ಈಗ ಬಳ್ಳಾ... ಶಾಸಕ ಹಾಗೂ ಜನಾರ್ಧನರೆಡ್ಡಿ ಸಹೋದ... ಸೋಮಶೇಖರ ರೆಡ್ಡಿ ಮತ್ತು ಸುರೇಶ್ ಬಾಬು... ಸೇರಿದಂತೆ ಒಟ್ಟು 11 ಮಂದಿ ಆರೋಪಿಗಳನ್ನು... ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ. ಶ್ರೀರಾಮುಲು... ಅವರನ್ನು 13ನೇ ಆರೋಪಿಯಾಗಿ ಸೇರಿಸಲು... ಕ್ರಮಕೈಗೊಳ್ಳಲಾಗಿದೆ. ಭ್ರಷ್ಟಾಚಾರ ನಿಗ್ರಹದಳದ... ಪೊಲೀಸರು ಕೋರ್ಟಿಗೆ ಸಲ್ಲಿಸಿದ ವರದಿಯ... 20 ಕೋಟಿ ರೂ.ಗೆ ನಡೆದ ಬೇಲ್ ಡೀಲ್... ಪ್ರಕರಣ ಹೆಚ್ಚೆಚ್ಚು ಸಂಕೀರ್ಣಗೊಳ್ಳುತ್ತಿದ್ದು ರೆಡ್ಡಿ... ಸಹೋದರರ ರಾಜಕೀಯ ಭವಿಷ್ಯ... ಅಂಧಕಾರದಲ್ಲಿ ಮುಳುಗುತ್ತಿದೆ. ಇದರ... ನಕಾರಾತ್ಮಕ ಪರಿಣಾಮ ರಾಜ್ಯದ ಬಿಜೆಪಿ... ಸರ್ಕಾರದ ಮೇಲೆ ಮತ್ತು ಮುಖ್ಯವಾಗಿ ಶ್ರೀರಾಮುಲು ಅವರ ಬಿ.ಎಸ್.ಆರ್ ಪಕ್ಷದ ಮೇಲೆ ಆಗಲಿದೆ.



ವೇದರಾಜ ಎನ್.ಕೆ.

ಮತ್ತೊಮ್ಮೆ ಹುಸಿಯಾದ ಮಾರುಕಟ್ಟೆಯಿಂದಲೇ ಮುಕ್ತಿ ಎಂಬ ಉದಾರೀಕರಣ ಮಂತ್ರಫಲ

ಉತ್ತರ ಭಾರತದಲ್ಲಿ ಎರಡು ದಿನ ವಿದ್ಯುತ್ ಜಾಲ ಕುಸಿತ

ಜುಲೈ 30 ಮತ್ತು 31ರಂದು, ಸತತವಾಗಿ ಎರಡು ದಿನ, ಉತ್ತರ ಭಾರತದ 21 ರಾಜ್ಯಗಳ ಅರವತ್ತು ಕೋಟಿ ಜನ ಕತ್ತಲಲ್ಲಿ ಮುಳುಗಿರುವಂತಾಯಿತು, ಸಾರಿಗೆ-ಸಂಪರ್ಕ, ಆರೋಗ್ಯ ಸೇವೆಗಳು, ವಾಣಿಜ್ಯ ಚಟುವಟಿಕೆಗಳು ವಿದ್ಯುತ್ ಕಡಿತದಿಂದಾಗಿ ಸಂಪೂರ್ಣ ಅಸ್ತವ್ಯಸ್ತಗೊಂಡವು. ಕೆಲವು ರಾಜ್ಯಗಳು ಹೆಚ್ಚು ವಿದ್ಯುತ್ ಸೆಳೆದುಕೊಂಡದ್ದರಿಂದ ಹೀಗಾಯಿತು ಎಂದು ಕೆಲವರು, ವಿದ್ಯುತ್ ಜಾಲದ ಸುರಕ್ಷಿತತೆಯ ಉಪಕರಣಗಳ ದೋಷದಿಂದ ಹೀಗಾಯಿತು ಎಂದು ಇನ್ನು ಕೆಲವರು ಸರಕಾರದ ಪರವಾಗಿ ಹೇಳಿದ್ದಾರೆ. ಏಕೆ ಹೀಗಾಯಿತು ತನಿಖೆ ಎಂದು ನಡೆಸಲಾಗುವುದಂತೆ. ಆದರೆ ಇವೆಲ್ಲ ನಿಜವಾದ ಕಾರಣಗಳಲ್ಲ, ಕೇವಲ ಸಬೂಬುಗಳು ಎಂದು ಪರಿಣಿತರು ಹೇಳುತ್ತಿದ್ದಾರೆ.

ಇನ್ನು, ಯಾವುದೇ ಬಿಕ್ಕಟ್ಟು, ಮುಗ್ಗಟ್ಟು, ಸಮಸ್ಯೆ ಕಾಣಿಸಿಕೊಂಡಾಗ ತಕ್ಷಣ ಅದನ್ನೇ ಸಂಬಂಧಪಟ್ಟ ಕ್ಷೇತ್ರದಲ್ಲಿ ಇನ್ನಷ್ಟು 'ಉದಾರೀಕರಣ'ವನ್ನು ಪ್ರತಿಪಾದಿಸಲು ಒಂದು ಅವಕಾಶ ಎಂದು ಬಳಸಿಕೊಳ್ಳುವುದು ನಾವೀಗ ಯುಪಿಎ-2 ಸರಕಾರದ ನವ-ಉದಾರವಾದಿ ಆಳ್ವಿಕೆಯಲ್ಲಿ ಸಾಮಾನ್ಯವಾಗಿ ಕಾಣುವ ಸಂಗತಿ. ಈ ಬಾರಿಯೂ ಈ ಮಂದಿ ಹಿಂದೆ ಬಿದ್ದಿಲ್ಲ. ಖಾಸಗಿ ವಿದ್ಯುತ್ ಉತ್ಪಾದಕರು ಕಳಪೆ ಉಪಕರಣಗಳನ್ನು ಬಳಸಿದರೂ, ಅವರಿಗೆ ಇದುವರೆಗೆ ಕೊಟ್ಟ ಅವಕಾಶಗಳನ್ನು, 'ಪ್ರೋತ್ಸಾಹ'ಗಳನ್ನು ಬಳಸಿಕೊಳ್ಳಲಾಗದಿದ್ದರೂ ಇನ್ನಷ್ಟು ಪ್ರೋತ್ಸಾಹ ನೀಡಬೇಕು ಎಂಬ ಮಾತುಗಳು ಕೇಳಬಂದಿವೆಯಷ್ಟೇ ಅಲ್ಲ, ಪರಮಾಣು ವಿದ್ಯುತ್ ಲಾಬಿ ಇದು ತನಗೊಂದು ಸದವಕಾಶ ಎಂಬಂತೆ ಕುಣಿದಾಡುತ್ತಿದೆ. ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಿಗರೂ ಕುಣಿದಾಡುತ್ತಿದ್ದಾರೆ. ಜಾಗತಿಕ ಹೂಡಿಕೆ ಬ್ಯಾಂಕಾದ ಗೋಲ್ಡ್‌ಮನ್ ಸಾಕ್ಸ್ ಈ ವಿದ್ಯುತ್ ಸ್ಥಗಿತ ವಿದ್ಯುತ್ ವಲಯದ 'ಸುಧಾರಣೆ'ಗಳಿಗೆ ವೇಗವರ್ಧಕವಾಗಿ ಕೆಲಸ ಮಾಡಬೇಕು ಎಂದು ಪುಕ್ಕಟೆ ಸಲಹೆ ನೀಡಿದೆ.



ಆದರೆ ವಾಸ್ತವವಾಗಿ ಈ ವಿದ್ಯುತ್ ಸ್ಥಗಿತ ವಿದ್ಯುತ್ ವಲಯದಲ್ಲಿ 'ಉದಾರೀಕರಣ' ಅಥವ 'ಸುಧಾರಣೆ'ಗಳದ್ದೇ ದುಷ್ಫಲ ಎಂಬುದನ್ನು ಇವರೆಲ್ಲರೂ ಮರೆಮಾಚುತ್ತಿದ್ದಾರೆ. ವಿದ್ಯುತ್ ವಲಯ 1991ರಲ್ಲಿ ಉದಾರೀಕರಣದ ಯುಗ ಆರಂಭಿಸಿದಾಗಲೇ 'ಸುಧಾರಣೆ'ಗಳಿಗೆ ತುತ್ತಾದ ಒಂದು ಕ್ಷೇತ್ರ, ಸುಧಾರಣೆಗಳೆಂದರೆ ನಿಯಂತ್ರಣಗಳನ್ನು ತೆಗೆದು, ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯನ್ನು ಪ್ರತ್ಯೇಕಗೊಳಿಸಿ, ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿಯವರಿಗೆ ಪ್ರೋತ್ಸಾಹ, ವಿತರಣೆಯನ್ನು ರಾಜ್ಯ ಸರಕಾರಗಳಿಗೆ ವಹಿಸಿ, ಖಾಸಗಿಯವರಿಗೆ 'ಪ್ರೋತ್ಸಾಹ'ದ ಭಾರವನ್ನು ಅವರ ಮೇಲೆ ಹಾಕಲಾಯಿತು. ಇದು ವಿದ್ಯುತ್ ವಲಯಕ್ಕೆ ಮಾರಕವಾಗುತ್ತದೆ ಎಂದು ಆಗಲೇ ಎಡಪಂಥೀಯರು ಎಚ್ಚರಿಸಿದ್ದರು. ಮೂರು ದಶಕಗಳ ನಂತರ ಅದು ನಿಜವಾಗುತ್ತಿದೆ. ಆದರೆ, ವಿಡಂಬನೆಯೆಂದರೆ, ಅದನ್ನೇ ಈಗ ಇಂತಹ ಮತ್ತಷ್ಟು 'ಸುಧಾರಣೆ'ಗಳಿಗೆ ಸಬೂಬಾಗಿ ಬಳಸಲಾಗುತ್ತಿದೆ!

ಉದಾರೀಕರಣದ ನಂತರದ ಮೂರು ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯುತ್ ಉತ್ಪಾದನೆಯಲ್ಲಿ ಆದ ಹೆಚ್ಚಳ, ಅದಕ್ಕೆ ಮೊದಲಿನ ಏಳನೇ ಪಂಚವಾರ್ಷಿಕ ಯೋಜನೆಯಲ್ಲಾದುದಕ್ಕಿಂತಲೂ ಕಡಿಮೆ. ಅದರಲ್ಲೂ 'ಪ್ರೋತ್ಸಾಹ' ಪಡೆದ ಖಾಸಗಿ ಉತ್ಪಾದಕರ ಕೊಡುಗೆ ಏನೂ ಇಲ್ಲ. ಏನಾದರೂ ಹೆಚ್ಚಳವಾಗಿದ್ದರೆ ಅದು ಕೇವಲ ಸಾರ್ವಜನಿಕ ವಲಯದ ಎನ್‌ಟಿಪಿಸಿಯಿಂದ ಮಾತ್ರ. ಈಗಿನ ವಿದ್ಯುತ್ ಕೊರತೆಗೆ ಪ್ರಧಾನ ಕಾರಣ ಇದು. 'ಮಾರುಕಟ್ಟೆಗಳೇ ಮುಕ್ತಿದಾಯಕ' ಎಂಬ ಉದಾರೀಕರಣ ಮಂತ್ರ ಇಲ್ಲೂ ಹುಸಿಯಾಯ್ತು. ಮಾರುಕಟ್ಟೆ ಮುಕ್ತಿ ಕೊಡದ್ದರಿಂದ ಒಂದೆಡೆ ವಿದ್ಯುತ್ ಕೊರತೆ, ಇನ್ನೊಂದೆಡೆ ವಿದ್ಯುತ್ ವಿತರಣೆ ವಲಯದಲ್ಲಿ ಸಾಕಷ್ಟು ಹಣ ಹೂಡಿಕೆ ಮಾಡದ್ದರಿಂದ ವಿದ್ಯುತ್ ಜಾಲದಲ್ಲಿ ವಿಫಲತೆ. ಪರಿಣಾಮವೆಂದರೆ ಕೋಟ್ಯಂತರ ಜನರು ಕಾರ್ಗತ್ತಲಲ್ಲಿ.

"ಭಾರತದಲ್ಲಿ ವಿದ್ಯುತ್ ವಲಯದ ಅಧೋಗತಿ ಆರಂಭವಾದದ್ದು 2003ರ ವಿದ್ಯುತ್ ಶಾಸನದೊಂದಿಗೆ. ನನಗಿನ್ನೂ ನೆನಪಿದೆ- ಈ ಶಾಸನದ ಕರ್ತೃಗಳಲ್ಲಿ ಒಬ್ಬರಾದ ಗಜೇಂದ್ರ ಹಲ್ದಿಯಾ(ಈತ ಈಗಲೂ ಯೋಜನಾ ಆಯೋಗದಲ್ಲಿ ಮೊಂಟೆಕ್‌ಸಿಂಗ್ ಅಹ್ಲುವಾಲಿಯಾರವರ ಸಲಹೆಗಾರರಾಗಿ ಮುಸುರಿಕೊಂಡಿದ್ದಾರೆ) ವಿದ್ಯುತ್ತನ್ನು ಸೋಪಿನಂತೆ ವ್ಯಾಪಾರ ಮಾಡಲು ಆಗಬೇಕು ಎಂಬುದೇ ನನ್ನ ಗುರಿ ಎಂದು ಹೇಳಿಕೊಳ್ಳುತ್ತಿದ್ದರು. ಸತತವಾಗಿ ಎರಡು ದಿನಗಳ ವಿದ್ಯುತ್ ಜಾಲ ಕುಸಿತ, ವಿದ್ಯುತ್ ವ್ಯವಸ್ಥೆ ಸೋಪಿನಂತಲ್ಲ, ಅದನ್ನು ದಾಸ್ತಾನು ಮಾಡಲಾಗುವುದಿಲ್ಲ, ಸದಾ ಪೂರೈಕೆ ಮತ್ತು ಬೇಡಿಕೆಯ ನಡುವೆ ಸಮತೋಲನವಿರಬೇಕು, ಅದಿಲ್ಲದಿದ್ದರೆ ಮೊನ್ನೆ ಆದಂತೆ ವಿದ್ಯುತ್ ಜಾಲದ ಕುಸಿತವೇ ಗತಿ ಎಂದು ಈಗಂತೂ ಎಲ್ಲರಿಗೂ ಮನವರಿಕೆಯಾಗಿರಬೇಕು" ಎನ್ನುತ್ತಾರೆ ವಿದ್ಯುತ್ ವಲಯದ ಪರಿಣತ ಡಾ.ಪ್ರಬೀರ್ ಪುರಕಾಯಸ್ಥ.

★

2ಜಿ: ತನ್ನ ಥಿಯರಿಯನ್ನು ತಾನೇ ಹೂತು ಹಾಕಿದ ಯುಪಿಎ-2 ಸರಕಾರ

2ಜಿ ತರಂಗಾಂತರ ಹಂಚಿಕೆಯಲ್ಲಿ ಸಿಜಿಎ ಹೇಳಿರುವಂತೆ ಸರಕಾರದ ಖಜಾನೆಗೆ ಏನೇನೂ ನಷ್ಟವಾಗಿಲ್ಲ ಎಂಬ ಥಿಯರಿಯನ್ನು ಯುಪಿಎ-2 ಘಟಾನುಘಟಿಗಳು ಪ್ರಚಾರ ಮಾಡಿಕೊಂಡು ತಿರುಗುತ್ತಿದ್ದ ಕಾಲವೊಂದಿತ್ತು. 2ಜಿ

ಪುಟ 13ಕ್ಕೆ

ದೇಶಿ-ವಿದೇಶಿ ಕಾರ್ಪೊರೇಟ್‌ಗಳಿಗೆ ತೆರಿಗೆ ತಪ್ಪಿಸುವ, ಪಾವತಿಸದಿರುವ ಸೌಲಭ್ಯ !

ಯುಪಿಎ-2 ಸಂಪುಟ ತನ್ನದೇ ಥಿಯರಿಯನ್ನು ತಾನೇ ಹೂತು ಬಿಟ್ಟಂತೆ, ಹೊಸ ಯುಪಿಎ-2 ಹಣಕಾಸು ಮಂತ್ರಿಗಳು ತಮ್ಮ ಹಿಂದಿನ ಸಹಯೋಗಿ ಹಣಕಾಸು ಮಂತ್ರಿಗಳೇ ಮಂಡಿಸಿ ಸಂಸತ್ತು ಅಂಗೀಕರಿಸಿದ ಹಣಕಾಸು ಮಸೂದೆಯ ಒಂದು ಮುಖ್ಯ ಅಂಶವನ್ನು ಹೂತು ಬಿಡುವ ಹಂಚಿಕೆಯಲ್ಲಿದ್ದಾರೆ. ಹಣಕಾಸು ಇಲಾಖೆಗೆ ಮರಳಿದ ಮೇಲೆ ಅವರು ನೀಡಿದ ಮೊದಲ ಹೇಳಿಕೆಯೇ ಇದರಿಂದಾಗಿ ಟೀಕೆಗೆ ಒಳಗಾಗಿದೆ. ಈ ಮಸೂದೆಯಲ್ಲಿ ಸೂಚಿಸಿದ ತೆರಿಗೆ ಕಾನೂನಿನ ಪೂರ್ವಾನ್ವಯ ಕುರಿತ ಅಂಶವನ್ನು ಹಿಂತೆಗೆದುಕೊಳ್ಳುವ ಹಾಗೂ ಜಿಎಎಆರ್ ನಿಯಮಗಳನ್ನು ಪರಾಮರ್ಶಿಸುವ ಆಶಯವನ್ನು ಸ್ಪಷ್ಟಪಡಿಸಿರುವುದೇ ಇದಕ್ಕೆ ಕಾರಣ.

ಈ ಕ್ರಮಗಳು ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಗಳಿಸಿದ ಆಸ್ತಿಗಳ ಮೇಲೆ ತೆರಿಗೆ ಪಾವತಿ ಮಾಡದಿರುವ ಮತ್ತು ದೇಶಿ-ವಿದೇಶಿ ಕಾರ್ಪೊರೇಟ್‌ಗಳಿಗೆ ತೆರಿಗೆ ತಪ್ಪಿಸುವ ಸೌಲಭ್ಯಗಳನ್ನು ಕೊಡಮಾಡುವಂತವುಗಳು.

ಸಂಸತ್ತು ಈಗಾಗಲೇ ಅಂಗೀಕರಿಸಿರುವ ಹಣಕಾಸು ಮಸೂದೆಯಲ್ಲಿ ತೆರಿಗೆ ಕಾನೂನುಗಳ ಪೂರ್ವಾನ್ವಯಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಅದನ್ನು ಹಿಂತೆಗೆದುಕೊಳ್ಳುವುದಾಗಿ ಹೊಸ ಹಣಕಾಸು ಮಂತ್ರಿಗಳು ಹೇಳಿದ್ದಾರೆ. ಇದರ ಅರ್ಥ ವೊಡಾಫೋನ್ ಭಾರತದಲ್ಲಿ ಗಳಿಸಿದ ಆಸ್ತಿಗಳ ಮೇಲೆ 12,000 ಕೋಟಿ ರೂ. ತೆರಿಗೆ ತೆರುವುದನ್ನು ತಪ್ಪಿಸಲು ನೆನಪಿಸುವುದು. ಇನ್ನೊಂದು, ಜಿಎಎಆರ್ ನಿಯಮಗಳು ಅಂದರೆ ಸಾಮಾನ್ಯ ತೆರಿಗೆ ತಪ್ಪಿಸುವುದನ್ನು ವಿರೋಧಿಸುವ ನಿಯಮಗಳು. ಇವನ್ನು ಪರಾಮರ್ಶಿಸುವುದಾಗಿ, ಅಂದರೆ ಕಾರ್ಪೊರೇಟ್‌ಗಳಿಗೆ ಅನುಕೂಲವಾಗಿರುವಂತೆ ಬದಲಿಸುವುದು ಎಂದೇ ತಾನೇ ಅರ್ಥ! ಈ ನಿಯಮಗಳನ್ನು ತಂದಿರುವುದು ಮಾರಿಶಸ್ ಮಾರ್ಗವನ್ನು ಬಳಸಿ ಕಂಪನಿಗಳು ತೆರಿಗೆ ತಪ್ಪಿಸದಂತೆ ತಡೆಯಲಿಕ್ಕಾಗಿ.

ಹೀಗೆ ಹೊಸ ಹಣಕಾಸು ಮಂತ್ರಿಗಳು ಸಂಸತ್ತಿನ ಮತ್ತು ತನ್ನದೇ ಸರಕಾರದ ನಿರ್ಧಾರಗಳನ್ನು ಬದಲಿಸುವ ನವ-ಉದಾರವಾದಿ ಪ್ಯಾಕೇಜನ್ನು ಕೊಡಲು ಉದ್ಯುಕ್ತರಾಗಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಹೇಳಿದೆ. 'ಹೂಡಿಕೆದಾರರ ವಿಶ್ವಾಸ' ಗಳಿಸಲು ರಾಷ್ಟ್ರೀಯ ನ್ಯಾಯದ ನೀತಿಗಳನ್ನು ಉಲ್ಲಂಘಿಸುವ ರೀತಿಯಲ್ಲಿ ತೆರಿಗೆ ಕಾನೂನುಗಳನ್ನು ತಿದ್ದುಪಡಿಗೊಳಿಸಬೇಕು ಎಂದು ತರ್ಕ ಮುಂದಿಡುವುದು ಅಸಹ್ಯಕರ ಸಂಗತಿ ಎಂದು ಅದು ಹೇಳಿದೆ. ಸಾರ್ವಜನಿಕ ಆದಾಯವನ್ನು ಬಲಿಗೊಟ್ಟು ಖಾಸಗಿ ಲಾಭಗಳನ್ನು ಗರಿಷ್ಠಗೊಳಿಸಿಕೊಳ್ಳಲು ದಾರಿಗಳನ್ನು ಒದಗಿಸಿ ಕೊಡುವುದು ಸರಿಯಲ್ಲ ಎಂದಿರುವ ಅದು ಸಂಸತ್ತು ಈಗಾಗಲೇ ಅಂಗೀಕರಿಸುವದನ್ನು ಜಾರಿಗೆ ತರಬೇಕು ಎಂದಿದೆ. ●

ಮಂಗಳೂರು ಮಹಿಳೆಯರ ಮೇಲೆ ಅನಾಗರೀಕ ಹಲ್ಲೆ: ಆಗಸ್ಟ್ 16 ಪ್ರತಿಭಟನೆಗೆ ಕರೆ

ಆಗಸ್ಟ್ 8 : ಬೆಂಗಳೂರಿನಲ್ಲಿ ದುಂಡು ಮೇಜಿನ ಸಭೆ

ಮಂಗಳೂರಿನಲ್ಲಿ ವಿದ್ಯಾರ್ಥಿಗಳ ಮೇಲೆ ನಡೆದ ಪೈಶಾಚಿಕ ದೌರ್ಜನ್ಯದ ವಿರುದ್ಧ ಭಾರತ ಕಮ್ಯೂನಿಸ್ಟ್ ಪಕ್ಷ ಸಿಪಿಐ(ಎಂ) ಆಯೋಜಿಸಿದ್ದ ದುಂಡು ಮೇಜಿನ ಸಭೆಯು ನಗರದ ಶಾಸಕರ ಭವನದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆ ವಹಿಸಿದ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಮಾತನಾಡಿ ಇಡೀ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಆದ ಉಡುಪಿ ಪ್ರಕರಣದಿಂದ ಹಿಡಿದು ಇಲ್ಲಿಯವರೆಗೆ ನಡೆದಂತಹ ಸಂಘಪರಿವಾರದ ಕೃತ್ಯಗಳು ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ತಲೆತಗ್ಗಿಸುವಂತೆ ಮಾಡಿದೆ. ಅಲ್ಲದೇ ಈ ಪ್ರಕರಣಗಳಲ್ಲಿ ಭಾಗಿಯಾಗಿರುವವರ ಮೇಲೆ ಈ ವರೆಗೂ ಯಾವುದೇ ರೀತಿಯಲ್ಲಿ ಸರ್ಕಾರ ಮತ್ತು ಪೊಲೀಸ್ ಇಲಾಖೆಗಳು ಕ್ರಮ ಕೈಗೊಂಡಿಲ್ಲ, ಒಬ್ಬ ಮುಸ್ಲಿಂ ವಿದ್ಯಾರ್ಥಿನಿಯು ಕಾಸರಗೊಡಿನಿಂದ ಮಂಗಳೂರಿಗೆ ನಿತ್ಯ ಪ್ರಯಾಣಿಸಿ ಕಾಲೇಜಿಗೆ ಬರುವ ವೇಳೆ ಹಿಂದು ಹುಡುಗನ ಜೊತೆ ಮಾತನಾಡಿದ್ದು ತಪ್ಪೆಂದು ಈ ಸಂಘ ಪರಿವಾರದವರು ಆಕೆಯ ಮೇಲೆ ದಾಳಿ ನಡೆಸಿದ್ದು ಆಕೆಯು ಪ್ರಾಣ ಭೀತಿಯಿಂದ ಓಡಿ ಪರಾರಿಯಾಗಿದ್ದು, ಚರ್ಚ್ ಮೇಲೆ ದಾಳಿ, ಪಬ್ ದಾಳಿ, ಈ ಎಲ್ಲಾ ಕೃತ್ಯಗಳು ಬಿಜೆಪಿಯ ಸಂಘ ಪರಿವಾರ ಮಾಡಿರುವುದೆಂದು ನಾಗರೀಕ ಸಮಾಜವೇ ಹೇಳುತ್ತದೆ ಮತ್ತು ಮಾಧ್ಯಮದ ಮೂಲಕ ಭಿತ್ತರವಾಗಿದೆ.

ಈ ಎಲ್ಲಾ ಕೃತ್ಯಗಳಿಗೆ ಪ್ರಮುಖ ರುವಾರಿ ಕೋಮುಗಲಭೆ ಪ್ರಚಾರಕ ಕಲ್ಲಡ್ಕ ಪ್ರಭಾಕರ ಭಟ್ಟ.ಈ ವ್ಯಕ್ತಿಯ ಮೇಲೆ ಕ್ರಿಮಿನಲ್ ಮೊಕದ್ದಮ್ಮೆಗಳು ದಾಖಲಾಗಿವೆ. ಈತನನ್ನು ಜನವರಿ ತಿಂಗಳಲ್ಲಿ ವಿಚಾರಣೆಗೆಂದು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ, ಈತನಿಗೆ ಯಾವುದೇ ಜಾಮೀನನ್ನು ನೀಡಿರುವುದಿಲ್ಲ. ಭಟ್ಟರನ್ನು ಬಂಧಿಸಿದರೆ ಮತ್ತೆ Law and Order ಆಗುತ್ತದೆ ಎಂದು ಪೊಲೀಸರನ್ನು ಭೇಟಿಮಾಡಿದಾಗ ತಿಳಿಸಿದರು.



ಇಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಘಪರಿವಾರದ ಏಜೆಂಟರಾಗಿ ಆಡಳಿತ ವರ್ಗ, ಹಾಗೂ ಬಿಜೆಪಿ ಸರ್ಕಾರ ಕುಮ್ಮಕ್ಕು ನೀಡುತ್ತಿದೆ. ಮುಂದಿನ ದಿನಗಳಲ್ಲಿ ಬರುವಂತ ಚುನಾವಣೆಗಾಗಿ ಈ ಎಲ್ಲಾ ವ್ಯವಸ್ಥಿತ ಕೋಮು ಗಲಭೆಗಳನ್ನು ಬಿ.ಜೆ.ಪಿ. ಸಂಘಪರಿವಾರದಿಂದ ಮಾಡಿಸುತ್ತಿದೆ. ಇದು ಇನ್ನು ಹೆಚ್ಚಾಗುವ ಸಾಧ್ಯತೆಗಳಿವೆ. ಈ ಎಲ್ಲಾ ರಾಜಕೀಯ ಬೆಳವಣಿಗೆಗಳನ್ನು ನೋಡಿ, ರಾಜಕೀಯ ಪರಿಸ್ಥಿತಿಯ ಬಗ್ಗೆ ಅಡ್ವಾಣಿಯವರೇ ತಮ್ಮ ಬ್ಲಾಗ್ ನಲ್ಲಿ ಬರೆದುಕೊಂಡಿದ್ದಾರೆ. ಹೀಗಾಗಿ ಜ್ಯಾತ್ಯಾತೀತ ಶಕ್ತಿಗಳ ಬಲಹೀನತೆಗಳನ್ನು ಕಾಣಬೇಕೆಂದು ಮನವಿ ಮಾಡಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಅಧ್ಯಕ್ಷರು ಎಮ್. ವೆಂಕಟಸ್ವಾಮಿ ಮಹಿಳೆಯರ ಮೇಲೆ ನಡೆದ ದೌರ್ಜನ್ಯಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿ ಈ ಕೃತ್ಯ ಎಸಗಿದವರನ್ನು ಗೂಂಡಾ ಕಾಯ್ದೆ ಅಡಿಯಲ್ಲಿ ಬಂಧಿಸಬೇಕು, ಮಹಿಳೆಯರ ಮೇಲೆ ನಡೆದ ದೌರ್ಜನ್ಯ ಕಾಯ್ದೆ ಹಾಕಬೇಕೆಂದು ಒತ್ತಾಯಿಸಿ, ಹಿಂದೂ ಸಂಘಟನೆ ಮಂಗಳೂರಿನಲ್ಲಿ ಇನ್ನೂ ಪ್ರಬಲವಾಗುತ್ತಲೇ ಇದೆ ಅದರಲ್ಲೂ ಪ್ರಭಾಕರ ಭಟ್ಟ ಮುಂಚೂಣಿಯಲ್ಲಿ ಸಂಘವನ್ನು ನಿಯಂತ್ರಿಸುತ್ತಿದ್ದಾನೆ. ಸಂವಿಧಾನ ಕಾಯ್ದೆಗಳನ್ನು ಈ ವ್ಯಾಪ್ತಿಯಲ್ಲಿ ಅಳವಡಿಸುವ ನಿಟ್ಟಿನಲ್ಲಿ ನಾವೆಲ್ಲರು ಹೋರಾಡೋಣ ಎಂದರು.

ಕಾಂಗ್ರೆಸ್ ಮುಖಂಡ ಎಲ್. ಹನುಮಂತಯ್ಯ ಮಾತನಾಡಿ ಈ ಘಟನೆ ನಾಗರೀಕ ಸಮುದಾಯ ಒಪ್ಪುವಂತದ್ದಲ್ಲ, ಇದು ಉದ್ದೇಶಪೂರಿತ, ಆಕಸ್ಮಿಕವಲ್ಲ. ಪ್ರಕರಣಗಳನ್ನು ಮುಚ್ಚಿಹಾಕಲು ಬಿಜೆಪಿ ಸರ್ಕಾರವು ಪ್ರಯತ್ನಿಸಿದೆ. ಅಲ್ಲದೇ ಹಿಂದಿನ ಎಷ್ಟೋ ಇಂತಹ ಪ್ರಕರಣಗಳನ್ನು ಬಿಜೆಪಿ ಸರ್ಕಾರ ಮುಚ್ಚಿಹಾಕಲಾಗಿದೆ. ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಮೇಲೆ ಪದೇ ಪದೇ ದಾಳಿಮಾಡುತ್ತಿದ್ದಾರೆ. ಕೇವಲ ರಾಜಕೀಯ ಉದ್ದೇಶಕ್ಕಾಗಿ ಓಟ್‌ಬ್ಯಾಂಕ್‌ಗಳಿಗಾಗಿ ಮಂಗಳೂರಿನಲ್ಲಿ ದಿನೇ ದಿನೇ ಇಂತಹ ಕೃತ್ಯಗಳು ಹೆಚ್ಚಾಗಿವೆ. ರಾಜಕೀಯ ಮಾರ್ಗ ಪಡೆಯುವ ದೃಷ್ಟಿಯಿಂದ ಹಿಂದುಳಿದವರನ್ನು ಈ ಅಹಿತಕರ ಕೃತ್ಯಗಳಿಗೆ ಬಳಸಲಾಗುತ್ತಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಜನಶಕ್ತಿ ವಾರಪತ್ರಿಕೆಯ ಲೇಖಕರಾದ ಗುರುಶಾಂತ್, ಮಂಗಳೂರಿನಲ್ಲಿ ನಡೆದ ಎಲ್ಲಾ ದೌರ್ಜನ್ಯಗಳನ್ನು ಪರೋಕ್ಷವಾಗಿ ಸಮರ್ಥಿಸಿ ಮಾತನಾಡಿದ ರಾಜ್ಯ ಮಹಿಳಾ ಅಯೋಗದ ಅಧ್ಯಕ್ಷೆ ಅಧಿಕಾರಕ್ಕೆ ರಾಜೀನಾಮೆ ಕೊಡಬೇಕೆಂದು ಹೇಳಿದರು. ಸಭೆಯಲ್ಲಿ ಆಗಸ್ಟ್ 16 ರಂದು ರಾಜ್ಯವ್ಯಾಪಿ ಪ್ರತಿಭಟನೆ ಮತ್ತು ಹರತಾಳ ನಡೆಸಲು ಸಿಪಿಐ(ಎಂ) ರಾಜ್ಯ ಸಮಿತಿಯು ಕರೆನೀಡಿ, ಈ ಸಭೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಜಿ.ಸಿ.ಬಯ್ಯಾರೆಡ್ಡಿ, ಸಿಪಿಐ(ಎಂ)ನ ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ, ಯು. ಬಸವರಾಜ್, ದಕ್ಷಿಣ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ. ಪ್ರಕಾಶ್, ಡಿವೈಎಫ್ಐ ನ ರಾಜ್ಯ ಅಧ್ಯಕ್ಷರು, ಎನ್.ಎಲ್.ಭರತ್ ರಾಜ್ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ಎಸ್. ಲಕ್ಷ್ಮಿ, ಎಸ್ಎಫ್ಐ ನ ರಾಜ್ಯಾಧ್ಯಕ್ಷ ಅನಂತ್‌ನಾಯ್ಕ್ ಮುಂತಾದವರು ಉಪಸ್ಥಿತರಿದ್ದ

■ ಯುವರಾಜ್ ಎಂ.ಪಿ.

ನೀರಿನ ಖಾಸಗೀಕರಣದ ವಿರುದ್ಧ

ಪು1 6 ರಿಂದ

ಸಿಪಿಐ(ಎಂ) ಮುಖಂಡ ದೋಗು ಸುವರ್ಣ ಅವರ ನೇತೃತ್ವದಲ್ಲಿ ನಡೆಯಿತು. ಅಂಭಾಗಿಲಿನಲ್ಲಿ 15 ನಿಮಿಷಗಳ ಕಾಲ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ತಡೆ ನಡೆಯಿತು. ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿ ಬಳಿಕ ಬಿಡುಗಡೆ ಮಾಡಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಕಾರ್ಯಕರ್ತರಾದ ವಿದ್ಯಾರಾಜ್, ಶೇಖರ ಬಂಗೇರ ಕುತ್ಪಾಡಿ, ಕೀರ್ತಿ ಕುಮಾರ್ ಕುತ್ಪಾಡಿ, ಸದಾನಂದ ಶೆಟ್ಟಿ ಹಾವಂಜೆ, ರವಿ ಪೂಜಾರಿ ಉಪ್ಪೂರು, ದಯಾನಂದ ಕೋಟ್ಯಾನ್ ಕೊಡವೂರು, ಸುಧಾಕರ ಕುತ್ಪಾಡಿ ಮೊದಲಾದವರು ಉಪಸ್ಥಿತರಿದ್ದರು.

ಆಹಾರ ಭದ್ರತೆ ಆಗ್ರಹಿಸಿ ಗುರುಪುರ ಕೈಕಂಭದಲ್ಲಿ ಪ್ರತಿಭಟನೆ:

ಗುರುಪುರ ವಲಯ ಸಿಪಿಐ(ಎಂ) ನೇತೃತ್ವದಲ್ಲಿ ಗುರುಪುರ ಕೈಕಂಭ ನಾಡ ಕಚೇರಿಯ ಎದುರು ಆಹಾರ ಭದ್ರತೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು. ಜುಲಾಯಿ 30 ರಂದು ಇರಿಸಿಕೊಂಡಿದ್ದ ಕಾರ್ಯಕ್ರಮ ಸಿಆರ್‌ಪಿಸಿ ಸೆ.144 ಇದ್ದ ಕಾರಣ ಮುಂದೂಡಲಾಗಿತ್ತು.

ಪ್ರತಿಭಟನಾಕಾರರನ್ನುದ್ದೇಶಿಸಿ ಪಕ್ಷದ ವಲಯ ಕಾರ್ಯದರ್ಶಿ ಯು.ಬಿ.ಲೋಕಯ್ಯ, ವಲಯ ಸಮಿತಿ ಸದಸ್ಯ ಗಂಗಯ್ಯ ಅಮೀನ್ ಮಾತನಾಡಿದರು. ವಲಯ ಸಮಿತಿ ಸದಸ್ಯರಾದ ಸದಾಶಿವದಾಸ್, ವಸಂತಿ ಕುಪ್ಪೆಪದವು, ನೋಣಯ್ಯ ಗೌಡ, ಗೋಪಾಲ, ಹೊನ್ನಯ್ಯ ಎಂ, ಹೊನ್ನಯ ವಾಮಂಜೂರು ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ನೂರೈವತ್ತಕ್ಕೂ ಹೆಚ್ಚು ಪಕ್ಷದ ಬೆಂಬಲಿಗರು ಹಾಜರಿದ್ದರು.

ಬಾಡಿಗೆ ಎತ್ತು, ಹೊಸ ವಿವಿ ಮತ್ತು ಶಿಕ್ಷಣದ ಭಾರತೀಕರಣವೂ



ಆರ್. ರಾಮಕೃಷ್ಣ

'ವ್ಯಕ್ತಿ ಪ್ರತಿಷ್ಠೆಗೆ ವಿಶ್ವ ವಿದ್ಯಾಲಯ'

ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಆಡಳಿತದಲ್ಲಿ ಶಿಕ್ಷಣ ರಂಗದಲ್ಲೂ ಮತ್ತು ಇತರ ಕಡೆಗಳಲ್ಲೂ ನಿಜಕ್ಕೂ ನಡೆಯುತ್ತಿರುವುದೇನು ? ಎಂಬುದಕ್ಕೆ ಇಲ್ಲೊಂದು ಸಾಕ್ಷಿ ಇದೆ. ದಯಮಾಡಿ ಗಮನಿಸಿ. ಹತ್ತಾರು ವರುಷ ಎಬಿವಿಪಿ ಮುಖಂಡರಾಗಿ ಶಿಕ್ಷಣದ ಕುರಿತು ಕಿರುಚಿದ ಎಬಿವಿಪಿ ಮುಖಂಡರುಗಳು ರಾಜ್ಯ ಬಿಜೆಪಿ ಸರ್ಕಾರದಲ್ಲಿ ಶಿಕ್ಷಣ ಸಚಿವರಾಗಿ, ಪ್ರಭಾವಿ ಸಚಿವರಾಗಿರುವ ಮೆರೆಯುತ್ತಿರುವ ಸರ್ಕಾರದಲ್ಲಿ ಏನು ನಡೆದಿದೆ ನೋಡಿ. ವಿಶ್ವ ವಿದ್ಯಾಲಯ ಶಿಕ್ಷಣಕ್ಕೆ ಗಂಭೀರ ಹಣ ಕಡಿತ. ಮುಖಂಡರ ಪ್ರಾದೇಶಿಕ ಸಂಕುಚಿತ ರಾಜಕಾರಣದ ಉದ್ದೇಶಗಳಿಗೆ ನೂತನ ವಿಶ್ವ ವಿದ್ಯಾಲಯಗಳ ಸ್ಥಾಪನೆ. ಶಿವಮೊಗ್ಗದಲ್ಲಿ ಸರ್ಕಾರ ಸ್ಥಾಪಿಸಲು ಉದ್ದೇಶಿಸಿರುವ ನೂತನ ಕೃಷಿ ಮತ್ತು ತೋಟಗಾರಿಕಾ ವಿ.ವಿ. ಕುರಿತು

ಕಳೆದ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದ ಮುಮ್ತಾಜ್ ಆಲಿಖಾನ್ ಅವರೇ ಹೇಳಿರುವ ಈ ಹೇಳಿಕೆಯನ್ನು ನೋಡಿ.

"ಒಬ್ಬ ವ್ಯಕ್ತಿಗಾಗಿ ಯಾವುದೇ ವಿಶ್ವವಿದ್ಯಾಲಯಗಳನ್ನು ಮಾಡಬೇಡಿ. ಒಬ್ಬ ವ್ಯಕ್ತಿಯ ಪ್ರತಿಷ್ಠೆಗಾಗಿ ಇತರ ವಿಶ್ವವಿದ್ಯಾಲಯಗಳ ಹಿತವನ್ನು ಕಡೆಗಣಿಸಬಾರದು. ಹೊಟ್ಟೆಗೆ ಹಿಟ್ಟಿಲ್ಲದಿರುವಾಗ ಜುಟ್ಟಿಗೆ ಮಲ್ಲಿಗೆ ಮುಡಿದಂತೆ ಸರ್ಕಾರ ವರ್ತಿಸುತ್ತಿದೆ. ಕಳೆದ ವರ್ಷ ಬಜೆಟ್‌ನಲ್ಲಿ ವಿಶ್ವವಿದ್ಯಾಲಯಗಳಿಗೆ 155 ಕೋಟಿ ರೂ. ನೀಡಿದ್ದರೆ, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಕೇವಲ 105 ಕೋಟಿ ನೀಡಲಾಗಿದೆ. ಬದಲಾಗಿ 3 ಹೊಸ ವಿಶ್ವವಿದ್ಯಾಲಯಗಳನ್ನು ರಾಜ್ಯದಲ್ಲಿ ಪ್ರಾರಂಭಿಸಲಾಗುತ್ತಿದೆ. ಮತ್ತೊಂದೆಡೆ ರಾಜ್ಯದಲ್ಲಿ ಕೃಷಿ, ಪಶುಸಂಗೋಪನೆ ಹಾಗೂ ತೋಟಗಾರಿಕೆ ಸಂಬಂಧಿಸಿ ಈಗಾಗಲೇ 5 ವಿ.ವಿ.ಗಳಿದ್ದು, 6ನೇ ವಿ.ವಿ. ಸೇರ್ಪಡೆಯಾಗಿದೆ. ಆದರೆ ಶೇ. 50 ಹೆಚ್ಚು ಸಿಬ್ಬಂದಿಗಳ ಹುದ್ದೆ ಖಾಲಿ ಉಳಿದಿದೆ."

ಭಾರತೀಯ ಸಂಸ್ಕೃತಿ' ಅಂತಾರೆ ಸಚಿವರು ಎಚ್ಚರ ಎಚ್ಚರ

"ಮುಂದಿನ ಶೈಕ್ಷಣಿಕ ವರ್ಷದಿಂದ ಒಂದರಿಂದ ಹತ್ತನೇ ತರಗತಿವರೆಗಿನ ಪಠ್ಯಕ್ರದಲ್ಲಿ ಬದಲಾವಣೆ ತರಲು ಸರ್ಕಾರ ನಿರ್ಧರಿಸಿದೆ. ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಸರ್ಕಾರ ಈಗಾಗಲೇ ಐದರಿಂದ ಎಂಟನೇ ತರಗತಿವರೆಗಿನ ಪಠ್ಯಕ್ರಮವನ್ನು ಬದಲಾಯಿಸಿದೆ. ಅದೇ ರೀತಿ ಒಂದರಿಂದ ಹತ್ತನೇ ತರಗತಿವರೆಗಿನ ಪಠ್ಯಕ್ರಮವನ್ನು ಬದಲಾಯಿಸುವಂತೆ ಎನ್‌ಸಿಎಫ್ ಸಲಹೆ ನೀಡಿದೆ. ಇದನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಪಠ್ಯಕ್ರಮ ಬದಲಾವಣೆಗೆ ಸಿದ್ಧತೆ ನಡೆಸಿದೆ. ಈ ಸಂಬಂಧ ತಜ್ಞರ ಜತೆ ಚರ್ಚೆ ನಡೆದಿದ್ದು, ಮುಂದಿನ ಶೈಕ್ಷಣಿಕ ವರ್ಷದಿಂದ ಹೊಸ ಪಠ್ಯಕ್ರಮ ಅಳವಡಿಸಲಾಗುವುದು.

ಯಾವ ಕಾರಣಕ್ಕೂ ಪಠ್ಯದ ಕೇಸರೀಕರಣ ಮಾಡುವುದಿಲ್ಲ. ಆದರೆ ರಾಷ್ಟ್ರೀಯತೆ, ಭಾರತೀಯ ಸಂಸ್ಕೃತಿಯನ್ನು ಮಕ್ಕಳಿಗೆ ತಿಳಿಸುವ ಕೆಲಸ ಮಾಡಲು ಹಿಂಜರಿಯುವುದಿಲ್ಲ."

ಹೀಗಂದಿದ್ದಾರೆ, **– ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ**

ಅಮಾನುಷ ಸತಿ ಪದ್ಧತಿಯನ್ನು ಸ್ವಾಭಿಮಾನ, ಧೈರ್ಯಎನ್ನುವುದು, ಕ್ರಿಶ್ಚಿಯನ್ನರು, ಮುಸ್ಲೀಮರು ಮುಂತಾದ ಧಾರ್ಮಿಕ ಅಲ್ಪ ಸಂಖ್ಯಾತರನ್ನು ವಿದೇಶಿಯರು ಎನ್ನುವುದು ಆಮೇಲೆ ಇಂತಹ ದ್ವೇಷಪೂರಿತ ಮತಾಂಧತೆಯನ್ನು ದೇಶ ಪ್ರೇಮ ಅನ್ನುವುದು ಹೀಗೆ ಇವರ ಶಿಕ್ಷಣ ಸುಧಾರಣೆಯ ಅಜೆಂಡಾ ಕೊನೆ ಇಲ್ಲದ್ದು. ರಾಜ್ಯದ ಜನತೆ, ಶಿಕ್ಷಣ ಪ್ರೇಮಿಗಳು ಈ ಕುರಿತು ಕಟ್ಟೆಚ್ಚರ ವಹಿಸಬೇಕಾಗಿದೆ.

ಎತ್ತು ಬಾಡಿಗೆಗೆ ಪಡೆದಂತೆ ಅತಿಥಿ ಉಪನ್ಯಾಸಕರು ಬಾಡಿಗೆಗೆ

ಸರಕಾರಿ ಪದವಿ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು 'ಬಾಡಿಗೆದಾರ'ರೆಂದು ಕರೆದು ಸುತ್ತೋಲೆ ಹೊರಡಿಸಿರುವ ಅಮೋಘ ಕೆಲಸವೊಂದು ಬಿಜೆಪಿ ಸರ್ಕಾರದ ಅಡಿಯಲ್ಲಿ ನಡೆದಿದೆ.

ಎತ್ತುಗಳನ್ನು ಬಾಡಿಗೆಗೆ ತೆಗೆದುಕೊಳ್ಳುವುದು ನಮಗೆ ಗೊತ್ತಿದ್ದೆ. ಬಿಜೆಪಿ ಸರ್ಕಾರದಲ್ಲಿ ಅತಿಥಿ ಉಪನ್ಯಾಸಕರ ಸೇವೆಯನ್ನು ಬಾಡಿಗೆ ತೆಗೆದುಕೊಳ್ಳಲಾಗಿದೆ ಎಂದು ಸರ್ಕಾರ ತಾನೇ ಸುತ್ತೋಲೆಯಲ್ಲಿ ಹೇಳಿದೆ.

ಕಳೆದ ಹಲವು ವರ್ಷಗಳಿಂದ ವಿವಿಧ ಸರಕಾರಿ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರಿಗೆ ಸಮಯಕ್ಕೆ ಸರಿಯಾಗಿ ಸಂಬಳವೇ ನೀಡುತ್ತಿಲ್ಲ. ಮೂರು ಇಲ್ಲವೇ ಆರು ತಿಂಗಳಿಗೊಮ್ಮೆ ಒಂದು ಬಾರಿ ವೇತನ ನೀಡಲಾಗುತ್ತಿದೆ. ಇದನ್ನೇ ನಂಬಿಕೊಂಡು ಜೀವನ ಸಾಗಿಸುತ್ತಿರುವ ಅತಿಥಿ ಉಪನ್ಯಾಸಕರ ಕುಟುಂಬಗಳು ತೀವ್ರ ತೊಂದರೆಯಲ್ಲಿವೆ. ಅಲ್ಲದೆ ಬೇಸಿಗೆ ರಜೆ ಮತ್ತು ಮಧ್ಯಂತರ ರಜೆ ಅವಧಿಯಲ್ಲಿ ಅತಿಥಿ ಉಪನ್ಯಾಸಕರಿಗೆ ಸಂಭಾವನೆ ನೀಡುವುದಿಲ್ಲ ಎಂದು ಸರ್ಕಾರ ಹೇಳಿದೆ. ಇದು ಕೂಡ ಸರಕಾರದ 'ಎತ್ತು' ಬಾಡಿಗೆಗೆ ಪಡೆಯುವ ನೀತಿಗೆ ಪೂರಕವಾಗಿಯೇ ಇದೆ. ರಜಾ ಕಾಲವೂ ಸೇರಿ 8 ತಿಂಗಳ ವೇತನ ನೀಡುವ ಬದಲಿಗೆ ಮುಂದೆ ಕೇವಲ ಆರು ತಿಂಗಳು ಮಾತ್ರ ವೇತನ ನೀಡುವ ತೀರ್ಮಾನಕ್ಕೆ ಬಂದಿರುವುದು ರಾಜ್ಯ ಬಿಜೆಪಿ ಸರ್ಕಾರದ ಶಿಕ್ಷಣ ಪ್ರೇಮದ ಪರಿಗೆ ಉದಾಹರಣೆಯಾಗಿ ಉಳಿಯುತ್ತದೆ.

ತುಮಕೂರಿನ ಅತಿಥಿ ಉಪನ್ಯಾಸಕರಾದ ಡಾ.ಶಿವಣ್ಣ ತಿಮ್ಲಾಪುರ, ಡಾ.ಹನುಮಂತ ರಾಯಪ್ಪ, ವಿಜಯಕುಮಾರ್, ಕೆ .ಈ. ಸಿದ್ದಯ್ಯ, ಟಿ.ಕುಮಾರ್, ಡಾ.ಸವಿತ ಸರ್ಕಾರದ ಧೋರಣೆಯನ್ನು ತೀವ್ರವಾಗಿ ಖಂಡಿಸಿದ್ದಾರೆ.

ಯುಪಿಎ ದರ್ಬಾರ್....

ಪುಟ 11 ರಿಂದ

ಹಂಚಿಕೆಯನ್ನು ರದ್ದುಗೊಳಿಸಿದ ಸುಪ್ರಿಂ ಕೋರ್ಟ್ ತೀರ್ಪಿನ ನಂತರ ಅದು ತಣ್ಣಗಾಯ್ತು. ಈಗೆ ಸ್ವತ: ಯುಪಿಎ–2 ಸರಕಾರವೇ ತನ್ನದೇ ಆದ ಈ ಥಿಯರಿಯನ್ನು ಆಳವಾಗಿ ನೆಲದಲ್ಲಿ ಹೂತು ಬಿಟ್ಟಿದೆ ಎಂದು ವಿಶ್ಲೇಷಕರೊಬ್ಬರು ಉದ್ಗರಿಸಿದ್ದಾರೆ.

ಇತ್ತೀಚೆಗೆ ಯುಪಿಎ–2 ಸಂಪುಟ ಅಖಿಲ ಭಾರತ 2ಜಿ ತರಂಗಾಂತರದ 1,800 ಮೆಗಾಹರ್ಟ್ಸ್ ಪಟ್ಟಿಯಲ್ಲಿ ಹರಾಜಿಗೆ 5 ಮೆಗಾಹರ್ಟ್ಸ್‌ಗೆ ರೂ. 14,000 ಕೋಟಿಯಂತೆ ಮೀಸಲು ಬೆಲೆ ನಿಗದಿ ಮಾಡಿದೆ. ಇದರ ಪ್ರಕಾರ ಲೆಕ್ಕ ಹಾಕಿದರೆ 2008ರಲ್ಲಿ 2ಜಿ ತರಂಗಾಂತರ ಹಂಚಿಕೆಯಲ್ಲಿ ಸರಕಾರದ ಬೊಕ್ಕಸಕ್ಕೆ ಬರದೆ ಆದ ನಷ್ಟ, 2010ರಲ್ಲಿ ಮಹಾಲೆಕ್ಕ ಪರಿಶೋಧಕರ(ಸಿಎಜಿ) ವರದಿ ಲೆಕ್ಕ ಹಾಕಿದ ರೂ.1.76ಲಕ್ಷ ಕೋಟಿಗಿಂತಲೂ ಹೆಚ್ಚಾಗುತ್ತದೆ. ಅಲ್ಲದೆ ತನ್ನ ಲೆಕ್ಕ ಪರಿಶೋಧನೆಯ ವರದಿಯಲ್ಲಿ ಸಿಎಜಿ ಮೌಲ್ಯಮಾಪನಕ್ಕೆ ಬಳಸಿದ ವಿಧಾನ ಸರಿಯಾಗಿಯೆ ಇತ್ತು ಎಂಬುದನ್ನು ಕೂಡ ಇದು ಸಾಬೀತು ಮಾಡುತ್ತದೆ.

ಸಿಎಜಿ 2ಜಿ ತರಂಗಾಂತರದ ಹರಾಜಿನ ಆದಾಯವನ್ನು, ಆ ಮೂಲಕ ಸರಕಾರದ ಖಜಾನೆಗೆ ಆದ ನಷ್ಟವನ್ನು ಲೆಕ್ಕ ಹಾಕಲು ಅನುಸರಿಸಿದ ವಿಧಾನವೇ ತಪ್ಪು, ಆದ್ದರಿಂದ 1.76ಲಕ್ಷ ಕೋಟಿ ಎಂಬುದಕ್ಕೆ ಅರ್ಥವೇ ಇಲ್ಲ ಎಂದು ಹಗರಣ ಪೀಡಿತ ದೂರಸಂಪರ್ಕ ಮಂತ್ರಿಯಿಂದ ಅಧಿಕಾರ ವಹಿಸಿಕೊಂಡ ಆಗಿನ ಹೊಸ ದೂರಸಂಪರ್ಕ ಮಂತ್ರಿ ಮತ್ತು ಯಶಸ್ವಿ ವಕೀಲನೆನಿಸಿಕೊಂಡವರು ಒಂದು ವಿಶೇಷ ಪತ್ರಿಕಾಗೋಷ್ಠಿ ಕರೆದು ಪ್ರತಿಪಾದಿಸಿದ್ದರು. ನಂತರ ಬಹಳ ಕಾಲ, ಸುಪ್ರಿಂ ಕೋರ್ಟ್ ತೀರ್ಪು ಬರುವವರೆಗೂ ಈ ವಕೀಲಿಯನ್ನು ಮುಂದುವರಿಸಿದರು. ಅವರಷ್ಟೇ ಅಲ್ಲ, ಸ್ವತಃ ಪ್ರಧಾನ ಮಂತ್ರಿಗಳು ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರು ಕೂಡ ಸಿಎಜಿ ಮೇಲೆ ಹರಿ ಹಾಯ್ದಿದ್ದರು. ಯೋಜನಾ ಆಯೋಗದ ಉಪಾಧ್ಯಕ್ಷರು ದಾವೊಸ್‌ನಲ್ಲಿ 'ವಿಶ್ವ ಆರ್ಥಿಕ ವೇದಿಕೆ'ಯೆಂಬ ಜಾಗತಿಕ ಹಣವಂತರ ಕೂಟದಲ್ಲೂ ಇದನ್ನು ಪುನರುಚ್ಚರಿಸಿದ್ದರು.

ಈಗ ಈ ಮೀಸಲು ಬೆಲೆಯನ್ನು ಶಿಫಾರಸು ಮಾಡಿದ ಅಧಿಕಾರ ಸಂಪನ್ನ ಮಂತ್ರಿಗಳ ಗುಂಪಿ(ಇಜಿಒಎಂ)ನಲ್ಲಿ ಈ ದೂರಸಂಪರ್ಕ ಮಂತ್ರಿಗಳೂ ಇದ್ದಾರೆ, ಅದೇ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯ ಯುಪಿಎ–2 ಸಂಪುಟ ಅದನ್ನು ಅಂಗೀಕರಿಸಿದೆ !

"ಶ್ರೀ ರಾಮುಲು ಮಾತಿನಂತೆ ನಡೆದುಕೊಂಡೆ, 2012ರ ಏಪ್ರಿಲ್ 21ರಂದು ಸಂಜೆ ನನ್ನ **ಅಂಕಲ್ ಶ್ರೀರಾಮುಲು** ನನಗೆ ಪೋನ್ ಮಾಡಿ ಆರ್. ಸೂರ್ಯ ಪ್ರಕಾಶ್ ಬಾಬು ಎಂಬುವರಿಗೆ ಕೆಲ ನ್ಯಾಯಾಧೀಶರ ಪರಿಚಯವಿದೆ. ಜನಾರ್ದನರೆಡ್ಡಿ ಅವರಿಗೆ ಜಾಮೀನು ಕೊಡಿಸಲು ನೆರವಾಗಲು ಅವರು ತಯಾರಿದ್ದಾರೆ. ನನ್ನನ್ನು ಸಂಪರ್ಕಿಸುವಂತೆ ಸೂರ್ಯಪ್ರಕಾಶ್ ಬಾಬುಗೆ ಈಗಾಗಲೇ ಪೋನ್ ಮೂಲಕ ತಿಳಿಸಿರುವುದಾಗಿ ಹೇಳಿದರು"

– ಸುರೇಶ್ ಬಾಬು,
ಕಂಪ್ಲಿ ಬಿಜೆಪಿ ಶಾಸಕ

"ರಾಜ್ಯ ಬಿಜೆಪಿ ಬಗ್ಗೆ ಅಡ್ವಾಣಿ ಹೇಳಿರುವುದೆಲ್ಲಾ ಸತ್ಯ. ದಕ್ಷಿಣ ಭಾರತದಲ್ಲಿ ಪ್ರಥಮ ಬಾರಿಗೆ ಬಿಜೆಪಿ ಅಧಿಕಾರಕ್ಕೆ ಬಂದಾಗ ವ್ಯಾಪಕ ಭ್ರಷ್ಟಾಚಾರ, ಕೇಳಿಬಂದಿದ್ದರಿಂದ ಕೇಂದ್ರ ನಾಯಕರಿಗೆ ನೋವಾಗಿದೆ."

– ಡಿ.ವಿ. ಸದಾನಂದಗೌಡ,
ಮಾಜಿಮುಖ್ಯಮಂತ್ರಿ

ತ್ರಿಪುರಾ

ಉಗ್ರರೊಂದಿಗಿನ ಕಾಂಗ್ರೆಸ್ ಸಂಬಂಧ ಮತ್ತೊಮ್ಮೆ ಅನಾವರಣ ಪೊಲೀಸರ ಮುಂದೆ ಬಯಲಾದ ಉಗ್ರರ ಸಂಚಿನ ಕಥೆ

ತ್ರಿಪುರ ಈಶಾನ್ಯ ಭಾರತದ ಒಂದು ಪುಟ್ಟ ಗುಡ್ಡಗಾಡು ರಾಜ್ಯ. ಈ ರಾಜ್ಯದಲ್ಲಿ 1978ರಿಂದ ಇಲ್ಲಿಯವರೆಗೆ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ಒಂದು ಜನಪರ ಆಡಳಿತ ಕೊಡುತ್ತಾ ಬರುತ್ತಿದೆ. 1988 ರಿಂದ 1993 ರವರೆಗಿನ ಒಂದು ಅವಧಿಗೆ ಮಾತ್ರ ಅಲ್ಲಿ ಕಾಂಗ್ರೆಸ್ ಮತ್ತು ಟಿಯುಜೆಎಸ್‌ಗಳು ಸೇರಿ ಸರ್ಕಾರ ನಡೆಸಿದ್ದವು. ಆಗ ಎಡರಂಗವನ್ನು ಅಧಿಕಾರದಿಂದ ಕೆಳಗಿಳಿಸಲು ಕಾಂಗ್ರೆಸ್ ಪಕ್ಷ ಆಯ್ಕೆ ಮಾಡಿಕೊಂಡ ದಾರಿ ದೇಶದ ಐಕ್ಯತೆ ಮತ್ತು ಭದ್ರತೆಗೆ ಕುತ್ತು ತರುವ ಅಪಾಯಕಾರಿ ದಾರಿಯಾಗಿತ್ತು. ವಿಛಿದ್ರಕಾರಿ, ಭಯೋತ್ಪಾದಕ ಶಕ್ತಿಗಳೊಂದಿಗೆ ಕೈಜೋಡಿಸಿದ್ದ ಕಾಂಗ್ರೆಸ್ ಪಕ್ಷ ಹಿಂಸೆ, ದಾಳಿ, ತೋಳ್ಬಲ, ಬಂದೂಕಿನ ಬಲದೊಂದಿಗೆ ತಾತ್ಕಾಲಿಕ ಯಶಸ್ಸನ್ನೂ ಕಂಡಿತ್ತು. ಆದರೆ ಜನತೆ ಮತ್ತೆ 93 ರಲ್ಲಿ ಛಿದ್ರಕಾರಿಗಳ ಸಂಚುಗಳಿಗೆ ಅವಕಾಶ ನೀಡದೆ ಅವರನ್ನು ನಿರ್ಣಾಯಕವಾಗಿ ಸೋಲಿಸಿ ಎಡರಂಗವನ್ನು ಅಧಿಕಾರಕ್ಕೆ ತಂದರು. ಬುಡಕಟ್ಟು ಜನರು, ಬುಡಕಟ್ಟು ಅಲ್ಲದವರ ನಡುವೆ ಐಕ್ಯತೆ ಬೆಸೆಯುತ್ತಾ, ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೂ ರಾಜ್ಯ ಸರ್ಕಾರದ ಸೀಮಿತ ಸಂಪನ್ಮೂಲ ಬಳಸಿ ಜನಪರ ಅಭಿವೃದ್ಧಿಯ ಕಣ್ಣೋಟದಲ್ಲಿ ಒಂದು ಮಾದರಿ ರಾಜ್ಯ ಸರ್ಕಾರವಾಗಿ ಕೆಲಸ ಮಾಡುತ್ತಿದೆ. ಹಿಂಸಾಪೀಡಿತ ತ್ರಿಪುರದ ನೆಲದಲ್ಲಿ ಕ್ರಮೇಣ ಶಾಂತಿ ನೆಲೆಯೂರಿದೆ.



ಆದರೆ ಇದೀಗ ವಿಧಾನ ಸಭಾ ಚುನಾವಣೆಗಳು ಹತ್ತಿರವಾಗುತ್ತಿರುವಂತೆ ಕಾಂಗ್ರೆಸ್ ಪಕ್ಷವು ತನ್ನ 1988ರ ಆಟವನ್ನು ಮತ್ತೆ ತೀವ್ರಗೊಳಿಸಲು ಪ್ರಯತ್ನಿಸುತ್ತಿರುವುದು ಮಾತ್ರ ಅತ್ಯಂತ ಅಪಾಯಕಾರಿ ವಿಷಯ.

ಏನು ನಡೆದಿದೆ ಅಲ್ಲಿ

2013ರ ವಿಧಾನಸಭಾ ಚುನಾವಣೆಗೆ ತ್ರಿಪುರಾದಲ್ಲಿ ಈಗಲೇ ಭರದ ಸಿದ್ಧತೆಗಳು ನಡೆಯುತ್ತಿವೆ. ಆಗಲೇ ಆಡಳಿತಾರೂಢ ಎಡರಂಗದ ಖ್ಯಾತಿಗೆ ಮಸಿ ಬಳಿಯುವ, ಅದರ ವಿರುದ್ಧ ಗೂಬೆ ಕೂರಿಸುವ ವ್ಯವಸ್ಥಿತ ಪಿತೂರಿ ನಡೆದಿದೆ.

ತ್ರಿಪುರಾದ ಕೆಲ ಜನನಿಬಿಡ ಪ್ರದೇಶದಲ್ಲಿ ಸ್ಫೋಟಗಳು ನಡೆಯುತ್ತಿವೆ. ಇದರ ಹಿಂದೆ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷ ಐಎನ್‌ಪಿಟಿಯ ಕೆಲ ನಾಯಕರ ನೇರ ಕೈವಾಡ ಇದೆ.

2013ರ ವಿಧಾನಸಭಾ ಚುನಾವಣೆಗೆ ತ್ರಿಪುರಾದಲ್ಲಿ ಈಗಲೇ ಭರದ ಸಿದ್ಧತೆಗಳು ನಡೆಯುತ್ತಿವೆ. ಇಂತಹ ಹೊತ್ತಲ್ಲಿ ತ್ರಿಪುರಾದ ಕೆಲ ಜನನಿಬಿಡ ಪ್ರದೇಶದಲ್ಲಿ ಸ್ಫೋಟಗಳು ನಡೆದಿವೆ. ಇದರ ಹಿಂದೆ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷ ಐಎನ್‌ಪಿಟಿಯ ಕೆಲ ನಾಯಕರ ನೇರ ಕೈವಾಡ ಇದೆ ಎನ್ನುವುದು ಸ್ಪಷ್ಟವಾಗಿದೆ. ಚುನಾವಣಾ ಲಾಭಕ್ಕಾಗಿ ದೇಶದ ಐಕ್ಯತೆ ಸಮಗ್ರತೆಯೊಂದಿಗೆ ಚೆಲ್ಲಾಟವಾಡುವ ಈ ರಾಜಕಾರಣಕ್ಕೆ ಏನನ್ನುವುದು. ?

ಘಟನೆಯ ಕುರಿತು

ಕಳೆದ ಜೂನ್ 16ರಂದು ಖಚಿತ ಮಾಹಿತಿ ಮೇರೆಗೆ ಪೊಲೀಸರು ಮಾರುತಿ ವ್ಯಾನ್ ಒಂದನ್ನು ನಿಲ್ಲಿಸುತ್ತಾರೆ. ಭಾರೀ ದೂರದಿಂದ ಹಿಂಬಾಲಿಸಿದ ಬಳಿಕ ಪಶ್ಚಿಮ ತ್ರಿಪುರಾದ ಜಿರಾನಿಯಾ ಎಂಬಲ್ಲಿ ತಡೆಯಲಾಗುತ್ತದೆ. ಅದರಲ್ಲಿದ್ದ ಮೂವರನ್ನು ಬಂಧಿಸಲಾಗುತ್ತದೆ. ಅವರ್‍ಯಾರು ಅಂದ್ರೆ, ಎನ್‌ಎಲ್‌ಎಫ್‌ಟಿಯ ಶರಣಾಗತ ಉಗ್ರಗಾಮಿ ಧನು ಕಲ್ಯೆ, ಆತನ ತಂಗಿ ರಾಧಾಶ್ರೀ ಕಲ್ಯೆ ಮತ್ತು ಚಾಲಕ ಬಿಶು ಕಲ್ಯೆ. ಎಲ್ಲರೂ ದಕ್ಷಿಣ ತ್ರಿಪುರಾದ ಅಮರಾಪುರ ಜಿಲ್ಲೆಯ ತೈಡು ಪ್ರದೇಶದ ನಿವಾಸಿಗಳಾಗಿದ್ದಾರೆ. ಅವರಿಂದ ಪೊಲೀಸರು ವಶಪಡಿಸಿಕೊಳ್ಳುವ ಸಾಮಾಗ್ರಿಗಳನ್ನು ನೋಡಿದರೆ ಎಂಥವರೂ ಬೆಚ್ಚಿ ಬೀಳಬೇಕು.... 25 ಲಕ್ಷ ರೂಪಾಯಿ, ತ್ರಿಪುರಾ ಸರ್ಕಾರ ಎಂಬ ಹೆಸರಿರುವ ಲೆಟರ್‌ಪ್ಯಾಡ್ ಮತ್ತು ಒಂದು ಪೆನ್‌ಡ್ರೈವ್.




ಮರುದಿನ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುತ್ತದೆ. ಆಗ ಹೆಚ್ಚಿನ ತನಿಖೆಗೆ ಕೋರ್ಟ್ ಆದೇಶ ನೀಡುತ್ತದೆ. ಸರ್ಕಾರಿ ಕ್ವಾರ್ಟರ್ಸ್‌ನಲ್ಲಿ ವಾಸವಾಗಿದ್ದ ಧನು ಕಲ್ಯೆ ಮನೆಗೆ ದಾಳಿ ನಡೆದಾಗ ಎನ್‌ಎಲ್‌ಎಫ್‌ಟಿಯ ಲೆಟರ್‌ಹೆಡ್, ಬಾಂಗ್ಲಾದೇಶಿ ಕರೆನ್ಸಿ ಮತ್ತು ಎನ್‌ಎಲ್‌ಎಫ್‌ಟಿ ಲೆಟರ್‌ಹೆಡ್‌ನಲ್ಲಿ ನಡೆಸಿದ ಪತ್ರವ್ಯವಹಾರಗಳು, ಸಣ್ಣ ಡೈರಿಗಳು, ಸೀಡಿ ಮತ್ತು ಡಿವಿಡಿಗಳು ದೊರೆತವು.

ಆರಂಭದಲ್ಲಿ ಧನು ಯಾವುದೇ ವಿಷಯ ಹೇಳದಿದ್ದರೂ ಬಳಿಕ ಎನ್‌ಎಲ್‌ಎಫ್‌ಟಿ ಜೊತೆಗಿನ ಸಂಪರ್ಕ ಹಾಗೂ ಇತರ ರಹಸ್ಯ ವಿಷಯಗಳನ್ನು ಹೇಳಿದರು. ಇದರಿಂದ ಪ್ರತ್ಯೇಕತಾವಾದಿ ಉಗ್ರವಾದಿ ಸಂಘಟನೆ ರಾಜ್ಯದಲ್ಲಿ ಮತ್ತೆ ಸಕ್ರಿಯವಾಗಿದ್ದು, ವಿಧ್ವಂಸಕ ಕೃತ್ಯಕ್ಕೆ ಸಂಚು ಹಾಕಿರುವ ಸ್ಫೋಟಕ ಮಾಹಿತಿ ದೊರೆಯಿತು. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ತ್ರಿಪುರಾ ಸರ್ಕಾರ, ತನಿಖೆಯನ್ನು ಸಿಐಡಿಯ ವಶಕ್ಕೆ ಒಪ್ಪಿಸಿತು.

ಧನು ಕಲ್ಯೆನ ಹೇಳಿಕೆ ಆಧರಿಸಿ ಸಿಐಡಿ ಪೊಲೀಸರು ಇಬ್ಬರು ಎನ್‌ಎಲ್‌ಎಫ್‌ಟಿ ಉಗ್ರರನ್ನು ಬಂಧಿಸಿದರು. ಆಶಿಯಾತು ಮೊಗ್ ಮತ್ತು ಪ್ರದೀಪ್ ಕಲ್ಯೆ ಬಂಧಿತ ಆರೋಪಿಗಳು. ಇನ್ನು ಪ್ರದೀಪ್ ನಿವಾಸಕ್ಕೆ ದಾಳಿ ನಡೆಸಿದಾಗ ಇನ್ನಷ್ಟು ಆತಂಕಕಾರಿ ವಿಷಯ ಬೆಳಕಿಗೆ ಬಂದಿತು. 12ಕ್ಕೂ ಹೆಚ್ಚು ಇ-ಮೇಲ್ ಐಡಿಗಳು, ಈ ಪೈಕಿ ಒಂದರಲ್ಲಿ ಕೋಡ್‌ವರ್ಡ್ ಉಳ್ಳ ಸಂಭಾಷಣೆಗಳು ದೊರೆತವು. ತನಿಖೆ ಮುಂದುವರಿದಿದ್ದು, ಈಗ ತಜ್ಞರು ಇದನ್ನು ಡೀಕೋಡ್ ಮಾಡುವುದರಲ್ಲಿ ನಿರತರಾಗಿದ್ದಾರೆ.

ಕಾಂಗ್ರೆಸ್-ಐಎನ್‌ಪಿಟಿ-ಎನ್‌ಎಲ್‌ಎಫ್‌ಟಿ ನಂಟು

ಧನು ಈಗಾಗಲೇ ಪೊಲೀಸ್ ತನಿಖೆಯಲ್ಲಿ ಒಪ್ಪಿಕೊಂಡ ಪ್ರಕಾರ, ಎನ್‌ಎಲ್‌ಎಫ್‌ಟಿಯ ಮುಖ್ಯಸ್ಥ ವಿಶ್ವಮೋಹನ್ ದೇಬ್‌ಬರ್ಮಾ ನಿರ್ದೇಶನದ ಮೇರೆಗೆ ಬಾಂಗ್ಲಾದೇಶದಲ್ಲಿರುವ ಎನ್‌ಎಲ್‌ಎಫ್‌ಟಿ ಕೇಂದ್ರ ಕಚೇರಿಗೆ ಹಣ ರವಾನೆಯಾಗುತ್ತದೆ. ಈಗ ಪೊಲೀಸರ ವಶವಾಗಿರುವುದು ಐದನೇ ಕಂತು. ಇಡೀ ಹಣ ಕೋಸ್ಪಲ್ ಕಂಪೆನಿ ಎಂಬ ಸಂಸ್ಥೆ ನೀಡಿದ್ದು. ಈ ಕಂಪೆನಿ ಭಾರತ ಮತ್ತು ಬಾಂಗ್ಲಾ ನಡುವಿನ ಗಡಿಗೆ ವೈರ್‌ಫೆನ್ಸಿಂಗ್ ಮಾಡುವ ಗುತ್ತಿಗೆ ಪಡೆದಿದೆ. ಇಂಟರ್‌ನೆಟ್ ಮೂಲಕ ಎನ್‌ಎಲ್‌ಎಫ್‌ಟಿ



ಜೊತೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದ ಪ್ರದೀಪ ಅಗರ್ತಲಾದಲ್ಲಿ ಇದ್ದುಕೊಂಡು ಹಣ ವಿಲೇವಾರಿ ಮಾಡುವ ಮಾಸ್ಟರ್‌ಮೈಂಡ್ ಪ್ಲ್ಯಾನ್ ರೂಪಿಸಿದ್ದು. ಈತ ಕಾಂಗ್ರೆಸ್‌ನ ಎಸ್.ಟಿ ವಿಭಾಗದ ಸಂಚಾಲಕನಾದ ದೇಬಬ್ರತ ಕ ಜೊತೆ ಸೇರಿ 21 ಮಂದಿ ಆದಿವಾ ಯುವಜನರಿಗೆ ಶಸ್ತ್ರಾಸ್ತ್ರ ತರಬೇತಿ ನೀಡಲ ಬಾಂಗ್ಲಾ ದೇಶಕ್ಕೆ ಕಳುಹಿಸಿದ್ದ ಎಂ ಮಾಹಿತಿಯೂ ಪ್ರದೀಪ್‌ನಿಂದ ಬಯಲಾಗಿದ

ಇದೇ ವೇಳೆ, ಕೋಸ್ಪಲ್ ಕಂಪೆನಿಯ ಎನ್‌ಎಲ್‌ಎಫ್‌ಟಿ ಜೊತೆ 1.17 ಕೋ ರೂಪಾಯಿ ನೀಡುವ ಒಪ್ಪಂದವನ್ನೂ ಮಾಡಿಕೊಂಡಿತ್ತು. ಈ ಪೈಕಿ ಮೊದಲ ಕಂತ 20 ಲಕ್ಷ ರೂಪಾಯಿಗಳನ್ನು ಬಿ.ಪಿ. ರ ಎಂಬಾತ ನೀಡಿದ್ದು, ಕಾಂಗ್ರೆಸ್ ಮುಖಂ ದೇವಬೃತ ಕಲ್ಯೆ ಉಪಸ್ಥಿತಿಯಲ್ಲಿ ಈ ವ್ಯವಹಾ ನಡೆದಿತ್ತು. ಅದೂ ನಡೆದದ ಶಾಸಕರ ಭವನದ ಪ್ರತಿಪ ಸದಸ್ಯರಿಗೆ ನೀಡುವ ಹಾಸ್ಟೆಲ ನಂಬರ್ 1ರಲ್ಲಿ. ಅದರಲ್ಲಿ 11 ಸಾವಿರ ರೂಪಾಯಿಂ ದೇವಬೃತ ತನ್ನ ಕಮಿಷನ ಎಂದು ತನ್ನ ಬ ಇಟ್ಟುಕೊಳ್ಳುತ್ತಾನೆ.

ಎರಡನೇ ಕಂತು 22 ಲ ರೂಪಾಯಿಗಳನ್ನು ಅಗರ್ತಲಾದಲ್ಲಿ ಇರುವ ಸಾರಿಗೆ ಭವನದ ಮುಂಭಾಗದಲ್ಲಿ ನೀಡಲಾಯಿತು. ಈ ಹ ಎರಡು ಹಂತಗಳಲ್ಲಿ ಬಾಂಗ್ಲಾ ದೇಶ ರವಾನೆಯಾಯಿತು. 25 ಲಕ್ಷ ರೂ.ಗ ಮೂರನೇ ಕಂತನ್ನೂ ಸಾರಿಗೆ ಭವನದ ಮುಂಭಾಗದಲ್ಲಿ ನೀಡಲಾಯಿತು. ಇದರಲ್ಲಿ ಧನು ಕಲ್ಯೆ ಇದರಲ್ಲಿ 10 ಸಾವಿರ ರೂಪಾಯಿ ತನ ಸಂಭಾವನೆಯಾಗಿ ಪಡೆದುಕೊಂಡ. ಇನ್ನೂ 2 ಲಕ್ಷಗಳ ನಾಲ್ಕನೇ ಕಂತನ್ನು ಬಾಂಗ್ಲಾ ವ್ಯವಸ್ಥಿತವಾಗಿ ಕಳುಹಿಸಿಕೊಡಲಾಯಿತು

ಪುಟ 15

ಜನಶಕ್ತಿ
ಕನ್ನಡ ವಾರಪತ್ರಿಕೆ

ತ್ರಿಪುರಾ ವಿದ್ಯಮಾನ........

ಪುಟ 14ರಿಂದ

ಇದರಲ್ಲಿ ಯಾರೂ ಕಮಿಷನ್ ಪಡೆಯಲಿಲ್ಲ. ಐದನೇ ಕಂತು ಬಟವಾಡೆಯಾಗುತ್ತಿದ್ದಾಗ ಜೂನ್ 16ರಲ್ಲಿ ಪೊಲೀಸರು ನಡೆಸಿದ ಕ್ಷಿಪ್ರ ದಾಳಿಯಲ್ಲಿ ಆರೋಪಿಗಳು ಅಕ್ರಮ ಹಣದ ಜತೆ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಈ ಹಣವನ್ನು ಕೋಸ್ಟಲ್ ಕಂಪೆನಿಯ ಬಿ.ಪಿ. ರವಿ ಎಂಬಾತನೇ ನೀಡಿದ್ದು ಎಂಬುದನ್ನು ಬಂಧಿತ ಆರೋಪಿಗಳು ಸ್ಪಷ್ಟಪಡಿಸಿದ್ದಾರೆ.

ಧನು ಹೇಳಿಕೆ ಪ್ರಕಾರ, ಎನ್‌ಎಲ್‌ಎಫ್‌ಟಿಯ ಇನ್ನೊಬ್ಬ ನಾಯಕ ಪರಿಮಳ್ ದೇವ್‌ಬರ್ಮಾ ಧನುಗೆ 60 ಸಾವಿರ ನೀಡಿ ಬೈಕ್ ಖರೀದಿಸುವಂತೆ ಸೂಚಿಸಿದ್ದ. ಅದರಂತೆ ಸೆಕೆಂಡ್ ಹ್ಯಾಂಡ್ ಬೈಕ್ ಖರೀದಿಸಿ ಮೋಹನ್ ಕಲ್ಯೆ ಮನೆಯಲ್ಲಿ ಇಟ್ಟಿದ್ದ. ಈ ಮಧ್ಯೆ, ವಿಶ್ವಮೋಹನ್, ಪರಿಮಳ್ ಮೂಲಕ ಆತನಿಗೆ 10 ಲಕ್ಷ ರೂಪಾಯಿಗಳ ನಕಲಿ ಭಾರತೀಯ ನೋಟುಗಳನ್ನು ಪೂರೈಸಿದ್ದ. ಇದನ್ನು ಮಾರ್ಕೆಟ್‌ನಲ್ಲಿ ಚಲಾವಣೆ ಮಾಡುತ್ತಿದ್ದ ಸಂದರ್ಭದಲ್ಲಿ ಬುದ್ಧಿಜೋಯ್ ಮತ್ತು ಚರಣ್‌ಜೋಯ್ ಪೊಲೀಸರ ವಶವಾಗಿದ್ದರು. ಬುದ್ಧಿಜೋಯ್ ಪೊಲೀಸ್ ಕಸ್ಟಡಿಯಿಂದ ತಪ್ಪಿಸಿ ಪರಾರಿಯಾಗಿದ್ದ. ಬಳಿಕ ಧನು ಕಲ್ಯೆಯನ್ನು ಭೇಟಿಯಾಗಿದ್ದ. ಆಗ ಧನು ಆತನನ್ನು ಎನ್‌ಎಲ್‌ಎಫ್‌ಟಿಗೆ ಸೇರಿಸಿ ಬಾಂಗ್ಲಾಕ್ಕೆ ಕಳುಹಿಸಿದ್ದ.

ಶರಣಾಗತಿ ಎಂಬ ಪ್ರಹಸನ

ಪ್ರದೀಪ್ ಕಲ್ಯೆನ ತಪ್ಪೊಪ್ಪಿಗೆಯಲ್ಲಿ ಮತ್ತೊಂದು ಮಹತ್ವದ ಅಂಶವೂ ಹೊರಬಿದ್ದಿದೆ. ಎನ್‌ಎಲ್‌ಎಫ್‌ಟಿ ಮತ್ತೆ ಪುನರುಜ್ಜೀವನಗೊಳಿಸಲು ಹೊಸ ತಂತ್ರವೊಂದನ್ನು ಹೆಣೆದಿರುವ ವಿಷಯ ಈತ ಪೊಲೀಸರ ಮುಂದೆ ಬಿಚ್ಚಿಟ್ಟಿದ್ದಾನೆ. ಕಳೆದ ಫೆಬ್ರವರಿ ಸಂದರ್ಭದಲ್ಲಿ ವಿವಿಧ ಅಪರಾಧ ಕೃತ್ಯಗಳಿಗೆ ಬೇಕಾದವನಾಗಿದ್ದ ಪರಿಮಳ್ ದೇಬ್‌ಬರ್ಮಾ ತಲೆತಪ್ಪಿಸಿಕೊಂಡು ಬಾಂಗ್ಲಾಕ್ಕೆ ಪಲಾಯನ ಗೈಯ್ಯುವಲ್ಲಿ ಯಶಸ್ವಿಯಾಗುತ್ತಾನೆ. ಹಾಗೆ ಪರಾರಿಯಾದ ಈತ ವಿಶ್ವಮೋಹನ್ ಜೊತೆ ಸಂಪರ್ಕ ಸಾಧಿಸುತ್ತಾನೆ. ಅಲ್ಲಿಂದ ಎನ್‌ಎಲ್‌ಎಫ್‌ಟಿಯ ಕೇಂದ್ರ ಕಚೇರಿಗೆ ಕರೆದೊಯ್ದು ವಿಶ್ವಮೋಹನ್ ಚಿತ್ತಗಾಂಗ್‌ನಲ್ಲಿರುವ ಐದು ಮಹಡಿಯ ಕಟ್ಟಡವೊಂದರಲ್ಲಿ ನೆಲೆ ತೋರಿಸುತ್ತಾನೆ. ಮರುದಿನ ಎನ್‌ಎಲ್‌ಎಫ್‌ಟಿಯ ಪ್ರಮುಖ ಇಬ್ಬರು ನಾಯಕರಾದ ಪಂಡಿತ್ ದೇವ್‌ವರ್ಮಾ ಆಲಿಯಾಸ್ ಪ್ಯಾಂಥರ್ ಮತ್ತು ಉಪೇಂದ್ರ ದೇವ್‌ವರ್ಮಾರನ್ನು ಭೇಟಿಯಾಗುತ್ತಾರೆ. ನಾಲ್ಕು ಗಂಟೆಗಳ ಸುದೀರ್ಘ ಸಭೆಯಲ್ಲಿ ಶರಣಾಗತಿಯ ಸೂತ್ರವೊಂದು ತಯಾರಾಗುತ್ತದೆ.

ಶರಣಾಗತಿ ಎಂಬ ಕುತಂತ್ರ

ಐದು ಪ್ರಮುಖ ಕಾರ್ಯಕರ್ತರು ಶರಣಾಗತಿಯಾಗುವ ತಂತ್ರವೊಂದನ್ನು ಇಲ್ಲಿ ಹೆಣೆಯಲಾಗುತ್ತದೆ. ಈ ಮೂಲಕ ಜೈಲಿನಲ್ಲಿರುವ ಎನ್‌ಎಲ್‌ಎಫ್‌ಟಿಯ ನಾಯಕರನ್ನು ಭೇಟಿ ಮಾಡುವುದು, ಹಣ ಸಂಗ್ರಹ ಹಾಗೂ ಮತ್ತಷ್ಟು ವಿಧ್ವಂಸಕ ಕೃತ್ಯಗಳಿಗೆ ಯೋಜನೆ ರೂಪಿಸುವುದು ಶರಣಾಗತಿಯ ಹಿಂದಿನ ಪ್ರಮುಖ ಉದ್ದೇಶ. ಈ ಪ್ರಸ್ತಾಪವನ್ನು ಎಲ್ಲರೂ ಒಪ್ಪುತ್ತಾರೆ. ಅದರಂತೆ ಬಾಂಗ್ಲಾ ಜೈಲಿನಲ್ಲಿರುವ ಲೀಬಾಂಗ್ ದೇವ್‌ವರ್ಮಾ ಶರಣಾಗುವ ಮೊದಲ ನಾಯಕ ಎಂಬುದನ್ನೂ ನಿರ್ಧರಿಸುತ್ತಾರೆ.

ಕಠಿಣ ಪರಿಸ್ಥಿತಿ

ತ್ರಿಪುರಾದ ವಿಮೋಚನಾ ಹೋರಾಟ 18 ರಿಂದ 20 ವರ್ಷಗಳವರೆಗೆ ನಡೆಯಲಿದೆ. ಆದರೆ, ಈಗಲೇ ಸಂಘಟನೆಗೆ ಬರುವ ಹಣಕಾಸಿನ ನೆರವು ನಿಂತುಹೋಗಿದೆ ಎಂಬುದನ್ನು ವಿಶ್ವಮೋಹನ್ ಕಾರ್ಯಾಚರಣೆ ವೇಳೆ ಹೇಳಿದ್ದ ಎಂಬುದನ್ನು ಧನು ತನ್ನ ತಪ್ಪೊಪ್ಪಿಗೆಯಲ್ಲಿ ಪೊಲೀಸರಿಗೆ ತಿಳಿಸಿದ್ದಾನೆ.

ಅಲ್ಲದೆ, ಉಲ್ಫಾದಿಂದ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರ ನೆರವನ್ನು ಎನ್‌ಎಲ್‌ಎಫ್‌ಟಿ ಈ ಸಂದರ್ಭದಲ್ಲಿ ಪಡೆದುಕೊಂಡಿರುವುದನ್ನು ಆತ ದೃಢಪಡಿಸುತ್ತಾನೆ. ಇದರಲ್ಲಿ 300 ಎ.ಕೆ. ರೈಫಲ್‌ಗಳು ಇರುತ್ತವೆ. ಅಷ್ಟರಲ್ಲೇ ಎಟಿಟಿಎಫ್‌ನಿಂದ 200 ಎ.ಕೆ. ರೈಫಲ್‌ಗಳ ಖರೀದಿ ವ್ಯವಹಾರ ನಡೆದಿರುತ್ತದೆ. ಇದರ ಜೊತೆಗೆ ಮಣಿಪುರ ಮೂಲದ ನಾಲ್ಕು ಉಗ್ರಗಾಮಿ ಸಂಘಟನೆಗಳು 25 ಕೋಟಿಯ ಸಾಲದ ಪ್ರಸ್ತಾಪವನ್ನು ಮುಂದಿಟ್ಟಿರುತ್ತದೆ. ಒಡಂಬಡಿಕೆಯಂತೆ ಮುಂದಿನ ಐದು ವರ್ಷಗಳಲ್ಲಿ ಸಾಲ ತೀರಿಸುವುದು ಹಾಗೂ ಆಫೀಸರ್ ರ್‍ಯಾಂಕಿನ ಯುವಕರಿಗೆ ತ್ರಿಪುರಾದಲ್ಲಿ ಸಶಸ್ತ್ರ ತರಬೇತಿ ನೀಡುವುದು ಸಾಲದ ಪ್ರಮುಖ ಷರತ್ತು.

ಈ ಷರತ್ತು ಈಡೇರಿಕೆಗೆ ಬಾಂಗ್ಲಾ ದೊಡ್ಡ ಅಡ್ಡಿಯಾಗಿತ್ತು. ಶಸ್ತ್ರಾಸ್ತ್ರ ತರಲು ಇದ್ದ ರಹದಾರಿಯೂ ಮುಚ್ಚಲಾಗಿತ್ತು. ಅಲ್ಲದೆ, ಉಗ್ರಗಾಮಿ ಚಟುವಟಿಕೆ ವಿರುದ್ಧ ಬಾಂಗ್ಲಾ ಕೈಗೊಂಡ ದಿಟ್ಟ ಕ್ರಮಗಳು ಸಂಘಟನೆಗೆ ತೊಡಕಾಯಿತು. ಅನಿವಾರ್ಯವಾಗಿ ಅವರು ತಮ್ಮ ಕಾರ್ಯಚಟುವಟಿಕೆಯ ಕೇಂದ್ರವನ್ನು ಬಾಂಗ್ಲಾದಿಂದ ಮ್ಯಾನ್ಮಾರ್‌ಗೆ ಸ್ಥಳಾಂತರಗೊಳಿಸಿದ್ದಾರೆ.

ನರಮೇಧಕ್ಕೆ ತಯಾರಿ

ತ್ರಿಪುರಾದ ಪೂಜಾ ಹಬ್ಬದ ಮುಂಚೆ ಸರಣಿ ಬಾಂಬ್ ಸ್ಫೋಟ ನಡೆಸುವುದು ಎನ್‌ಎಲ್‌ಎಫ್‌ಟಿಯ ಮೊದಲ ಪ್ರಮುಖ ಹೆಜ್ಜೆ. ರಾಜ್ಯದಲ್ಲಿ ಮತ್ತೊಂದು ಸುತ್ತಿನ ನರಮೇಧ ನಡೆಸುವುದು, ಈ ಮೂಲಕ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಯನ್ನು ದಿಕ್ಕಾಪಾಲು ಮಾಡುವುದು. ಈ ಕೃತ್ಯಕ್ಕಾಗಿ ವಿಶ್ವಮೋಹನ್ ಧನು ಕಲ್ಯೆಗೆ ಈ ಜವಾಬ್ದಾರಿ ವಹಿಸಿಕೊಡುತ್ತಾನೆ. ಈ ಸ್ಫೋಟದ ಮೂಲಕ ಎನ್‌ಎಲ್‌ಎಫ್‌ಟಿ ಈಗಲೂ ಸಕ್ರಿಯವಾಗಿದೆ, ಸದೃಢವಾಗಿದೆ ಎಂಬ ಸಂದೇಶವನ್ನು ನೀಡುವುದು ಇವರ ಉದ್ದೇಶ. ಇದಕ್ಕಾಗಿ ಪರಿಮಳ್ ಮತ್ತು ಧನು ಟಿಎನ್‌ಟಿ ಸ್ಫೋಟಕಗಳನ್ನು ಬಾಂಗ್ಲಾದ ತಮ್ಮ ಕೇಂದ್ರ ಕಚೇರಿಯಿಂದ ತರಲು ಯೋಜನೆ ಮಾಡುತ್ತಾರೆ. ಅಗರ್ತಲಾದಲ್ಲಿ ಈ ಸ್ಫೋಟಕಗಳನ್ನು ಶೇಖರಿಸಲು ಸೂಕ್ತ ಮನೆ ದೊರಕದ ಹಿನ್ನೆಲೆಯಲ್ಲಿ ಇದು ವಿಳಂಬಗೊಳ್ಳುತ್ತದೆ. ಇದೆಲ್ಲವೂ ಧನು ಪೊಲೀಸರ ಮುಂದೆ ನೀಡಿದ ತಪ್ಪೊಪ್ಪಿಗೆಯ ಹೇಳಿಕೆ. ಒಂದು ಹಂತದಲ್ಲಿ ನ್ಯಾಯಾಧೀಶರ ಮುಂದೆ ಈ ಹೇಳಿಕೆ ನೀಡಲು ಧನು ಸಮ್ಮತಿಸುತ್ತಾನೆ. ಆದರೆ, ಕೋರ್ಟ್‌ಗೆ ಹಾಜರಾದಾಗ ಈ ಹೇಳಿಕೆ ನೀಡಲು ನಿರಾಕರಿಸುತ್ತಾನೆ.

ಗಂಭೀರ ಆತಂಕ

ಜೂನ್‌ನಲ್ಲಿ ಸಭೆ ಸೇರಿದ ಸಿಪಿಐ(ಎಂ)ನ ತ್ರಿಪುರಾ ರಾಜ್ಯ ಸಮಿತಿ ಈ ಬಗ್ಗೆ ಗಂಭೀರ ವಿಚಾರ ವಿಮರ್ಶೆ ನಡೆಸಿತು. ಕಾಂಗ್ರೆಸ್ ನಾಯಕರೊಬ್ಬರು ಹಾಗೂ ಕಾಂಗ್ರೆಸ್‌ನ ಮಿತ್ರಪಕ್ಷವಾದ ಐಎನ್‌ಪಿಟಿಯ ನಾಯಕರೊಬ್ಬರು ಇಂಥ ದೇಶವಿರೋಧಿ ವಿಧ್ವಂಸಕ ಕೃತ್ಯದಲ್ಲಿ ತೊಡಗಿದ್ದಾರೆ ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ ಎಂಬುದನ್ನು ರಾಜ್ಯ ಕಾರ್ಯದರ್ಶಿ ಬಿಜನ್‌ಧರ್ ಮತ್ತು ಕಾರ್ಯದರ್ಶಿ ಮಂಡಳಿ ಸದಸ್ಯ ಗೌತಮ್ ದಾಸ್ ಜಂಟಿ ಹೇಳಿಕೆಯಲ್ಲಿ ಹೇಳಿದ್ದಾರೆ.

ದೇಶವಿರೋಧಿ ಉಗ್ರರನ್ನು ಶರಣಾಗತಿ ನಾಟಕದಲ್ಲಿ ಸೇರಿಸಿ ಅವರಿಂದ ಮತ್ತಷ್ಟು ಹೀನಾಯ ಕೃತ್ಯ ನಡೆಸಿ ರಾಜಕೀಯ ಲಾಭ ಪಡೆದುಕೊಳ್ಳುವ ಹೊಂಚು ರೂಪಿಸಿದ್ದು ಅಮಾನವೀಯ ಎಂದು ಉಭಯ ನಾಯಕರು ಟೀಕಿಸಿದ್ದಾರೆ.

2013ರಲ್ಲಿ ನಡೆಯಲಿರುವ ಮುಂದಿನ ಚುನಾವಣೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ಸರಣಿ ಅಪರಾಧ ಕೃತ್ಯಗಳಿಗೆ ಯೋಜನೆ ರೂಪಿಸಲಾಗಿದೆ. ಇದನ್ನು ಸ್ವತಃ ಬಂಧಿತ ಆರೋಪಿ ಧನು ಕಲ್ಯೆ ತಪ್ಪೊಪ್ಪಿಕೊಂಡಿದ್ದಾನೆ. ಬಾಂಗ್ಲಾದ ನಾಯಕರ ತ್ರಿಪುರಾ ಭೇಟಿ ವೇಳೆ ಸಿಪಿಐ(ಎಂ) ಮೇಲೆ ಕಾಂಗ್ರೆಸ್ ನಾಯಕರು ಮಾಡಿದ ಆರೋಪ ಈಗ ಅವರಿಗೆ ತಿರುಗುಬಾಣವಾಗಿದೆ. ಇಂತಹ ಕೃತ್ಯಗಳನ್ನು ಸರ್ಕಾರ ಮತ್ತು ಸಿಪಿಐ(ಎಂ) ವಿಫಲಗೊಳಿಸುವುದು. ಜನತೆ ಈ ಎಲ್ಲ ಘಟನೆಗಳನ್ನು ಗಮನದಲ್ಲಿಟ್ಟುಕೊಂಡಿದ್ದಾರೆ. ಚುನಾವಣೆಯಲ್ಲಿ ಈ ಬಗ್ಗೆ ಅಂತಿಮ ನಿರ್ಣಯ ನೀಡಲಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಮರೆಯಲಿ ಹ್ಯಾಂಗ ಮಾವೋತ್ಸೆ ತುಂಗ...

ಪುಟ 16 ರಿಂದ

ಕಣದಲ್ಲಿ ಭತ್ತ ಬಡಿಯುತ್ತಿದ್ದಾಗ ಒಮ್ಮೆ ಜೋರಾಗಿ ಮಳೆ ಬಂತು. ಆಗ ಮನೆಯ ಬಳಿ ಇದ್ದ ಬಡ ಮಹಿಳೆಯ ಕುಟುಂಬದ ಭತ್ತವೂ ತೊಂದರೆಗೆ ಒಳಗಾಯಿತು. ಮಾವೋರವರು ತಮ್ಮ ಮನೆಯ ಭತ್ತವನ್ನು ರಕ್ಷಿಸಿಕೊಳ್ಳುವ ಮೊದಲು ಆ ಬಡ ಮಹಿಳೆಯ ಭತ್ತವನ್ನು ರಕ್ಷಿಸಿದರು. ನಂತರ ಅವರ ತಂದೆಯಿಂದ ಚೆನ್ನಾಗಿ ಬೈಸಿಕೊಂಡರು ಕೂಡ.

ತಮ್ಮ ಮನೆಯ ಸನ್ನಿವೇಶವನ್ನು ಮಾವೋರವರು 1936ರಲ್ಲಿ ಎಡ್ಗರ್ ಸ್ನೋ ಎಂಬ ಅಮೇರಿಕದ ಪತ್ರಕರ್ತನಿಗೆ ನೀಡಿದ ಸಂದರ್ಶನವೊಂದರಲ್ಲಿ ಹೀಗೆ ವಿಶ್ಲೇಷಿಸಿದ್ದಾರೆ. " ನಮ್ಮ ಮನೆಯಲ್ಲಿ ಎರಡು ಪಕ್ಷಗಳಿದ್ದವು. ಒಂದು ನಮ್ಮ ತಂದೆ–ಆಳುವ ಶಕ್ತಿ. ವಿರೋಧಿ ಬಣದಲ್ಲಿ ನಾನು, ನಮ್ಮ ತಾಯಿ, ನನ್ನ ತಮ್ಮ ಮತ್ತು ಕೆಲವೊಮ್ಮೆ ನಮ್ಮ ಕೆಲಸದವನು. ಈ ವಿರೋಧಿ ಸಂಯುಕ್ತ ರಂಗದಲ್ಲಿ ಒಂದು ಭಿನ್ನಾಭಿಪ್ರಾಯವಿತ್ತು. ನಮ್ಮ ತಾಯಿ ಪರೋಕ್ಷ ಧಾಳಿಯ ನೀತಿಯನ್ನು ಪ್ರತಿಪಾದಿಸುತ್ತಿದ್ದರು. ಆಳುವ ಶಕ್ತಿಯ ವಿರುದ್ಧ ಬಹಿರಂಗ ದಂಗೆಯ ಪ್ರಯತ್ನಗಳನ್ನು ಹಾಗೂ ಭಾವನೆಗಳ ಒರಟು ಅಭಿವ್ಯಕ್ತಿಯನ್ನು ಟೀಕಿಸುತ್ತಿದ್ದರು. ಇದು ಚೀನೀ ಪದ್ಧತಿಯಲ್ಲ ಎಂದು ಹೇಳುತ್ತಿದ್ದರು.

ಹೀಗೆ ಮಾವೋರವರು ಒಂದು ಕಡೆ ತಮ್ಮ ತಾಯಿಯಿಂದ ಜನರ ಕಷ್ಟ ದುಃಖಗಳಿಗೆ ಮರುಗುವ ಹಾಗೂ ಇದ್ದದ್ದನ್ನು ಹಂಚಿ ತಿನ್ನುವ ಸ್ವಭಾವವನ್ನೂ ಬೆಳೆಸಿಕೊಂಡರು. ಮತ್ತೊಂದು ಕಡೆ ತಂದೆಯ ದಬ್ಬಾಳಿಕೆಯ ವಿರುದ್ಧ ಪ್ರತಿಭಟನೆ ಎರಡೂ ಅವರ ವ್ಯಕ್ತಿತ್ವದಲ್ಲಿ ಸಮ್ಮಿಳನಗೊಂಡಿತು. ಮನೆಯೊಳಗೆ, ಮುಂದೆ ಶಾಲೆಗಳಲ್ಲಿ ಈ ಪ್ರವೃತ್ತಿಗಳೆರಡೂ ಪ್ರಕಟವಾಗುತ್ತಾ ಹೋದವು. ಮಹಿಳೆಯರ ಸಂಕಷ್ಟಗಳ, ಅಸಮಾನತೆಯ ಬಗ್ಗೆ ಅವರ ಭಾವನೆಗಳೂ ಮತ್ತಷ್ಟು ಗಾಢವಾಗುತ್ತಾ ನಡೆದವು.

(ಮುಂದುವರಿಯುವುದು)



ಚೀನಾದಲ್ಲಿ ಮಾವೋ ಪ್ರತಿಮೆ ಮುಂದೆ ನಿಯೋಗದಲ್ಲಿ ಲೇಖಕರಾದ ಜಿ.ಎನ್. ನಾಗರಾಜ್


ಮರೆತೇನೆಂದರೆ ಮರೆಯಲಿ ಹ್ಯಾಂಗ... ಮಾವೋತ್ಸೆ ತುಂಗ...

ಇತ್ತೀಚೆಗೆ ಜುಲೈ 8 ರಿಂದ 18, 2012 ರವರೆಗೆ ಚೀನಾ ಕಮ್ಯುನಿಸ್ಟ್ ಪಕ್ಷದ ಆಹ್ವಾನದ ಮೇಲೆ ಸಿಪಿಐ(ಎಂ) ಪಕ್ಷ ಹತ್ತು ರಾಜ್ಯಗಳಿಂದ ರಾಜ್ಯಕ್ಕೆ ಒಬ್ಬರಂತೆ ಹತ್ತು ಜನರ ನಿಯೋಗವನ್ನು ಚೀನಾ ದೇಶದ ಅಧ್ಯಯನ ಮಾಡಲು ಕಳುಹಿಸಿತು. ಈ ನಿಯೋಗದಲ್ಲಿ ಕರ್ನಾಟಕದ ಪರವಾಗಿ ನಾನು ಹತ್ತು ದಿನದ ಈ ಅಧ್ಯಯನ ಪ್ರವಾಸದ ಭಾಗವಾಗಿದ್ದೆ. ನಾವು ಎರಡು ಹಳ್ಳಿಗಳಿಗೆ ಭೇಟಿ ನೀಡಿ ಅಲ್ಲಿಯ ಗ್ರಾಮೀಣ ಅಭಿವೃದ್ಧಿ, ಕೃಷಿ ಬೆಳವಣಿಗೆ, ಗ್ರಾಮಗಳಲ್ಲಿ ಆಧುನಿಕ ಕೈಗಾರಿಕೆಗಳ ಅಪಾರ ಬೆಳವಣಿಗೆ ಎಂಬ ಚೀನಾಕ್ಕೆ ವಿಶಿಷ್ಟವಾದ ಪ್ರಕ್ರಿಯೆ, ಇವುಗಳನ್ನು ಅಧ್ಯಯನ ಮಾಡಿದೆವು. ಜೊತೆಗೆ ಚೀನಾದ ಹಣಕಾಸು ರಾಜಧಾನಿಯಾದ ಶಾಂಘೈನಲ್ಲಿರುವ ರಾಷ್ಟ್ರ ಮಟ್ಟದ ಆಡಳಿತ ನಾಯಕತ್ವ ಸಂಸ್ಥೆಯಲ್ಲಿ ಚೀನಾದ ಸಾಮಾಜಿಕ ಹಾಗೂ ಆಡಳಿತ ಪರಿಸ್ಥಿತಿ ಮತ್ತು ಎದುರಿಸುತ್ತಿರುವ ಸವಾಲುಗಳ ಬಗ್ಗೆ ತರಬೇತಿ, ರಾಜಧಾನಿ ಬೀಜಿಂಗ್‌ನಲ್ಲಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಶಾಲೆಯಲ್ಲಿ ಪಕ್ಷದ ಕಾರ್ಯ ವಿಧಾನದ ಅಧ್ಯಯನ ಮಾಡಿದೆವು. ಆದರೆ ಮಾವೋ ಹುಟ್ಟಿದ ಹಳ್ಳಿಗೆ, ಅವರು ಚಳುವಳಿ ಕಟ್ಟಿದ ರಾಜ್ಯ ಹುನಾನ್ ಗೆ ಭೇಟಿ ನೀಡಲು ಸಿಕ್ಕ ಅವಕಾಶ ನಮ್ಮ ನಿಯೋಗಕ್ಕೆ ಸಿಕ್ಕ ಅಪೂರ್ವ ಅವಕಾಶ. ಚೀನಾದ ಅಧ್ಯಯನಕ್ಕೆ ಸಂಬಂಧಿಸಿದ ಈ ಲೇಖನ ಮಾಲೆಯನ್ನು ಮಾವೋರವರು ಕಟ್ಟಿದ ಕ್ರಾಂತಿಕಾರಿ ಚಳುವಳಿಯ ಪರಿಚಯದಿಂದಲೇ ಆರಂಭಿಸುತ್ತಿದ್ದೇನೆ.



ಜಿ.ಎನ್ ನಾಗರಾಜು

ಸುತ್ತ ಮುತ್ತೆಲ್ಲ ಬೆಟ್ಟ ಗುಡ್ಡಗಳು. ನಡುವೆ ಹರಿವ ಹೊಳೆ ಹಳ್ಳಗಳು. ಇವುಗಳ ನಡುವೆ ಭತ್ತದ ಗದ್ದೆಯಲ್ಲಿ ಒಬ್ಬ ಆರು ವರ್ಷದ ಬಾಲಕ ಕಳೆ ಕೀಳುತ್ತಿದ್ದಾನೆ. ಮನೆಯಲ್ಲಿ ದನಗಳಿಗೆ ಮೇವು ಹಾಕುವುದು, ಹಂದಿಗಳ, ದನಗಳ ಸಗಣಿ ಬಳಿದು ಹೊಲ ಗದ್ದೆಗಳಿಗೆ ಹಾಕುವುದು ಹೀಗೆ ಆ ಸಣ್ಣ ವಯಸ್ಸಿಗೇ ಹತ್ತು ಹಲವು ಕೆಲಸೆಗಳು, ಮುಂದೆ ಏಳನೇ ವಯಸ್ಸಿನಲ್ಲಿ ಹಳ್ಳಿಯಲ್ಲಿದ್ದ ಶಾಸ್ತ್ರೀಯ ವಿದ್ಯಾಭ್ಯಾಸದ ಶಾಲೆಗೆ ಸೇರಿದರೂ ಕೂಡ ಶಾಲೆಗೆ ಹೋಗುವ ಮೊದಲು ಹಾಗೂ ನಂತರ ಈ ಎಲ್ಲಾ ಕೃಷಿಯ ಕೆಲಸಗಳನ್ನು ಮಾಡಲೇಬೇಕಿತ್ತು. ಸ್ವಲ್ಪ ಗಣಿತವನ್ನು ಕಲಿತ ಕೂಡಲೇ ತಂದೆ ನಡೆಸುತ್ತಿದ್ದ ಭತ್ತದ ವ್ಯಾಪಾರದ ಲೆಕ್ಕ



ಬರೆಯಬೇಕಾಗಿತ್ತು. ಹೀಗೆ ಎಡೆಬಿಡದೆ ದುಡಿಯಬೇಕಾಗಿ ಬಂದ ಬಾಲಕನೇ ಚೀನಾದ ಹುನಾನ್ ಎಂಬ ಪ್ರಾಂತ್ಯದ (ಪ್ರಾಂತ್ಯ ಎಂದರೆ ನಮ್ಮ ದೇಶದ ರಾಜ್ಯಗಳಿಗೆ ಸಮನಾದದ್ದು) ಶಾವೋಶಾನ್ ಎಂಬ ಹಳ್ಳಿಯಲ್ಲಿ 1893ರ ಡಿಸೆಂಬರ್ 26ರಂದು ಹುಟ್ಟಿದ, ಮುಂದೆ ಚೀನಾದ ಕ್ರಾಂತಿಯ ದಾರಿಯನ್ನು ರೂಪಿಸಿದ ಮಹಾನ್ ನಾಯಕ ಮಾವೋ ತ್ಸೆ ತುಂಗ್.

ಶಾವೋಶಾನ್ ನಲ್ಲಿ ಇಂದಿಗೂ ಮೂಲ ರೂಪದಲ್ಲಿ ಕಾದಿರಿಸಲಾಗಿರುವ ಮಾವೋರವರ ಮನೆಯನ್ನು ನೋಡಿದರೆ ಸಾಕು ಅದೇನು ಬಡ ರೈತನ ಮನೆಯಲ್ಲವೆಂಬುದು ಎದ್ದು ಕಾಣುತ್ತದೆ. ಮೂರು ಪ್ರತ್ಯೇಕ ಮಲಗುವ ಕೊಠಡಿಗಳೂ ಸೇರಿದಂತೆ 13 ಕೊಠಡಿಗಳ ಮನೆ ಅದು. ಮನೆಯ ಮುಂದೆ ತಾವರೆಯ ಬಳ್ಳಿ ಹಬ್ಬಿದ ಎರಡು ನೀರು ತುಂಬಿದ ಕೊಳಗಳು, ಮನೆಯ ಹಿಂದೆ ಮರಗಿಡಗಳಿಂದ ಕೂಡಿದ ಗುಡ್ಡ, ಮನೆಯ ಎರಡೂ ಬದಿಗಳಲಿ ಭತ್ತದ ಗದ್ದೆಗಳು. ಮನೆಯ ಒಳಗೇ ಹಂದಿಗಳನ್ನು ಹಾಗೂ ದನ, ಎಮ್ಮೆಗಳನ್ನು ಸಾಕುವ ಪ್ರತ್ಯೇಕ ಕೊಠಡಿಗಳಂತಹ ಭಾಗಗಳು.

ಇಡೀ ಮನೆ ಸುಡದ ಮಣ್ಣಿನ ಇಟ್ಟಿಗೆಗಳಿಂದ ಕಟ್ಟಿದ್ದು. ಮನೆಯ ಮೇಲ್ಛಾವಣಿ ನಮ್ಮ ಹಳ್ಳಿ ಮನೆಗಳ ನಾಡಹಂಚುಗಳಿಂದ ಮಾಡಿದ್ದು. ಮನೆಯ ಒಳಗೆ ಹಳೆಯ ಕಾಲದ ಕೃಷಿಯ ಹಾಗೂ ಮನೆಗೆಲಸದ



ಮಾವೋ ಊರು

ಉಪಕರಣಗಳು. ಇವೆಲ್ಲವೂ ಅಪಾರ ಶ್ರಮವನ್ನು ಬೇಡುವಂತಹವು. ಆದರೆ ಈ ಎಲ್ಲ ಕೆಲಸಗಳನ್ನೂ ಐದು ಜನರ ಕುಟುಂಬವೇ ಮಾಡಬೇಕಾಗಿತ್ತು.

ಮಾವೋರ ತಂದೆಯ ಹೆಸರು, ಮಾವೋ ಶುನ್ಸೆಂಗ್. ಮಾವೋ ಎಂಬುದು ಅವರ ಕುಲದ ಹೆಸರು. ನಮ್ಮ ಉತ್ತರ ಕರ್ನಾಟಕದ ಪದ್ಧತಿಯಂತೆ ಅಡ್ಡ ಹೆಸರು. ಆದರೆ ಇಲ್ಲಿನಂತೆ ಅಡ್ಡ ಹೆಸರು, ಹೆಸರಿನ ಕೊನೆಗೆ ಬರದೆ ಮೊದಲೇ ಬರುತ್ತದೆ. ಶಾವೋಶಾನ್ ಊರು ಮಾವೋ ಕುಲದವರ ಊರಾದ್ದರಿಂದ ಇಡೀ ಊರ ತುಂಬಾ ಮಾವೋಗಳೇ. ಈ ಹೆಸರಿನ ಚೀನೀ ಉಚ್ಚಾರ ಮಾವ್ ಎಂದು. ನಾವು ಮಾವೋ ತ್ಸೆ ತುಂಗ್ ಎಂದು ಕರೆಯುವ ಹೆಸರು ಮಾವ್ ಶೆ ಡುಂಗ್ ಎಂದಾಗುತ್ತದೆ.



ಮಾವೋ ಮನೆ – ಈಗಿನ ಸ್ಥಿತಿ

ಮಾವೋರ ತಂದೆ ಮೊದಲು ಒಬ್ಬ ಸಣ್ಣ ರೈತ. ಸಾಕಷ್ಟು ಸಾಲ ಸೋಲಗಳಾಗಿ ಜಮೀನು ಕಳೆದುಕೊಂಡು ಅವರು ಸೈನ್ಯವನ್ನು ಸೇರಿದರು. ಕೆಲಕಾಲದ ನಂತರ ಈ ಹಳ್ಳಿಗೆ ಬಂದು ನೆಲಸಿ ಸಣ್ಣ ಪುಟ್ಟ ವ್ಯಾಪಾರ ಮತ್ತಿತರ ಕೆಲಸಗಳನ್ನು ಮಾಡುತ್ತಾ ಕೂಡಿಸಿದ್ದ ಹಣದಿಂದ ಸ್ವಲ್ಪ ಜಮೀನು ಕೊಂಡುಕೊಂಡರು. ಮರಳಿ ರೈತರಾದರು. ಈ ಕಹಿ ಅನುಭವದಿಂದ ಹಣ ಉಳಿಸುವುದನ್ನೇ ಮುಖ್ಯವಾಗಿಸಿಕೊಂಡ ಅವರ ತಂದೆ ಮುಂದೆ ಸ್ಥಿತಿವಂತರಾದ ಮೇಲೂ ಅದನ್ನೇ ಮುಂದುವರೆಸಿದರು. ಹೆಚ್ಚು ಭೂಮಿಯನ್ನು ಕೊಂಡರೂ ಕೆಲಸ ಮಾಡಲು ಕೇವಲ ಒಬ್ಬ ಆಳನ್ನು ಮಾತ್ರ ತೆಗೆದುಕೊಂಡು ಉಳಿದಂತೆ ತನ್ನ ಹೆಂಡತಿ, ಮಕ್ಕಳನ್ನೇ ದುಡಿಸಿದರು. ತಾವು ಹೆಚ್ಚು ಭತ್ತದ ವ್ಯಾಪಾರಕ್ಕೆ ತೊಡಗಿದರು. ಅವರು ಬಹಳ ಕೋಪಿಷ್ಠರು ಹಾಗೂ ಮಕ್ಕಳಿಗೆ ಸಿಕ್ಕಾಪಟ್ಟೆ ಹೊಡೆಯುತ್ತಿದ್ದರು. ಆದ್ದರಿಂದ ಮನೆಯವರೆಲ್ಲ ಹೆದರಿ ಕೆಲಸ ಮಾಡುತ್ತಿದ್ದರು.

ಹೀಗೆ ತಂದೆ ಪಾಳೆಯಗಾರಿ ಸ್ವಭಾವದವರಾದರೆ ಮಾವೋರ ತಾಯಿ ದಯಾಳು, ಕರುಣಾಮಯಿ. ಎಲ್ಲವನ್ನೂ ಹಂಚಿಕೊಂಡು ಬದುಕುವ ಉತ್ತಮ ಸ್ವಭಾವ. ಬರಗಾಲದ ಸಮಯದಲ್ಲಿ ಬಡವರಿಗೆ ಮನೆಯಲ್ಲಿದ್ದ ಅಕ್ಕಿಯನ್ನೇ ಗಂಡನಿಗೆ ಕಾಣದಂತೆ ಕೊಡುವವರು. ಎಷ್ಟೋ ಬಾರಿ ಈ ವಿಷಯದಲ್ಲಿಯೇ ದಂಪತಿಗಳ ನಡುವೆ ಜಗಳ. ಮಾವೋರವರಿಗೆ ತಾಯಿಯ ಈ ಗುಣ ಚಿಕ್ಕಂದಿನಿಂದಲೇ ಇಳಿದು ಬಂತು. ಅವರಿನ್ನೂ ಎಂಟು-ಹತ್ತು ವರ್ಷದವರಿದ್ದಾಗಲೇ ಒಮ್ಮೆ ಮನೆಯ ಭತ್ತದ

ಪುಟ 15ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH